ಸಂಪುಟ: 05 ಸಂಚಿಕೆ: 144 ಪುಟಗಳು: 08 ಬುಧವಾರ 06 ಆಗಸ್ಟ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ನಿಮ್ಮ ಧ್ಯೇಯದಲ್ಲಿ ಯಶಸ್ವಿಯಾಗಲು, ನೀವು ನಿಮ್ಮ ಗುರಿಯ ಬಗ್ಗೆ ಏಕ ಮನಸ್ಸಿನ ಭಕ್ತಿ ಹೊಂದಿರಬೇಕು

# ಉದಯ ವಾಹಿನಿ
UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕಾಲೇಜು ಶುಲ್ಕ ವರ್ಗಾವಣೆಗೆ ಹೊಸ ಪೋರ್ಟಲ್

• ಉದಯವಾಹಿನಿ, ಬೆಂಗಳೂರು

ಸೀಟು ಹಂಚಿಕೆ ವೇಳೆ ಸಂಗ್ರಹಿಸಿದ ಶುಲ್ಕವನ್ನು ವಿದ್ಯಾರ್ಥಿಗಳು ಪ್ರವೇಶ ಪಡೆದ ಕಾಲೇಜುಗಳಿಗೆ ಒಂದೇ ಕಂತಿನಲ್ಲಿ (ಶೇ 100) ಪಾವತಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಂದಾಗಿದೆ. ಸೀಟು ಹಂಚಿಕೆ ವೇಳೆ ವಿದ್ಯಾರ್ಥಿಗಳು ಯಾವ ಕಾಲೇಜು ಹಾಗೂ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೋ, ಆ ಕಾಲೇಜು ಹಾಗೂ ಕೋರ್ಸ್‌ಗಳಿಗೆ ನಿಗದಿ ಮಾಡಿರುವ ಮೊತ್ತವನ್ನು ಕೆಇಎ ಖಾತೆಗೆ ಜಮಾ ಮಾಡುತ್ತಾರೆ. ನಂತರವೇ ಸೀಟು ಖಚಿತತೆಯ ಪತ್ರ ಡೌನ್‌ಲೋಡ್ ಮಾಡಿಕೊಂಡು ಆಯಾ ಕಾಲೇಜುಗಳಿಗೆ ಪ್ರವೇಶ ಪಡೆಯುತ್ತಾರೆ. ಪ್ರವೇಶ ಖಚಿತಪಡಿಸಿಕೊಂಡ ನಂತರ ಶೇ 80ರಷ್ಟು ಹಣವನ್ನು ಆಯಾ ಕಾಲೇಜುಗಳ ಖಾತೆಗೆ ವರ್ಗಾವಣೆ ಮಾಡಲಾಗುತ್ತಿತ್ತು. ನಂತರ ಆಯಾ ವಿಶ್ವವಿದ್ಯಾಲಯಗಳು ಪ್ರವೇಶ ಖಾತ್ರಿಪಡಿಸಿದ ನಂತರ ಉಳಿದ ಶೇ 20ರಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿತ್ತು.

## ಸರ್ಕಾರ ಕಟ್ಟಿ ಹಾಕಲು ಬಿಜೆಪಿ ಕಾರ್ಯತಂತ್ರ: ಆರ್.ಅಶೋಕ

• ಉದಯವಾಹಿನಿ, ಬೆಂಗಳೂರು

'ಕಾಂಗ್ರೆಸ್ ನೇತೃತ್ವದ ಸರ್ಕಾರದ ದುರಾಡಳಿತ, ಕಾಲ್ತುಳಿತದಿಂದ 11 ಮಂದಿ ಸಾವು, ರಸಗೊಬ್ಬರದ ಕೊರತೆ, ಬಿಬಿಎಂಪಿ ವಿಭಜನೆ ಸೇರಿ ಹಲವು ಜ್ವಲಂತ ವಿಷಯಗಳನ್ನು ಈ ಬಾರಿಯ ವಿಧಾನಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಲು ನಿರ್ಧರಿಸಲಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಅಧಿವೇಶನದಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಕುರಿತು ಬಿಜೆಪಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಮುಖ ಶಾಸಕರ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು. ಸದನದಲ್ಲಿ ಬಿಜೆಪಿ ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸಲಿದ್ದು, ಇದಕ್ಕಾಗಿ ಇದೇ 10ರಂದು ಎರಡೂ ಪಕ್ಷಗಳ ಸಮನ್ವಯ ಸಮಿತಿ ಸಭೆಯನ್ನು ಕರೆಯಲಾಗಿದೆ. ಸರ್ಕಾರವನ್ನು ಕಟ್ಟಿ ಹಾಕಲು ಕಾರ್ಯತಂತ್ರ ರೂಪಿಸಲಾಗುವುದು ಎಂದು ಹೇಳಿದರು. ಮಳೆಯಿಂದ ಬೆಳೆ ಹಾನಿ, ಬಿಬಿಎಂಪಿಯನ್ನು ಐದು ಭಾಗವಾಗಿ ವಿಭಜಿಸಿರುವುದು, ಖಜಾನೆ ಖಾಲಿ ಆಗಿರುವುದರಿಂದ ನೌಕರರಿಗೆ ಸಂಬಳ ಕೊಡಲಾಗದ ಸ್ಥಿತಿ ನಿರ್ಮಾಣವಾಗಿರುವುದನ್ನು ಪ್ರಸ್ತಾಪಿಸಲಾಗುವುದು ಎಂದರು. ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟನೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರೇ ದೂರುತ್ತಿದ್ದಾರೆ.

## ಮಾಲಿನ್ಯ ನಿಯಂತ್ರಣ ಮಂಡಳಿಗೆ ನರೇಂದ್ರ ನೇಮಕ: ನೋಟಿಸ್

• ಉದಯವಾಹಿನಿ, ಬೆಂಗಳೂರು

'ಮಳವಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನಾಗಿ ನೇಮಕ ಮಾಡಿ ಸಂಪುಟ ದರ್ಜೆ ಸ್ಥಾನಮಾನ ನೀಡಿ ಲಾಭದಾಯಕ ಹುದ್ದೆಗೆ ಅವಕಾಶ ಮಾಡಿ ಕೊಡಲಾಗಿದೆ' ಎಂದು ಆಕ್ಷೇಪಿಸಿ ಹೈಕೋರ್ಟ್‌ಗೆ ಮತ್ತೊಂದು ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಎಂ.ಶ್ರೇಯಸ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಇನ್ನಷ್ಟು ಅರ್ಜಿಗಳು ಇದೇ 13ರಂದು ವಿಚಾರಣೆಗೆ ನಿಗದಿಯಾಗಿವೆ. ಹಾಗಾಗಿ, ಈ ಅರ್ಜಿಯಲ್ಲೂ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ, ಬೇರೆ ಅರ್ಜಿಗಳೊಂದಿಗೆ ಸೇರ್ಪಡೆಗೊಳಿಸಿ ವಿಚಾರಣೆ ನಡೆಸಬೇಕು'

## ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ: ವಿಚಾರಣೆ ಆ.7ಕ್ಕೆ

• ಉದಯವಾಹಿನಿ, ಬೆಂಗಳೂರು

ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ವಿಚಾರಣಾ ಆಯೋಗ ಸಲ್ಲಿಸಿರುವ ವರದಿಯನ್ನು ರದ್ದುಗೊಳಿಸಬೇಕು' ಎಂದು ಕೋರಲಾದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಇದೇ 7ಕ್ಕೆ ಮುಂದೂಡಿದೆ. 'ಪ್ರಶ್ನಿಸಲಾಗಿರುವ ನ್ಯಾಯಮೂರ್ತಿ ಸುನಿಲ್ ಕುನ್ಹ ವರದಿಯನ್ನು ರದ್ದುಗೊಳಿಸಬೇಕು' ಎಂದು ಕೋರಿ ಡಿಎನ್‌ಎ ಎಂಟರ್‌ಟೈನ್ ಮೆಂಟ್ ನೆಟ್‌ವರ್ಕ್ಸ್ ನಿರ್ದೇಶಕ ಸುನಿಲ್ ಮ್ಯಾಥ್ಯೂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ನ್ಯಾ. ಕುನ್ಹ ವರದಿಯನ್ನು ಈತನಕ ನಮಗೆ ನೀಡಿಲ್ಲ. ಆದರೆ, ವರದಿಯು ಮಾಧ್ಯಮಗಳಲ್ಲಿ ಸೋರಿಕೆಯಾಗುತ್ತಿದೆ' ಎಂಬ ವಿಷಯದ ಅಂಶವನ್ನು ಪುನರುಚ್ಚರಿಸಿದರು. ವಿಚಾರಣೆಯನ್ನು ಇದೇ 7ಕ್ಕೆ ಮುಂದೂಡಲಾಗಿದೆ.

# ಎಸ್ಮಾ ಜಾರಿ ಹೈಕೋರ್ಟ್ ಛೀಮಾರಿ

## ಹೈಕೋರ್ಟ್ ಛೀಮಾರಿ ಬೆನ್ನಲ್ಲೇ ರಸ್ತೆಗಿಳಿದ ಸಾರಿಗೆ ಬಸ್‌ಗಳು



ಬಸ್‌ಗಳ ಸಂಚಾರ ಕೂಡಲೇ ಆರಂಭಕ್ಕೆ ಸೂಚನೆ

1 ಬಸ್ ಪ್ರಯಾಣಿಕರಿಗೆ ಗುಡ್‌ನ್ಯೂಸ್; ಸಾರಿಗೆ ನೌಕರರ ಮುಷ್ಕರ ಮುಂದೂಡಿಕೆ.

2 ಕೂಡಲೇ ಬಸ್‌ಗಳ ಸಂಚಾರ ಆರಂಭಿಸಲು ಸಂಘಟನೆಗಳ ಮುಖಂಡರು ಸೂಚನೆ.

3 ಬೆಂಗಳೂರಿನಲ್ಲಿ ಬಸ್ ಸಂಚಾರ ಎಂದಿನಂತೆ ಆರಂಭ.

**ಹೈಕೋರ್ಟ್ ಬಂಧನದ ಆದೇಶದ ಬಳಿಕ ಡ್ಯೂಟಿಗೆ ಹಾಜರ್..!**

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಎಸ್ಮಾ ಜಾರಿಗೊಂಡರೂ ಆದೇಶ ಧಿಕ್ಕರಿಸಿ ಮುಷ್ಕರ ಮಾಡುತ್ತಿರುವ ಸಾರಿಗೆ ನೌಕರರನ್ನು ಬಂಧಿಸುವಂತೆ ಹೈಕೋರ್ಟ್ ಆದೇಶ ಹೊರಡಿಸಿದ ಬೆನ್ನಲ್ಲಿಯೇ, ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಮುಖಂಡ ಅನಂತ ಸುಬ್ಬರಾವ್ ಅವರು ಸಾರಿಗೆ ನೌಕರರಿಗೆ ಮುಷ್ಕರ ಮೊಟಕುಗೊಳಿಸಿದ್ದಾಗಿ ತಿಳಿಸಿದ್ದಾರೆ. ಎಲ್ಲಾ ನೌಕರರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಿದ್ದು, ಮುಂದಿನ ಹೋರಾಟದ ದಿನಾಂಕ ಘೋಷಣೆ ಮಾಡುವುದಾಗಿ ತಿಳಿಸಿದ್ದಾರೆ. ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ ಸೇರಿ ನಾಲ್ಕೂ ನಿಗಮಗಳ ಸಾರಿಗೆ ನೌಕರರು ಇಂದಿನಿಂದ ಕರ್ತವ್ಯಕ್ಕೆ ಗೈರಾಗಿ ಸಾಮೂಹಿಕವಾಗಿ ಮುಷ್ಕರ ಹಮ್ಮಿಕೊಂಡಿದ್ದರು. ಆದರೆ, ಇದರಿಂದ ರಾಜ್ಯದ ಲಕ್ಷಾಂತರ ಜನ ಪ್ರಯಾಣಿಕರು ಸರ್ಕಾರಿ ಸಾರಿಗೆ ಸಂಪರ್ಕ ಇಲ್ಲದೇ ಭಾರೀ ತೊಂದರೆಗೆ ಒಳಗಾಗಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ ನೌಕರರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ-ಎಸ್ಮಾ ಜಾರಿ ಮಾಡಲಾಗಿತ್ತು. ಎಸ್ಮಾ ಆದೇಶವನ್ನೂ ಉಲ್ಲಂಘಿಸಿ ನೌಕರರು ಸರ್ಕಾರದ ವಿರುದ್ಧ ಮುಷ್ಕರಕ್ಕೆ ಮುಂದಾಗಿದ್ದರು. ಇದನ್ನು ಪ್ರಶ್ನಿಸಿ ಸರ್ಕಾರದಿಂದ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಲಾಗಿತ್ತು. ಹೈಕೋರ್ಟ್‌ನಲ್ಲಿ ಅರ್ಜಿ ವಿಚಾರಣೆ ಮಾಡಿದ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿಎಂ ಜೋಶಿಯವರಿದ್ದ ಪೀಠ, ಕಾಯಿದೆ ಜಾರಿಯಾದರೂ ಕೂಡ ಮುಷ್ಕರ ಮುಂದುವರಿಯುತ್ತಿದ್ದ ಹಿನ್ನೆಲೆಯಲ್ಲಿ, ಕಾನೂನು ಉಲ್ಲಂಘಿಸಿದವರಿಗೆ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ. 'ಕೋರ್ಟ್ ಆದೇಶ ಮೀರಿ ಮುಷ್ಕರ ನಡೆಸುವುದು ಕಾನೂನುಬಾಹಿರ' ಎಂದು ಹೈಕೋರ್ಟ್ ಸ್ಪಷ್ಟನೆ ನೀಡಿದೆ. ಎಸ್ಮಾ ಜಾರಿಯಾದರೂ ಮುಷ್ಕರ ನಡೆಸುವವರನ್ನು ಎಸ್ಮಾ ಕಾಯಿದೆ ಸೆಕ್ಷನ್ 9 ಅಡಿ ಬಂಧಿಸಬಹುದು ಎಂದು ಹೈಕೋರ್ಟ್ ಸೂಚನೆ ನೀಡಿತು. ಮುಂದಿನ ವಿಚಾರಣೆ ಆ.7ರಂದು ಮುಂದೂಡಲಾಯಿತು. ಇದರ ಬೆನ್ನಲ್ಲಿಯೇ ಸಾರಿಗೆ ನೌಕರರು ಮುಷ್ಕರವನ್ನು ವಾಪಸ್ ಪಡೆದಿದ್ದಾರೆ.

**ಜಂಟಿ ಕ್ರಿಯಾ ಸಮಿತಿಯಿಂದ ಪ್ರತಿಕ್ರಿಯೆ:** ಹೈಕೋರ್ಟ್ ಆದೇಶ ಬಂದ ಬಳಿಕ ತಕ್ಷಣವೇ ಜಂಟಿ ಕ್ರಿಯಾ ಸಮಿತಿಯು ಸುದ್ದಿಗೋಷ್ಠಿ ನಡೆಸಿದ್ದು, ತಮ್ಮ ಕ್ರಮವನ್ನು ಕಾನೂನುಬದ್ಧವಾಗಿ ಮುಂದೂಡಲಿದ್ದಾರೆ ಎಂದು ಘೋಷಿಸಿದೆ. ಸಮಿತಿಯ ಅಧ್ಯಕ್ಷ ಅನಂತ್ ಸುಬ್ಬರಾವ್ ಹೇಳಿದರು. ವಕೀಲರ ಸಲಹೆ ಮೇರೆಗೆ ತಾತ್ಕಾಲಿಕವಾಗಿ ಮುಷ್ಕರ ಮುಂದೂಡಿದ್ದೇವೆ. ಹೈಕೋರ್ಟ್ ಆದೇಶದ ವಿರುದ್ಧ ನಾವು ನಡೆದುಕೊಳ್ಳುವುದಿಲ್ಲ. ನೌಕರರ ಪರವಾಗಿ ನಮ್ಮ ಹೋರಾಟ ಮುಂದುವರಿಯಲಿದೆ. ನೌಕರರಿಗೆ ಯಾವುದೇ ತೊಂದರೆ ಉಂಟಾದರೆ, ಜಂಟಿ ಕ್ರಿಯಾ ಸಮಿತಿ ಅವರ ಜೊತೆಗೆ ನಿಂತಿರುತ್ತದೆ. ಎಲ್ಲಾ ನೌಕರರು ಮುಷ್ಕರದಿಂದ ತಾತ್ಕಾಲಿಕ ಹಿಂಜರಿದು, ತಮ್ಮ ಕರ್ತವ್ಯಕ್ಕೆ ಹಾಜರಾಗುವಂತೆ ಮನವಿ ಮಾಡಿದ್ದಾರೆ. ಸರ್ಕಾರದ ಪ್ರತಿಭಟನಾ ನಿರತ ನೌಕರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ, ಪರಿಸ್ಥಿತಿ ಕಲುಷಿತಗೊಳಿಸದಂತೆ ಎಚ್ಚರಿಕೆ ನೀಡಿದ್ದಾರೆ.

### ಖಾಸಗಿ ವಾಹನಗಳ ಮೊರೆ

ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರ ಹಿನ್ನಲೆ ಕಲಬುರಗಿಯ ಯಾವ ಬೀದಿಯಲ್ಲೂ ಬಸ್‌ಗಳ ಸಂಚಾರದ ಲಕ್ಷಣ ಕಾಣದೇ ಇರುವುದರಿಂದ ಬೇರೆ ಜಿಲ್ಲೆ, ಊರುಗಳಲ್ಲಿ ಸರಕಾರಿ ನೌಕರಿ ಮಾಡುವ ನೌಕರರೆಲ್ಲ ಸೇರಿ ಖಾಸಗಿ ವಾಹನಗಳ ಮೊರೆ ಹೋದರು. ನಾಲ್ಕೈದು ಜನರು ಸೇರಿ ಒಂದು ಖಾಸಗಿ ವಾಹನ ಬುಕ್ ಮಾಡಿ ತಮ್ಮ ಕೆಲಸಗಳಿಗೆ ತೆರಳಿದ ಪ್ರಸಂಗ ಸಹ ನಡೆದಿದೆ. ಇನ್ನು ಕೆಲ ಸಾರ್ವಜನಿಕರು ಕೂಡ ಬಸ್‌ಗಾಗಿ ಕಾಯದೆ, ಖಾಸಗಿ ವಾಹನ, ಪರಿಚಿತರ ವಾಹನ, ಸ್ವಂತ ವಾಹನಗಳಲ್ಲಿ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳಲು ಮುಂದಾದರು.

### ತಾತ್ಕಾಲಿಕವಾಗಿ ಮುಂದೂಡಿಕೆ

ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಮುಖ್ಯಸ್ಥ ಅನಂತ ಸುಬ್ಬರಾವ್ ಅವರು, ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ನೌಕರರು ಈ ಕೂಡಲೇ ಬಸ್‌ಗಳ ಸಂಚಾರ ಆರಂಭಿಸಲಿದ್ದಾರೆ ಎಂದು ಹೇಳಿದ್ದಾರೆ.

### ಮುಷ್ಕರದಿಂದ ದೂರದೂರಿಗೆ ತೆರಳುವವರ ಪರದಾಟ

ರಾಜ್ಯದಾದ್ಯಂತ ಕೈಗೊಂಡ ಅನಿರ್ದಿಷ್ಟವದಿ ಮುಷ್ಕರದ ಬಿಸಿ ಕಲ್ಯಾಣ ನಾಡಿನ ಕೇಂದ್ರ ಸ್ಥಾನ ಕಲಬುರಗಿಗೂ ತಟ್ಟಿತ್ತು. ಕಲಬುರಗಿಯಲ್ಲೂ ಬಂದ್ ಬಿಸಿ ಭಾರಿ ಪ್ರಮಾಣದಲ್ಲಿ ತಟ್ಟಿದ್ದು, ಒಂದೇ ಒಂದು ಬಸ್ ಸಹ ರಸ್ತೆಗೆ ಇಳಿಯದ ಹಿನ್ನಲೆ ಪ್ರತಿನಿತ್ಯ ಬೆಳಗಿನ ಜಾವವೇ ಎದ್ದು ದೂರದ ಶಾಲಾ, ಕಾಲೇಜ್, ನೌಕರಿಗಳಿಗೆ ಹೋಗುವವರು ಭಾರಿ ಪರದಾಟ ನಡೆಸಿದರು. ಜತೆಗೆ ದೂರದೂರಿನಿಂದ ಕಲಬುರಗಿಗೆ ಆಸ್ಪತ್ರೆ ಸೇರಿ ವಿವಿಧ ಕಾರ್ಯ ನಿಮಿತ್ತ ಆಗಮಿಸಿ ಮರಳಿ ತಮ್ಮ ಊರಿಗೆ ಹೋಗುವ ಪ್ರಯಾಣಿಕರು ಸಹ ಗೋಳಾಡಿದರು. ನಮ್ಮ ಬೇಡಿಕೆ ಈಡೇರುವವರೆಗೂ ನಾವು ಬಸ್ ಹತ್ತುವುದಿಲ್ಲ ಎಂದು ನೌಕರರು ಪಟ್ಟು ಹಿಡಿದರು. ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಮನವೊಲಿಸಲು ಯತ್ನಿಸಿದರು ಯಾವುದೇ ಪ್ರಯೋಜನವಾಗಲಿಲ್ಲ. ಬಸ್‌ಗಳ ಸಂಚಾರ ಇಲ್ಲದೇ ಪ್ರಯಾಣಿಕರಂತೂ ತೊಂದರೆಗೆ ಸಿಲಿಲುಕಿದ ದೃಶ್ಯ ಕಂಡು ಬಂತು. ಸಾರಿಗೆ ನೌಕರರ ಮುಷ್ಕರ ಹಿನ್ನಲೆ ಕಲಬುರಗಿ ಕೇಂದ್ರ ಬಸ್ ನಿಲ್ದಾಣಕ್ಕೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಭೇಟಿ ನೀಡಿ, ಬಸ್‌ಗಳ ಪ್ರಯಾಣದ ಬಗ್ಗೆ ಮಾಹಿತಿ ಪಡೆದು ಕೊಂಡರು.

### ಮುಷ್ಕರದ ರಾಜಕಾರಣಕ್ಕೆ ಕೊಡಲಿ ಪೆಟ್ಟು

ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಲು ಈಗಲಾದರೂ ಮುಂದಾಗಲಿ. ನೌಕರರ ಮೇಲಿನ ಕ್ರಮ ತೆಗೆದುಕೊಳ್ಳಬೇಡಿ. ನಾವು ಮತ್ತೆ ಮಾತುಕತೆಗೆ ಸಿದ್ಧ ಎಂದು ಅನಂತ ಸುಬ್ಬರಾವ್ ತಿಳಿಸಿದ್ದಾರೆ. ಇನ್ನು ಸಾರಿಗೆ ಮುಷ್ಕರದ ವಿಚಾರ ಮುಂದಿನ ಹಂತವನ್ನು ತೀರ್ಮಾನಿಸುವಂತೆ ಆಗಸ್ಟ್ 7ರಂದು ಕೋರ್ಟ್ ನಲ್ಲಿ ನಡೆಯುವ ವಿಚಾರಣೆ ಮೇಲೆ ಎಲ್ಲರ ಚಿತ್ತ ನೆಟ್ಟಿವೆ. ರಾಜ್ಯ ಸರ್ಕಾರ ಈಗಲಾದರೂ ಹೊಸ ಪ್ರಸ್ತಾವನೆ ಸಹಿತ ನೌಕರರ ಬೇಡಿಕೆಗಳ ಈಡೇರಿಕೆಗೆ ಮುಂದಾಗಬಹುದಾ ಎಂಬ ನಿರೀಕ್ಷೆ ಮೂಡಿದೆ. ಹೈಕೋರ್ಟ್ ಆದೇಶದ ಬೆನ್ನಲ್ಲೇ ನೌಕರರ ಮುಷ್ಕರ ತಾತ್ಕಾಲಿಕವಾಗಿ ಹಿಂಪಡೆದುಕೊಂಡಿದ್ದು, ಸರ್ಕಾರ ಮತ್ತು ನೌಕರರ ಸಂಘದ ನಡುವಿನ ಸಂಬಂಧ ಗಂಭೀರ ಘಟ್ಟ ತಲುಪಿದೆ. ಕಾನೂನು ಉಲ್ಲಂಘನೆಗೆ ಅವಕಾಶವಿಲ್ಲ ಎನ್ನುವ ನ್ಯಾಯಾಂಗದ ಸ್ಪಷ್ಟ ಸಂದೇಶ, ಮುಷ್ಕರದ ರಾಜಕಾರಣಕ್ಕೆ ಕೊಡಲಿ ಪೆಟ್ಟು ಹಾಕಿದೆ.

## ಕರ್ನಾಟಕದ 17 ಹೈವೇ ಅಭಿವೃದ್ಧಿ; 31 ಸಾವಿರ ಕೋಟಿ ರೂ. ವೆಚ್ಚ!

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರ ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ಬಲಗೊಳಿಸುತ್ತಿದೆ. 1,151 ಕಿಲೋ ಮೀಟರ್ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯಾಗುತ್ತಿದ್ದು, ಆದಷ್ಟು ಕಾಮಗಾರಿ ಮುಗಿದರೆ ಸಾರ್ವಜನಿಕರ ಪ್ರಯಾಣ ಮತ್ತಷ್ಟು ಸುಲಭವಾಗಲಿದೆ.

ಕರ್ನಾಟಕದಾದ್ಯಂತ ಪ್ರಸ್ತುತ 27 ಪ್ರಮುಖ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟಾರೆಯಾಗಿ 31,749 ಕೋಟಿ ರೂ. ಬೃಹತ್ ಮೊತ್ತವನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಆದರೆ, ಈ ಹೆದ್ದಾರಿ ಯೋಜನೆಗಳ ಪೈಕಿ ಪೂರ್ಣಗೊಂಡಿರುವ ಕಾಮಗಾರಿಯ ಪ್ರಮಾಣ ಅರ್ಧಕ್ಕಿಂತಲೂ ಕಡಿಮೆ ಇದೆ!

ಈ ಬಗ್ಗೆ ಲೋಕಸಭೆಯಲ್ಲಿ ಕೇಂದ್ರ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ನೀಡಿದ ಉತ್ತರದಲ್ಲಿ ಬಹಿರಂಗವಾಗಿದೆ. ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಕೇಳಿದ್ದ ಪ್ರಶ್ನೆಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಉತ್ತರ ನೀಡಿದ್ದಾರೆ.

**ಮೈಸೂರು - ಮಡಿಕೇರಿ ರಸ್ತೆ**

1151 ಕಿಮೀನಲ್ಲಿ ಮುಗಿದಿದ್ದು ಕೇವಲ 537 ಕಿಮೀ ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪ್ರಾಧಿಕಾರದ ಯೋಜನೆಗಳ ಸ್ಥಿತಿಗತಿ,



ಪ್ರಗತಿಯಲ್ಲಿರುವ ಕಾಮಗಾರಿಗಳು, ಅವುಗಳ ನಿರೀಕ್ಷಿತ ಪೂರ್ಣಗೊಳ್ಳುವ ದಿನಾಂಕ ಮತ್ತು ಈವರೆಗೆ ಖರ್ಚು ಮಾಡಲಾದ ಹಣದ ವಿವರಗಳನ್ನು ಸಂಸದರು ಕೇಳಿದ್ದರು. ಸಂಸದರ ಪ್ರಶ್ನೆಗೆ ಉತ್ತರ ನೀಡಿರುವ ನಿತಿನ್ ಗಡ್ಕರಿ, ರಾಜ್ಯದಲ್ಲಿ ಒಟ್ಟು 1,151 ಕಿಲೋಮೀಟರ್ ಉದ್ದದ 27 ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ಪ್ರಗತಿಯಲ್ಲಿವೆ. ಈ ಯೋಜನೆಗಳಿಗೆ ಮಂಜೂರಾದ 31,749 ಕೋಟಿ ರೂಪಾಯಿ ಮಂಜೂರಾಗಿದ್ದು, ಅದರಲ್ಲಿ ಈವರೆಗೆ 14,455 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1151 ಕಿಮೀ ಉದ್ದದ ಯೋಜನೆಗಳಲ್ಲಿ ಭೌತಿಕವಾಗಿ ಪೂರ್ಣಗೊಂಡಿರುವ ರಸ್ತೆಯ ಉದ್ದ ಕೇವಲ 537 ಕಿಲೋ ಮೀಟರ್ ಆಗಿದ್ದು, ಶೇ. 47ರಷ್ಟು ಮಾತ್ರ ಪ್ರಗತಿ ಕಂಡಿದೆ ಎಂದು ನಿತಿನ್ ಗಡ್ಕರಿ ಹೇಳಿದ್ದಾರೆ.



ನಾಲ್ಕು ರಾಷ್ಟ್ರೀಯ ಯೋಜನೆಗಳು ಪೂರ್ತಿ ನಿಧಾನ ವರದಿಯು ಕೆಲವು ಮಹತ್ವದ ಯೋಜನೆಗಳಲ್ಲಿನ ವಿಳಂಬವನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದೆ. ಅದರಲ್ಲಿ ಪ್ರಮುಖವಾಗಿ ನೆಲಮಂಗಲ - ತುಮಕೂರು ನಡುವಿನ ಆರು ಪಥದ ರಸ್ತೆಯ ಕಾಮಗಾರಿ ವಿಳಂಬವಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ-48ಕ್ಕೆ ಸೇರಿದ ಈ ಮಾರ್ಗ ಬೆಂಗಳೂರು ಹಾಗೂ ಉತ್ತರ ಕರ್ನಾಟಕಕ್ಕೆ ಸಂಪರ್ಕ ಕೊಂಡಿಯಾಗಿದೆ. ಈ ಯೋಜನೆಗೆ 2,032 ಕೋಟಿ ರೂಪಾಯಿ ಮಂಜೂರಾಗಿದೆ. ಒಟ್ಟು 44.73 ಕಿಮೀ ಉದ್ದದ ಈ ರಸ್ತೆಯಲ್ಲಿ, ಈವರೆಗೆ ಕೇವಲ 10.3 ಕಿ.ಮೀ. ಕಾಮಗಾರಿ ಮಾತ್ರ ಪೂರ್ಣಗೊಂಡಿದೆ.

ಈ ಯೋಜನೆಯ ಮಾರ್ಚ್ 2027ರ ವೇಳೆಗೆ ಮುಗಿದು ಸಾರ್ವಜನಿಕರ ಬಳಕೆಗೆ ಸಲುವಾಗಿ ಇನ್ನುಮುಂದೆ ಲಭ್ಯವಾಗಲಿದೆ. ಇನ್ನು, ಬೆಳಗಾವಿ-ಹುನಗುಂದ-ರಾಯಚೂರು ನಡುವಿನ ಎನ್‌ಎಚ್-7480 ಕಾಮಗಾರಿ ಬಹುತೇಕ ಸ್ಥಗಿತಗೊಂಡಂತೆ ಕಾಣುತ್ತಿದೆ. ಉತ್ತರ ಕರ್ನಾಟಕದ ಪ್ರಮುಖ ಆರ್ಥಿಕ ಕಾರಿಡಾರ್ ಆಗಿರುವ ಈ ಹೆದ್ದಾರಿಯನ್ನು ಒಟ್ಟು ಮೂರು ಪ್ಯಾಕೇಜ್‌ನಲ್ಲಿ ಗುತ್ತಿಗೆ ನೀಡಲಾಗಿತ್ತು.

ಮೂರು ಪ್ಯಾಕೇಜ್ ಸೇರಿ ಸುಮಾರು 4600 ಕೋಟಿ ರೂಪಾಯಿ ಅನುದಾನವನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಆದರೆ, ಮೂರೂ ಪ್ಯಾಕೇಜ್‌ಗಳಲ್ಲೂ ಈ ಕಾಮಗಾರಿಯ ಪ್ರಗತಿ ಶೂನ್ಯ.

## ರಾಹುಲ್ ಪ್ರತಿಭಟನೆಗಾಗಿ ಫ್ರೀಡಂ ಪಾರ್ಕ್ ಗೋಡೆ ನೆಲಸಮ, ಮರಗಳಿಗೆ ಕೊಡಲಿ

● ಆಗಸ್ಟ್ 8ರಂದು ರಾಹುಲ್ ನೇತೃತ್ವದಲ್ಲಿ ಕಾಂಗ್ರೆಸ್ ಪ್ರತಿಭಟನೆ ● ಚುನಾವಣೆಯಲ್ಲಿ ಮತಕಳ್ಳತನ ಆರೋಪ

• ಉದಯವಾಹಿನಿ, ಬೆಂಗಳೂರು

ಮತ ಕಳ್ಳತನ ಆರೋಪದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಆಗಸ್ಟ್ 5 ಕ್ಕೆ ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು. ಆದರೆ ಶಿಬು ಸೊರೇನ್ ನಿಧನದ ಹಿನ್ನೆಲೆಯಲ್ಲಿ ಪ್ರತಿಭಟನಾ ಸಮಾವೇಶ ಆಗಸ್ಟ್ 8 ರಂದು ನಡೆಯಲಿದೆ. ನಗರದ ಫ್ರೀಡಂ ಪಾರ್ಕ್ ನಲ್ಲಿ ನಡೆಯಲಿರುವ ಪ್ರತಿಭಟನೆಗೆ ಪಾರ್ಕ್ ಗೋಡೆ ನೆಲಸಮ ಮಾಡಲಾಗಿದೆ ಹಾಗೂ ಮರಗಳನ್ನು ಕಡಿಯಲಾಗಿದೆ ಎಂದು ಆರೋಪಿಸಿ ಬಿಜೆಪಿ ದೂರು ನೀಡಿದೆ.

**ಪೊಲೀಸರಿಗೆ ಬಿಜೆಪಿ ದೂರು**

ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ನಾಯಕರ ನಿಯೋಗ ದೂರು ನೀಡಿದೆ. ಅಲ್ಲದೆ, ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದೆ. ರಾಹುಲ್ ಆಗಮನದ ಹಿನ್ನೆಲೆಯಲ್ಲಿ ಫ್ರೀಡಂ ಪಾರ್ಕ್ ಹಿಂಭಾಗದ ಗೋಡೆ ನೆಲಸಮ ಮಾಡಲಾಗಿತ್ತು. ಅಲ್ಲದೆ ಮರಗಳನ್ನು ಕತ್ತರಿಸಲಾಗಿತ್ತು. ಬಿಬಿಎಂಪಿ ಅರಣ್ಯ ಘಟಕವೇ ಮರಗಳನ್ನು ಕತ್ತರಿಸಿತ್ತು. ಆದರೆ ಇದೀಗ ಅದು ವಿವಾದಕ್ಕೆ ಕಾರಣವಾಗಿದೆ.



**ಬಿಜೆಪಿ ದೂರಿನಲ್ಲಿ ಏನಿದೆ:** ನಗರದ ಫ್ರೀಡಂ ಪಾರ್ಕ್‌ನಲ್ಲಿ ಆಗಸ್ಟ್ 8 ರಂದು 2024 ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ಪಕ್ಷದ ನಾಯಕರಾದ ರಾಹುಲ್ ಗಾಂಧಿಯವರು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಇದರ ಕಾರ್ಯದ ಸಲುವಾಗಿ ಅನೇಕ ವರ್ಷಗಳಿಂದ ಫ್ರೀಡಂಪಾರ್ಕ್‌ನಲ್ಲಿ ಬೆಳೆದ ನಿಂತಿದ್ದ ದೊಡ್ಡ ಮರಗಳನ್ನು ಕಡಿದು ಹಾಕಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುವುದಲ್ಲದೇ ಪರಿಸರವನ್ನು ನಾಶಪಡಿಸಿರುತ್ತಾರೆ. ಈ ರೀತಿಯ ದುಷ್ಕೃತ್ಯವನ್ನು ಮಾಡಲು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ರೀತಿಯ ಅನುಮತಿಯನ್ನು ಪಡೆಯದೇ ಹಾಗೂ ಸಂಬಂಧಪಟ್ಟವರಿಗೆ ತಿಳಿಸದೇ ನಗರದ ಮಧ್ಯ ಭಾಗದಲ್ಲಿರುವ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಆಗಿ ಬೆಳೆದಿರುವ ಮರವನ್ನು ಕಾಂಗ್ರೆಸ್ ಪಕ್ಷದ ರಾಜಕೀಯ ಕಾರ್ಯಕ್ರಮವನ್ನು ನಡೆಸಲು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ, ಜನಸಾಮಾನ್ಯರಿಗೆ ತೊಂದೆಯನ್ನುಂಟು ಮಾಡಿರುತ್ತಾರೆ.

ಅಧೀಕೃತವಾದ ಪರವಾನಗಿ ಇಲ್ಲದೇ ಆಡಳಿತ ಪಕ್ಷದ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಮರಗಳನ್ನು ಕತ್ತರಿಸಿರುವುದು ಕಾನೂನು ಬಾಹಿರ ದುಷ್ಕೃತ್ಯಕ್ಕೆ ಕಾರಣೀಭೂತರಾದ ಸದರಿ ಕಾರ್ಯಕ್ರಮದ ಆಯೋಜಕರು ಹಾಗೂ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ದೂರಿನಲ್ಲಿ ಉಲ್ಲೇಖ ಮಾಡಲಾಗಿದೆ.

### ರಾಹುಲ್ ವಿರುದ್ಧ ವಾಗ್ದಾಳಿ ನಡೆಸಿದ್ದ ಬಿಜೆಪಿ

ಕರ್ನಾಟಕ ಎಂದರೆ ರಾಹುಲ್ ಅವರಿಗೆ ವಿಶೇಷ ಪ್ರೀತಿ. ರಾಜ್ಯವನ್ನು ಕಾಂಗ್ರೆಸ್ ಪಕ್ಷದ ಎಟಿಎಂ ಆಗಿ ಪರಿವರ್ತಿಸಲಿದ್ದಾರೆ ಎಂದು ನಾವು ಚುನಾವಣೆ ವೇಳೆ ಹೇಳಿದ್ದೆವು. ಕಪ್ಪ ಕಾಣಿಕೆಗೆ ಕರ್ನಾಟಕವನ್ನು ದುರ್ಬಳಕೆ ಮಾಡಲಿದ್ದಾರೆ ಎಂದು ಹೇಳುತ್ತಿದ್ದೆವು. ಬೆಲೆ ಏರಿಕೆ ಮೂಲಕ ರಾಜ್ಯದ ಜನರ ಮೇಲೆ ಬರೆ ಎಳೆಯುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ ಎಂದು ವಿಜಯೇಂದ್ರ ಅವರು ಆರೋಪಿಸಿದ್ದರು. ದೇಶದ್ರೋಹಿಗಳಿಗೆ ಕರ್ನಾಟಕ ಸ್ವರ್ಗವಾದರೆ, ರಾಹುಲ್ ಅವರಿಗೆ ಕರ್ನಾಟಕ ಎಂದರೆ ಬಹಳ ಪ್ರೀತಿ. ಇದು ಇಲ್ಲಿನ ಜನತೆಯ ಮೇಲಲ್ಲ; ದೆಹಲಿಗೆ ಎಲ್ಲ ರೀತಿ ವ್ಯವಸ್ಥೆ ತಲುಪುತ್ತಿದೆ ಎಂಬುದೇ ಇದಕ್ಕೆ ಕಾರಣ ಎಂದು ವಿವರಿಸಿದರು. ಅಪಪ್ರಚಾರಕ್ಕಾಗಿ ನಾಳೆ ಮತ್ತೆ ಬರುತ್ತಾರೆ. ಬಿಜೆಪಿ ಕೂಡ ಇದಕ್ಕೆ ಪ್ರತ್ಯುತ್ತರ ಕೊಡಲು ಸಜ್ಜಾಗಿದೆ ಎಂದಿದ್ದರು. ಕಾಂಗ್ರೆಸ್ ಪಕ್ಷದವರು ದೇಶದ್ರೋಹಿಗಳೆಂದರೆ ತಪ್ಪಾಗಲಾರದು. ಕೇವಲ ಅಲ್ಪಸಂಖ್ಯಾತರನ್ನು ಓಲೈಕೆ ಮಾಡಲು ಸಮಾಜದ ನಡುವೆ ವಿಷಬೀಜ ಬಿತ್ತುತ್ತಿದ್ದಾರೆ. ದೇಶ- ರಾಜ್ಯದಲ್ಲಿ ಅಶಾಂತಿಯನ್ನು ಸೃಷ್ಟಿಸುವ ಕೆಲಸ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತಿದೆ ಎಂದು ಕಿಡಿಕಾರಿದ್ದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,222/Gram24ct ₹9,370/Gram22ct ಬೆಳ್ಳಿ: ₹115.00/Gram

## ಹರಿದಾಸ ಝೇಂಕಾರ ಗಾಯನ

• ಉದಯವಾಹಿನಿ, ಬೆಂಗಳೂರು



ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಅಂಗವಾಗಿ ಆಗಸ್ಟ್ 6, ಬುಧವಾರ ಸಂಜೆ 6-30ಕ್ಕೆ ಹರಿದಾಸ ಝೇಂಕಾರ ಗಾಯನ : ಕು|| ಮನಸ್ವಿ ಕಶ್ಯಪ್ (ವಿದುಷಿ ಶ್ರೀಮತಿ ದಿವ್ಯಾ ಗಿರಿಧರ್ ಅವರ ಪುತ್ರಿ) ಮತ್ತು ಕು|| ಅನನ್ಯ ಬೆಳವಾಡಿ. ವಾದ್ಯ ಸಹಕಾರ : ಶ್ರೀ ಅಮಿತ್ ಶರ್ಮಾ (ಕೀ-ಬೋರ್ಡ್), ಶ್ರೀ ಮಧುಸೂದನ್ ಕೊಪ್ಪ (ತಬಲಾ). ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

## ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ

• ಉದಯವಾಹಿನಿ, ಬೆಂಗಳೂರು

ಶ್ರೀಮದ್ರಾಮಾಯಣ ಪ್ರವಚನ ಮಾಲಿಕೆ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರಿಂದ ಆಗಸ್ಟ್ 6, 7, 8, ಸಂಜೆ 6:30 - ರಿಂದ 7:30ರವರೆಗೆ ಬೆಂಗಳೂರಿನ ಜಯನಗರದ ಐದನೇ ಬಡಾವಣೆಯಲ್ಲಿರುವ



ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಇಂದಿನಿಂದ ಉಡುಪಿ ಪೇಜಾವರ ಮಠಾಧೀಶರಾದ ಪರಮ ಪೂಜ್ಯ ಶ್ರೀ108 ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರಿಂದ ಆಗಸ್ಟ್ 6 ರಿಂದ 8ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಶ್ರೀಮದ್ರಾಮಾಯಣ ಪ್ರವಚನವನ್ನು ನಡೆಸಿ ಕೊಡಲಿದ್ದಾರೆ ಭಕ್ತಾದಿಗಳು ಪ್ರವಚನ ಜ್ಞಾನ ಯಜ್ಞದಲ್ಲಿ ಭಾಗವಹಿಸಿ ಶ್ರೀ ಹರಿವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾಗಿ ಶ್ರೀಗಳಿಂದ ಫಲ ಮಂತ್ರಾಕ್ಷತೆ ಸ್ವೀಕರಿಸಬಹುದು ಎಂದು ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದಿಂದ್ರಾಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು ಈ ಸಂದರ್ಭದಲ್ಲಿ ಶ್ರೀಮಠದ ಪುರೋಹಿತರಾದ ನಂದಕಿಶೋರ ಆಚಾರ್ಯರು ಮತ್ತು ಶ್ರೀಗಳ ಪರ್ಸನಲ್ ಸೆಕ್ರೆಟರಿ ಶ್ರೀ ಕೃಷ್ಣಮೂರ್ತಿ ಭಟ್ ಉಪಸ್ಥಿತರಿದ್ದರು

## 108-ಆರೋಗ್ಯ ಕವಚ ಯೋಜನೆಯ ಆಂಬುಲೆನ್ಸ್ ನಿರ್ವಹಣೆ

• ಉದಯವಾಹಿನಿ, ಬೆಂಗಳೂರು

108-ಆರೋಗ್ಯ ಕವಚ' ಯೋಜನೆಯ ಆಂಬುಲೆನ್ಸ್‌ಗಳ ನಿರ್ವಹಣೆಯಲ್ಲಿ ನ್ಯೂನತೆ ಹಾಗೂ ಅವ್ಯವಹಾರಗಳು ನಡೆದಿರುವ ಕುರಿತು ದೂರುಗಳು ಬಂದಿದ್ದು, ಈ ಬಗ್ಗೆ ತನಿಖೆ ನಡೆಸಿ, 15 ದಿನಗಳಲ್ಲಿ ವರದಿ ನೀಡುವಂತೆ ಆರೋಗ್ಯ ಇಲಾಖೆಯು ವಿಭಾಗೀಯ ಸಹ ನಿರ್ದೇಶಕರಿಗೆ ಸೂಚಿಸಲಾಗಿದೆ. ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗಗಳ ವ್ಯಾಪ್ತಿಯಲ್ಲಿ, ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು, ತಾಲ್ಲೂಕು ಆರೋಗ್ಯ ಅಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ಅಂಬುಲೆನ್ಸ್‌ನ ಪಿ.ಸಿ.ಆರ್, ಪಿ.ಡಿ.ಆರ್, ಹಾಜರಾತಿ, ಲಾಗ್ ಪುಸ್ತಕಗಳನ್ನು ಪರಿಶೀಲಿಸಬೇಕು. ಆಂಬುಲೆನ್ಸ್‌ನಲ್ಲಿರುವ ನ್ಯೂನತೆಗಳು ಹಾಗೂ ಅವ್ಯವಹಾರದ ಕುರಿತು ತನಿಖೆ ನಡೆಸಿ, ವರದಿ ನೀಡಬೇಕು ಎಂದು ಆರೋಗ್ಯ ಇಲಾಖೆಯ ಆಯುಕ್ತರು ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

## ಹೆಚ್‌ಡಿಕೆ ವಿರುದ್ಧ ಸರ್ಕಾರಿ ಜಮೀನು ಒತ್ತುವರಿ ಆರೋಪ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ವಿರುದ್ಧ ಸರ್ಕಾರಿ ಜಮೀನು ಒತ್ತುವರಿ ಆರೋಪ ಪ್ರಕರಣ ಸಂಬಂಧ ರಾಜ್ಯ ಸರ್ಕಾರದ ಎಸ್‌ಐಟಿ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನ ಆಗಸ್ಟ್ 28ಕ್ಕೆ ಹೈಕೋರ್ಟ್ ಮುಂದೂಡಿದೆ. ಜಮೀನು ಒತ್ತುವರಿ ಆರೋಪ ಪ್ರಕರಣ ಸಂಬಂಧ ಸಮಾಜ ಪರಿವರ್ತನಾ ಸಮುದಾಯದಿಂದ ಮಧ್ಯ ಪ್ರವೇಶ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಭಾಗಶಃ ಅರ್ಜಿ ವಿಚಾರಣೆ



ನಡೆಸಿ ಅದನ್ನ ಬಿಡುಗಡೆ ಮಾಡಿದ್ರೆ, ಅರ್ಜಿದಾರರ ಪರ ವಕೀಲರು ನನ್ನ ಬಗ್ಗೆ ಏನೆಂದುಕೊಳ್ಳುತ್ತಾರೆ ಎಂದು ಹೈಕೋರ್ಟ್‌ನ ನ್ಯಾ.ಇಎಸ್ ಇಂದಿರೇಶ್ ಪ್ರಶ್ನೆ ಮಾಡಿದರು. ರಿಜಿಸ್ಟ್ರಿಯಿಂದ ತಪ್ಪಾಗಿರಬಹುದು, ಅರ್ಜಿ ವಿಚಾರಣೆ ನಡೆಸಲು ನಮ್ಮ ಆಕ್ಷೇಪ ಇಲ್ಲ ಅಂತಾ ಸಮಾಜ ಪರಿವರ್ತನಾ ಸಮುದಾಯದ ಪರ ವಕೀಲ ಬಸವರಾಜ್ ವಾದಿಸಿದರು. ನ್ಯಾಯಾಂಗ ವ್ಯವಸ್ಥೆಯನ್ನ ನಾವು ಗೌರವಿಸಬೇಕು. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಿದೆ. ಇದು ಇನ್ನೊಂದು ಅರ್ಜಿ ಅಷ್ಟೇ ಅಂತಾ ಪೀಠ ಹೇಳಿತು. ಈ ವೇಳೆ, ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸೋದಾಗಿ ತಿಳಿಸಿದ ಸರ್ಕಾರದ ಪರ ವಕೀಲ ಎಜಿ ಶಶಿಕಿರಣ್ ಶೆಟ್ಟಿ ಕೋರ್ಟ್‌ಗೆ ಮತ್ತೊಂದು ದಿನ ಪ್ರಕರಣದ ವಿಚಾರಣೆ ನಡೆಸಲು ಮನವಿ ಮಾಡಿದರು. ಈ ಹಿನ್ನೆಲೆಯಲ್ಲಿ ಮಧ್ಯಂತರ ಆದೇಶ ವಿಸ್ತರಿಸಿ ಆಗಸ್ಟ್ 28ಕ್ಕೆ ವಿಚಾರಣೆಯನ್ನ ಹೈಕೋರ್ಟ್ ಮುಂದೂಡಿದೆ.

# ಬೆಂಗಳೂರಿನಲ್ಲಿ ಆಗಸ್ಟ್ 10ಕ್ಕೆ ಪ್ರಧಾನಿ ಮೋದಿ ರೋಡ್ ಶೋ?

### ಮೆಟ್ರೋದಲ್ಲಿ ಬೊಮ್ಮಸಂದ್ರದಿಂದ ರಾಗಿಗುಡ್ಡದವರೆಗೂ ಪ್ರಯಾಣ ಮಾಡಲಿರುವ ಪ್ರಧಾನಿ

• ಉದಯವಾಹಿನಿ, ಬೆಂಗಳೂರು



ನಮ್ಮ ಮೆಟ್ರೋ ಹಳದಿ ಮಾರ್ಗದ ಉದ್ಘಾಟನೆಗೆ ಆಗಸ್ಟ್ 10 ಬೆಂಗಳೂರಿಗೆ ಆಗಮಿಸುತ್ತಿರುವ ಪ್ರಧಾನಿ ಮೋದಿ ಅವರು ಆ ದಿನ ಬಿಜೆಪಿ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಈ ನಡುವೆ ಬಿಜೆಪಿ ಅರ್ಧ ಕಿ.ಮೀ ರೋಡ್ ಶೋ ಕೂಡ ಹಮ್ಮಿಕೊಳ್ಳಲು ಸಿದ್ಧತೆ ನಡೆಸಿದೆ.

ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ ನಡುವಿನ ನಮ್ಮ ಮೆಟ್ರೋ ಹಳದಿ ಮಾರ್ಗ ವಾಣಿಜ್ಯ ಸಂಚಾರಕ್ಕೆ ಸಜ್ಜಾಗಿದೆ. ಬೊಮ್ಮಸಂದ್ರದಲ್ಲಿ ರೈಲಿಗೆ ಹಸಿರು ನಿಶಾನೆ ತೋರಿಸುವ ಪ್ರಧಾನಿಗಳು ಬೊಮ್ಮಸಂದ್ರದಿಂದ ರಾಗಿಗುಡ್ಡ ಮೆಟ್ರೋ ನಿಲ್ದಾಣದವರೆಗೂ ರೈಲಿನಲ್ಲಿ ಪ್ರಯಾಣ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಪ್ರಯಾಣಿಕರೊಂದಿಗೆ ಅನೌಪಚಾರಿಕವಾಗಿ ಮಾತಾಡಲಿದ್ದಾರೆ.

**ಎಲ್ಲಿಂದ ಎಲ್ಲಿಗೆ ರೋಡ್ ಶೋ:** ರಾಗೀಗುಡ್ಡ ಮೆಟ್ರೋ ನಿಲ್ದಾಣದಿಂದ ಜಯನಗರ ಐದನೇ ಬ್ಲಾಕ್‌ನಲ್ಲಿರುವ ಚಂದ್ರಗುಪ್ತ ಮೌರ್ಯ ಮೈದಾನದವರೆಗೆ ಅಂದಾಜು 1 ಕಿ.ಮೀ (ಶಾಲಿನಿ ಗ್ರೌಂಡ್ಸ್‌ವರೆಗೂ ರೋಡ್ ಶೋ ಹಮ್ಮಿಕೊಳ್ಳಲು ಸಿದ್ಧತೆ ನಡೆದಿದೆ. ಈ ಸಂಬಂಧ ಪ್ರಸ್ತಾವವೂ ಸರ್ಕಾರಕ್ಕೂ ಅನುಮತಿ ಸಲ್ಲಿಕೆಯಾಗಿದ್ದು, ರಾಜ್ಯ ಕೂರಲಾಗಿದೆ ಎಂದು ಮೂಲಗಳು ತಿಳಿಸಿವೆ.

**ಶಾಲಿನಿ ಗ್ರೌಂಡ್ಸ್‌ನಲ್ಲಿ ಬೃಹತ್ ಕಾರ್ಯಕ್ರಮ**

ಮೆಟ್ರೋ ಉದ್ಘಾಟನೆ, ರೈಲಿನಲ್ಲಿ ಪ್ರಯಾಣ ಹಾಗೂ ರೋಡ್ ಶೋ ಬಳಿಕ ಮಧ್ಯಾಹ್ನ 12 ಗಂಟೆಗೆ ಜಯನಗರದ ಶಾಲಿನಿ ಗ್ರೌಂಡ್ಸ್‌ನಲ್ಲಿ ಉದ್ಘಾಟನಾ ಸಮಾರಂಭ ನಡೆಯುವ ನಿರೀಕ್ಷೆ ಇದೆ. ಐವತ್ತು ಸಾವಿರದಿಂದ ಒಂದೂ ಲಕ್ಷಕ್ಕೂ ಅಧಿಕ ಮಂದಿ ಸೇರುವ ಸಾಧ್ಯತೆಗಳು ಇವೆ.

**ಮೋದಿ ಆಗಮನದ ಬಗ್ಗೆ ಸಂಸದ ಮಾಹಿತಿ ಹಂಚಿಕೆ:** ನಮ್ಮ ಮೆಟ್ರೋ ಹಳದಿ ಮಾರ್ಗ



ಉದ್ಘಾಟನೆಗೆ ಮೋದಿ ಆಗಮನದ ಬಗ್ಗೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರಲಾಲ್ ಖಟ್ಟರ್ ಹಾಗೂ ಸಂಸದ ತೇಜಸ್ವಿ ಸೂರ್ಯ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

**ನಮ್ಮ ಮೆಟ್ರೋ ಹಳದಿ ಮಾರ್ಗದ ಮಾಹಿತಿ**

- ಮಾರ್ಗದ ಉದ್ದ - 19.15 ಕಿ ಮೀ.
- ಮಾರ್ಗದ ವೆಚ್ಚ - ಒಟ್ಟು 5,056.99 ಕೋಟಿ ರೂ.
- ಎಲ್ಲಿಂದ ಎಲ್ಲಿಗೆ - ಆರ್ ವಿ ರಸ್ತೆ - ಬೊಮ್ಮಸಂದ್ರ
- ನಿಲ್ದಾಣಗಳ ಸಂಖ್ಯೆ - 16
- ಹಸಿರು, ನೀಲಿ ಮಾರ್ಗವನ್ನು ಈ ಹಳದಿ ಮಾರ್ಗ ಸಂಪರ್ಕಿಸುತ್ತದೆ.
- ಯೋಜನೆಯ ಫಲಾನುಭವಿಗಳು - ಬೆಂಗಳೂರು ದಕ್ಷಿಣದ ಸುಮಾರು 25 ಲಕ್ಷ ಜನರಿಗೆ ಪ್ರಯೋಜನ.
- ಎಲೆಕ್ಟ್ರಾನಿಕ್ ಸಿಟಿ, ಹೊಸೂರು ಭಾಗಕ್ಕೆ ತೆರಳುವವರಿಗೆ ಭಾರೀ ಅನುಕೂಲ.

## ಬೀದಿ ನಾಯಿಗಳ ಹಾವಳಿ: ಅಧಿಕಾರಿಗಳಿಗೆ ಲೋಕಾಯುಕ್ತ ತರಾಟೆ

• ಉದಯವಾಹಿನಿ, ಬೆಂಗಳೂರು

ಕ್ರೂರ ಪ್ರವೃತ್ತಿ ಹೊಂದಿರುವ ನಾಯಿಗಳನ್ನು ಪತ್ತೆ ಹಚ್ಚಿ, ಶ್ವಾನ ನಿಗಾ ಕೇಂದ್ರದಲ್ಲಿ ಇಡದೇ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತರಾಟೆಗೆ ತೆಗೆದುಕೊಂಡರು. ಕೊಡಿಗೆಹಳ್ಳಿ ಠಾಣಾ ವ್ಯಾಪ್ತಿಯ ಟೆಲಿಕಾಂ ಲೇಔಟ್‌ನಲ್ಲಿ ಬೀದಿ ನಾಯಿಗಳ ದಾಳಿಗೆ ಸಿಲುಕಿ ಮೃತಪಟ್ಟ ಸೀತಪ್ಪ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಶ್ವಾನ ನಿಗಾ ಕೇಂದ್ರ ಸ್ಥಾಪಿಸುವಂತೆ ಈ ಹಿಂದೆ ಸಾಕಷ್ಟು ಮಾರ್ಗದರ್ಶನ ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಆದೇಶವನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಕ್ರೂರ ಮನೋಭಾವ ಹೊಂದಿರುವ ನಾಯಿಗಳಿಗೆ ಕೆನಲ್ಸ್ ಶೆಲ್ಟರ್‌ಗಳನ್ನು ಸ್ಥಾಪಿಸಿ, ಅವುಗಳಲ್ಲಿ ಇಡಬೇಕೆಂಬ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ ಅವರು, ಸಂಬಂಧಿಸಿದ



ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಬೆಂಗಳೂರು ನಗರ ಮಾತ್ರವಲ್ಲದೆ, ಇತರೆ ಜಿಲ್ಲೆಗಳಲ್ಲಿಯೂ ಬೀದಿ ನಾಯಿಗಳ ದಾಳಿಯಿಂದ ಜನರು ಮೃತಪಟ್ಟಿರುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪಶು ಸಂಗೋಪನಾ ಇಲಾಖೆ ಆಯುಕ್ತರು, ಮಹಾನಗರ ಪಾಲಿಕೆ, ನಗರಸಭೆಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿ ವರ್ಷದಲ್ಲಿ ಬೀದಿ ನಾಯಿ ಕಚ್ಚಿದ ಪ್ರಕರಣಗಳು, ರೇಬಿಸ್ ಪ್ರಕರಣಗಳು, ವ್ಯಾಕ್ಸಿನೇಷನ್, ಎಬಿಸಿ ಮಾಡಿಸಿದ ಪ್ರಕರಣಗಳ ಸಂಖ್ಯೆ, ಶ್ವಾನ ತಾಣಗಳ ಬಗ್ಗೆ ವರದಿ ನೀಡಬೇಕು ಎಂದು ಸೂಚಿಸಿದರು. ನ್ಯಾಯಾಲಯದ ಆದೇಶದಂತೆ ಸೀತಪ್ಪ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಹೇಳಿ, ಪ್ರಕರಣದ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 19ಕ್ಕೆ ನಿಗದಿಪಡಿಸಿದರು.

> ಇದಕ್ಕೆ ಪ್ರತಿಕ್ರಿಯಿಸಿದ ಆರೋಗ್ಯ ಇಲಾಖೆಯ ವಿಶೇಷ ಆಯುಕ್ತರು, ಯಲಹಂಕದಲ್ಲಿ 15 ದಿನಗಳಲ್ಲಿ 50 ನಾಯಿಗಳ ಸಾಮರ್ಥ್ಯ ಹೊಂದಿರುವ ನಿಗಾ ಕೇಂದ್ರ ಸ್ಥಾಪಿಸಲಾಗುವುದು' ಎಂದು ಉತ್ತರಿಸಿದರು. ಕ್ರೂರ ನಾಯಿ ಪದೇ ಪದೇ ಜನರನ್ನು ಕಚ್ಚುತ್ತಿರುವ ನಾಯಿಗಳ ಬಗ್ಗೆ ನಿಗಾ ವಹಿಸಲು ಶ್ವಾನ ನಿಗಾ ಕೇಂದ್ರವನ್ನು ಎಲ್ಲಾ ವಾರ್ಡ್‌ಗಳಲ್ಲಿ ಸ್ಥಾಪಿಸಬೇಕು ಎಂದು ಪಾಟೀಲರು ಸೂಚನೆ ನೀಡಿದರು.

## ಶ್ರೀ ಸತ್ಯಸಾಯಿಬಾಬಾ ಅವರ ಶತಜನ್ಮೋತ್ಸವ ಪ್ರಯುಕ್ತ ಗುರು ಪೂರ್ಣಿಮಾ, ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಶಾಲೆಗಳು ವ್ಯಾವಹಾರಿಕ ಸಂಸ್ಥೆಗಳಾಗಬಾರದು ಅದು ಮಕ್ಕಳ ಜ್ಞಾನ ವೃತ್ತಿಯ ಕೇಂದ್ರವಾಗಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಅಭಿವೃದ್ಧಿ ವಿಭಾಗದ ಹೆಚ್ಚುವರಿ ನಿರ್ದೇಶಕರಾದ ವಾಣಿ. ಎನ್ ಅವರು ಹೇಳಿದರು. ಮಹದೇವಪುರ ಕ್ಷೇತ್ರದ ಕುಂದಲಹಳ್ಳಿಯ ಎಇಸಿಎಸ್ ಲೇಔಟ್ ಸಿಎಂಆರ್‌ಐಟಿನಲ್ಲಿ ಸಾಯಿ ಗುರುಕುಲ ಶಾಲೆ ಆಯೋಜಿಸಿದ ಭಗವನ್ ಶ್ರೀ ಸತ್ಯಸಾಯಿಬಾಬಾ ಅವರ ಶತಜನ್ಮೋತ್ಸವ ಪ್ರಯುಕ್ತ ಗುರು ಪೂರ್ಣಿಮಾ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು. ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ನೀಡುವ ಬದಲಿಗೆ ಹಣಮಾಡುವ ಸಂಸ್ಥೆಗಳಾಗಿ ಬದಲಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಸಾಯಿಗುರುಕುಲದಿಂದ ಕೆಲ ಶಾಲೆಗಳು ಕಲಿಯಬೇಕಾದದ್ದು ಬಹಳವಿದೆ ಎಂದರು.

ಹಿಂದೆ ಗುರು, ಮುಂದೆ ಗುರಿ ಇರಬೇಕು, ಅಬ್ದುಲ್ ಕಲಾಂ ಹಾಗೂ ಸ್ವಾಮಿ ವಿವೇಕಾನಂದ ಅವರ ಜೀವನ ಕಥೆ ಹೇಳಿ ಮಕ್ಕಳಿಗೆ ಪ್ರೇರಣೆ ನೀಡಿದರು. ಜ್ಞಾನ ನೀಡುವ ಗುರುಗಳ ಗೌರವಿಸಬೇಕಾದದ್ದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯ. ಪೋಷಕರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಎಂದರು.

ಪೋಷಕರು ಮತನಾಡಿ, ನಮ್ಮ ಮಕ್ಕಳ ಉತ್ತಮ ಭವಿಷ್ಯ ನಿರ್ಮಾಣ ಮಾಡುವಲ್ಲಿ ಸಾಯಿಗುರುಕುಲ ಶಾಲೆ ಸಹಕಾರಿಯಾಗಿದೆ. ಶೂನ್ಯ ಶುಲ್ಕದಲ್ಲಿ ಮಕ್ಕಳ ವಿದ್ಯಾಭ್ಯಾಸ ನೀಡುತ್ತಿರುವ ಏಕೈಕ ಶಾಲೆ ಇದು ಎಂದು ನುಡಿದರು. ಇದೇವೇಳೆ ಎಸ್.ಎಸ್.ಎಲ್.ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ, ರತ್ನಮಾಲ ಟ್ರೋಫಿ, ಸ್ಕಾಲರ್ಶಿಪ್ ಹಣ ವಿತರಣೆ ಮಾಡಿದರು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿದ್ದಕ್ಕಾಗಿ ಶಾಲಾ ವಿದ್ಯಾರ್ಥಿಗಳ ಪೋಷಕರು ಟ್ರಸ್ಟಿಗಳಿಗೆ ಶಾಲು ಹೊದಿಸಿ ಕೃತಜ್ಞತೆ ಸಲ್ಲಿಸಿದರು. ಶಾಲಾ ದಾನಿಗಳು ಹಾಗೂ ಶಿಕ್ಷಕರಿಗೆ ಸಹ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ಟ್ರಸ್ಟಿಗಳಾದ ಕೆ.ಎಸ್. ಶ್ರೀನಿವಾಸನ್, ಶಾಲೆಯ ಮುಖ್ಯೋಪಾಧ್ಯಾಯ ಶಿವಜ್ಯೋತಿ, ಶಿಕ್ಷಣ ನಿರ್ದೇಶಕರಾದ ಶಾಂತಿ ಶ್ರೀನಿವಾಸನ್, ಶಿಕ್ಷಕ ವೃಂದ, ಟ್ರಸ್ಟಿಗಳಾದ ಕಮಲ ರವೀಂದ್ರನಾಥ್, ಶಶಿಕಲಾ ನಟರಾಜನ್, ವಸಂತ ಗೋಪಾಲ್, ಕವಿತಾ ರಾಜಮಣಿ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರೂ.38 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

• ಉದಯವಾಹಿನಿ, ಯಲಹಂಕ

ಲೋಕೋಪಯೋಗಿ ಹಾಗೂ ಬಿಡಿಎ ಅನುದಾನದಡಿಯಲ್ಲಿ ಯಲಹಂಕ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ?38 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಪ್ರಮುಖ ಸಂಪರ್ಕ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಬೈರಾಪುರ ಗ್ರಾಮದಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಹಳ್ಳಿ-ಹಳ್ಳಿಗಳ ನಡುವಿನ ಸಂಪರ್ಕ ರಸ್ತೆಗಳು ತೀರಾ ಹಾಳಾಗಿದ್ದು, ರಸ್ತೆಗಳು ಕಿರಿದಾಗಿವೆ. ಇದರಿಂದ ವಾಹಗಳ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಹೀಗಾಗಿ ರಸ್ತೆಯ ಎರಡೂ ಕಡೆ ಸೇರಿ ಒಟ್ಟು 7 ಅಡಿಗಳಷ್ಟು ವಿಸ್ತರಣೆ ಮಾಡಲಾಗುತ್ತಿದೆ. ಅದಕ್ಕನುಗುಣವಾಗಿ ಚರಂಡಿ ನಿರ್ಮಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿಪಡಿಸಲಾಗುತ್ತದೆ. ಈ ಎಲ್ಲಾ ಕಾಮಗಾರಿಗಳಿಗೆ ಈಗ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

'ರಾಜಾನುಕುಂಟೆ-ಮಧುರೆ ಮುಖ್ಯರಸ್ತೆಯು ತೀರಾ ಹಾಳಾಗಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಪ್ರಶ್ನಿಸಿದ್ದೇನೆ. ಕೆಎಸ್‌ಆರ್‌ಡಿಸಿ ವತಿಯಿಂದ ರಸ್ತೆ ಅಭಿವೃದ್ಧಿಯಾಗಬೇಕಾಗಿದೆ. ಈ ಸಂಬಂಧ ಸಂಸ್ಥೆಯ ಅಧ್ಯಕ್ಷ ಎಚ್.ಸಿ.ಬಾಲಕೃಷ್ಣ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ ಸಭೆಯನ್ನೂ ನಡೆಸಲಾಗಿದೆ. ಕಂದಾಯ ಇಲಾಖೆಯ ಅಧಿಕಾರಿಗಳಿಂದ ಸಮೀಕ್ಷೆ ಕಾರ್ಯವನ್ನೂ ನಡೆಸಲಾಗಿದೆ. ರೈತರಿಗೆ ಪರಿಹಾರ ನೀಡುವುದು ವಿಳಂಬವಾಗುತ್ತಿದ್ದು, ಇದರಿಂದ ರಸ್ತೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಮಸ್ಯೆಯಾಗುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ಕಾಮಗಾರಿ ಆರಂಭಿಸಲಾಗುವುದು' ಎಂದರು.

## ಹೊಸ ಫ್ಲೈಓವರ್ ಮೇಲೆ ಬೈಕ್ ಓಡಿಸಿದ ಡಿಕೆಶಿ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಗರಾಭಿವೃದ್ಧಿ ಸಚಿವರು ಆಗಿರುವ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಂಗಳವಾರ ನಗರದ ಹೊಸ ಮೇಲ್ಸೇತುವೆಯೊಂದರ ಮೇಲೆ ಬೈಕ್ ಓಡಿಸಿ ಗಮನ ಸೆಳೆದರು.

ಹೌದು. ಈ ಹಿಂದೆ ವಿಧಾನಸೌಧದ ಮುಂಭಾಗ ಸೈಕಲ್ ತುಳಿದು ಗಮನ ಸೆಳೆದಿದ್ದ ಡಿಕೆ ಶಿವಕುಮಾರ್, ಇಂದು ಹೆಬ್ಬಾಳದ ಹೊಸ ಮೇಲ್ಸೇತುವೆ ಮೇಲೆ ಸ್ಕೂಟರ್ ಓಡಿಸುವ ಮೂಲಕ ಸಾರ್ವಜನಿಕರು. ಅಧಿಕಾರಿಗಳ ಕುತೂಹಲದ ಕೇಂದ್ರ ಬಿಂದುವಾದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದದಿಂದ ಕೈಗೆತ್ತಿಕೊಂಡಿರುವ ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ ಮೇಲ್ಸೇತುವೆ ಕಾಮಗಾರಿಯನ್ನು ಅಧಿಕಾರಿಗಳೊಂದಿಗೆ ವೀಕ್ಷಣೆ ಮಾಡಿದ ಡಿಕೆ ಶಿವಕುಮಾರ್, ಬಳಿಕ ಹೊಸ ಫ್ಲೈಓವರ್ ಮೇಲೆ ಬೈಕ್ ರೈಡ್ ಮಾಡಿ ಸಂಭ್ರಮಿಸಿದರು.

ಕಾರ್ಯಕರ್ತರೊಬ್ಬರ ಡಿಯೋ ಸ್ಕೂಟರ್‌ನ್ನು ಪಡೆದ ಡಿಕೆ ಶಿವಕುಮಾರ್, ಹಿಂಬದಿ ಸೀಟಿನಲ್ಲಿ ಸಚಿವ ಬೈರತಿ ಸುರೇಶ್ ಅವರನ್ನು ಕುಳಿರಿಸಿಕೊಂಡು ಹೊಸ ಫ್ಲೈಓವರ್ ಮೇಲೆ ಒಂದು ರೌಂಡ್ ಬಂದರು. ಈ ಮೂಲಕ ಕಾರ್ಯಕರ್ತರಲ್ಲಿಯೂ ಉತ್ಸಾಹ ಹೆಚ್ಚಿಸಿದರು.



ಉದಯವಾಹಿನಿ ಚಿತ್ರ

ಡಿಕೆ ಶಿವಕುಮಾರ್ ಪರ ಕಾರ್ಯಕರ್ತರು ಘೋಷಣೆ ಹರ್ಷೋದ್ಗಾರ ಮೊಳಗಿಸಿದರು. ಕಾರ್ಯಕರ್ತರೊಬ್ಬರ ಡಿಯೋ ಸ್ಕೂಟರ್‌ನ್ನು ಪಡೆದ ಡಿಕೆ ಶಿವಕುಮಾರ್, ಹಿಂಬದಿ ಸೀಟಿನಲ್ಲಿ ಸಚಿವ ಬೈರತಿ ಸುರೇಶ್ ಅವರನ್ನು ಕುಳಿರಿಸಿಕೊಂಡು ಹೊಸ ಫ್ಲೈಓವರ್ ಮೇಲೆ ಒಂದು ರೌಂಡ್ ಬಂದರು.

ಈ ಮೂಲಕ ಕಾರ್ಯಕರ್ತರಲ್ಲಿಯೂ ಉತ್ಸಾಹ ಹೆಚ್ಚಿಸಿದರು. ಡಿಕೆಶಿ ಪರ ಕಾರ್ಯಕರ್ತರು ಘೋಷಣೆ ಹರ್ಷೋದ್ಗಾರ ಮೊಳಗಿಸಿದರು ಇನ್ನು ಡಿಕೆಶಿ ಹಿಂದೆಯೇ ಶಾಸಕ ಎನ್‌ಎ ಹ್ಯಾರಿಸ್ ಕೂಡಾ ಬೈಕ್‌ನಲ್ಲಿ ರೌಂಡ್ ಹೊಡೆದರು. ಡಿಕೆಶಿ ಹೆಲ್ಮೆಟ್ ಹಾಕಿಕೊಂಡು ಗಾಡಿ ಓಡಿಸಿದ್ರೆ, ಹೆಲ್ಮೆಟ್ ಹಾಕದೇ ಹ್ಯಾರಿಸ್ ಗಾಡಿ ಓಡಿಸಿದರು.

## ಸಾರಿಗೆ ನೌಕರರ ಮುಷ್ಕರ: ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ

• ಉದಯವಾಹಿನಿ, ಬೆಂಗಳೂರು

ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರು ರಾಜ್ಯಾದ್ಯಂತ ನಡೆಸುತ್ತಿರುವ ಮುಷ್ಕರಿಂದ ಇಲ್ಲಿಯವರೆಗೂ ಯಾವುದೇ ದೊಡ್ಡ ಅಹಿತಕರ ಘಟನೆಗಳು ನಡೆದಿಲ್ಲ. ಪೊಲೀಸರು ಅಗತ್ಯ ಸುರಕ್ಷತಾ ಕ್ರಮ ಕೈಗೊಂಡಿದ್ದು, ಮುಷ್ಕರದ ಹೊರತಾಗಿ ಕೆಲವು ಬಸ್‌ಗಳು ಓಡಾಡುತ್ತಿವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಎಎನ್‌ಐ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, ಸಾರಿಗೆ ನೌಕರರ ಮುಷ್ಕರ ನಡೆಯುತ್ತಿದೆ. ಆದರೆ ಇಲ್ಲಿಯವರೆಗೂ ಯಾವುದೇ ದೊಡ್ಡ ಅಹಿತಕರ ಘಟನೆಗಳು ನಡೆದಿಲ್ಲ. ಪೊಲೀಸರು ಈಗಾಗಲೇ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ ಎಂದರು. ಸಂಪೂರ್ಣ ಬಂದ್ ಆಗಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿತ್ತು. ಸಾರಿಗೆ ನೌಕರರ ಒಂದು ಒಕ್ಕೂಟ ಅಥವಾ ಗುಂಪೊಂದು ಬಸ್ ಗಳ ಕಾರ್ಯಾಚರಣೆ ಮಾಡುತ್ತಿದ್ದು, ಅಂತಹ



ಯಾವುದೇ ತೊಂದರೆ ಆಗಿಲ್ಲ ಎಂದರು. ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(ಕೆಎಸ್ ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(ಬಿಎಂಟಿಸಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ(ಕೆಕೆಆರ್‌ಟಿಸಿ) ಮತ್ತು ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯುಕೆಆರ್‌ಟಿಸಿ)ಯ ನೌಕರರು ಬೆಳಗ್ಗೆಯಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದು, ಹಲವು ಕಡೆ ಸಾರಿಗೆ ಸಂಸ್ಥೆಯ ಬಸ್‌ಗಳು ರಸ್ತೆಗೆ ಇಳಿಯದ ಕಾರಣ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿದೆ. ಮುಷ್ಕರದಿಂದಾಗಿ ಕೆಂಪೇಗೌಡ ಬಸ್ ನಿಲ್ದಾಣ ಮೆಜೆಸ್ಟಿಕ್, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣದಲ್ಲಿ ನೂರಾರು ಪ್ರಯಾಣಿಕರು ಪರದಾಡುತ್ತಿದ್ದರು.

> ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ಎಲ್ಲಾ ಬಿಎಂಟಿಸಿ ಬಸ್‌ಗಳು ಸಂಚರಿಸುತ್ತಿವೆ. ಮುಷ್ಕರದ ಹೊರತಾಗಿಯೂ ಶೇ. 40 ರಷ್ಟು ಕೆಎಸ್ ಆರ್ ಟಿಸಿ ಬಸ್‌ಗಳು ಓಡಾಡುತ್ತಿವೆ. ಮುಷ್ಕರದ ಸಂಬಂಧ ಅರ್ಜಿಯನ್ನೊಂದರ ವಿಚಾರಣೆ ನಡೆಸಿದ ಹೈಕೋರ್ಟ್, ಮುಷ್ಕರವನ್ನು ಒಂದು ದಿನ ಮುಂದೂಡುವಂತೆ ಹೇಳಿತ್ತು. ಆದಾಗ್ಯೂ ಕೋರ್ಟ್ ಆದೇಶ ಉಲ್ಲಂಘಿಸಿ ಕೆಲ ನೌಕರರು ಮುಷ್ಕರ ನಡೆಸುತ್ತಿದ್ದಾರೆ. ಈಗ ಕೋರ್ಟ್ ಆದೇಶಕ್ಕಾಗಿ ಕಾಯುತ್ತಿದ್ದೇವೆ. ಮುಷ್ಕರದ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಬಸ್‌ಗಳನ್ನು ವ್ಯವಸ್ಥೆ ಮಾಡಿದ್ದೇವೆ ಎಂದು ರೆಡ್ಡಿ ಹೇಳಿದರು.

# ಕೆಎಚ್‌ಬಿ ವಸತಿ ಯೋಜನೆಗೆ ಕೂಡಿಬಂದ ಮುಹೂರ್ತ

### ಸೂರ್ಯ ಶೈನ್ ಮತ್ತು ಸೂರ್ಯ ಡಿವೈನ್ ವಸತಿ ಸಮುಚ್ಚಯ ನಿರ್ಮಾಣ ಯೋಜನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಗೃಹ ಮಂಡಳಿಯು (ಕೆಎಚ್‌ಬಿ) ನಗರದಲ್ಲಿ ರೂಪಿಸಲು ಉದ್ದೇಶಿಸಿರುವ 'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ವಸತಿ ಸಮುಚ್ಚಯ ನಿರ್ಮಾಣ ಯೋಜನೆಗಳನ್ನು 18 ತಿಂಗಳಲ್ಲಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಿದ್ದು, ಈ ತಿಂಗಳ ಅಂತ್ಯಕ್ಕೆ ಕಾಮಗಾರಿಗೆ ಚಾಲನೆ ಸಿಗಲಿದೆ.

ಆನೇಕಲ್ ತಾಲ್ಲೂಕು ವ್ಯಾಪ್ತಿಯ ಚಂದಾಪುರ-ಆನೇಕಲ್ ರಸ್ತೆಯಲ್ಲಿರುವ ಸೂರ್ಯನಗರ 1ನೇ ಹಂತದಲ್ಲಿನ ಮಂಡಳಿಯ ಜಾಗದಲ್ಲಿ ಅತ್ಯಾಧುನಿಕ ಮತ್ತು ಅತ್ಯಾಕರ್ಷಕ 50 ಸಂಖ್ಯೆಯ 3 ಬಿಎಚ್‌ಕೆ ಫ್ಲ್ಯಾಟ್‌ಗಳ ಸೂರ್ಯ ಶೈನ್ ಹಾಗೂ 40 ಸಂಖ್ಯೆಯ 2 ಬಿಎಚ್‌ಕೆ ಫ್ಲ್ಯಾಟ್‌ಗಳ 'ಸೂರ್ಯ ಡಿವೈನ್' ಯೋಜನೆಗಳನ್ನು ಕೆಎಚ್‌ಬಿ ರೂಪಿಸಿತ್ತು. ಅಲ್ಲದೆ, ಜನವರಿ ಮತ್ತು ಫೆಬ್ರವರಿಯಲ್ಲಿ ಬೇಡಿಕೆ ಸಮೀಕ್ಷೆ ಸಹ ನಡೆಸಿತ್ತು. ಈ ಎರಡೂ ಯೋಜನೆಗಳಿಗೆ ಗ್ರಾಹಕರಿಂದ ನಿರೀಕ್ಷೆಗೂ ಮೀರಿ ಬೇಡಿಕೆ ವ್ಯಕ್ತವಾಗಿತ್ತು. ಸದ್ಯ ಈ ಯೋಜನೆಗಳನ್ನು ಏಕಕಾಲದಲ್ಲಿ ಶೀಘ್ರವೇ ಪೂರ್ಣಗೊಳಿಸಲು ಮಂಡಳಿ ಮುಂದಾಗಿದೆ. ಇದೇ ಮಾದರಿಯ ಮತ್ತೊಂದು ಯೋಜನೆಕೈಗೊಳ್ಳಲು ಮಂಡಳಿ ಚಿಂತನೆ ನಡೆಸಿದೆ.

**101 ಕೋಟಿ ರೂ. ಅಂದಾಜು ವೆಚ್ಚ:** ಸೂರ್ಯನಗರ 4 ನೇ ಹಂತದಲ್ಲಿ 3 ಬಿಎಚ್‌ಕೆ, 3.5 ಬಿಎಚ್‌ಕೆ, 4 ಬಿಎಚ್‌ಕೆಯ ಡೂಪ್ಲೆಕ್ಸ್ ಮನೆಗಳನ್ನು ನಿರ್ಮಿಸುವ 'ಸೂರ್ಯ ನಿಸರ್ಗ ವ್ಯಾಲಿ ಯೋಜನೆಯ ಜಾರಿಗೆ ಮಂಡಳಿಯು ಈಗಾಗಲೇ



ಉದಯವಾಹಿನಿ ಚಿತ್ರ

ಬೇಡಿಕೆ ಸಮೀಕ್ಷೆ ನಡೆಸಿದೆ.

ಈ ಯೋಜನೆಗೂ ಮುನ್ನ ಸೂರ್ಯ ಶೈನ್ ಮತ್ತು 'ಸೂರ್ಯ ಡಿವೈನ್ ಯೋಜನೆಗಳನ್ನು 101 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಒಂದೂವರೆ ಎಕರೆಯಲ್ಲಿ ಜಾರಿಗೊಳಿಸುತ್ತಿದೆ. ಯೋಜನೆಯ ಉದ್ದೇಶಿತ ಪ್ರದೇಶವು ಸೂರ್ಯ ಮಾಲ್ ಎದುರಿಗೆ ಇದ್ದು, ಎಲೆಕ್ಟ್ರಾನಿಕ್ ಸಿಟಿ, ನಾರಾಯಣ ಹೃದಯಾಲಯಕ್ಕೆ ಸಮೀಪವಾಗಲಿದೆ. ಶೀಘ್ರದಲ್ಲಿಮೆಟ್ರೊ ರೈಲು ಸಂಪರ್ಕವೂ ಸಿಗಲಿದೆ.

**ಮತ್ತೊಂದು ಯೋಜನೆಗೆ ಪ್ಲಾನ್:** ಈ ಎರಡೂ ಯೋಜನೆಗಳ 90 ಫ್ಲ್ಯಾಟ್‌ಗಳಿಗೆ ನಡೆಸಿದ ಬೇಡಿಕೆ ಸಮೀಕ್ಷೆಯಲ್ಲಿ ಸುಮಾರು 800 ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗುವ ಮೂಲಕ ಭಾರೀ ಬೇಡಿಕೆ ಸೃಷ್ಟಿಯಾಗಿದೆ. ಅರ್ಜಿದಾರರೆಲ್ಲರೂ ಆರಂಭಿಕ ಠೇವಣಿ ಪಾವತಿಸಿದ್ದಾರೆ. ಆದರೆ, ಲಾಟರಿ ಪ್ರಕ್ರಿಯೆಯಲ್ಲಿ 90 ಮಂದಿಗೆ ಮಾತ್ರ ಫ್ಲ್ಯಾಟ್ ಸಿಗಲಿದೆ. ಹೀಗಾಗಿ, 'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ಮಾದರಿಯಲ್ಲೇ ಮತ್ತೆರಡು ಯೋಜನೆ ಹಮ್ಮಿಕೊಳ್ಳಬಹುದೇ ಎಂಬ ಬಗ್ಗೆ ಮಂಡಳಿ ಚಿಂತನೆ ನಡೆಸಿದೆ.

ನಗರದ ಯಲಹಂಕ, ಕೆಂಗೇರಿ ಮತ್ತು ಸೂರ್ಯ ನಗರದಲ್ಲಿನ ಮಂಡಳಿಯ ಜಾಗದಲ್ಲಿ ಎಲ್ಲಿ ಯೋಜನೆ ಜಾರಿ ಮಾಡಬಹುದೆಂಬ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ, ನಂತರ ಅಂತಿಮ ನಿರ್ಧಾರ ಕೈಗೊಳ್ಳಲಿದೆ. ಈ ಎಲ್ಲದಕ್ಕೂ ರೂಪುರೇಷೆ ಸಿದ್ಧಗೊಳ್ಳುವ ವೇಳೆಗೆ 'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ಯೋಜನೆಗಳನ್ನು 18 ತಿಂಗಳ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಗಡುವು ನೀಡಿದ್ದು, ಆಗಸ್ಟ್ ಅಂತ್ಯಕ್ಕೆ ಕಾಮಗಾರಿ ಆರಂಭಿಸುತ್ತೇವೆ ಎಂದು ಮಂಡಳಿಯ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

**ದರ ವಿವರ**

- ಸೂರ್ಯ ಶೈನ್ 3 ಬಿಎಚ್‌ಕೆ ಫ್ಲ್ಯಾಟ್ (2,250 ಚ.ಅಡಿ): 1.60 ಕೋಟಿ ರೂ.ನಿಂದ ಆರಂಭ
- ಸೂರ್ಯ ಡಿವೈನ್ 2 ಬಿಎಚ್‌ಕೆ ಫ್ಲ್ಯಾಟ್ (1,340 ಚ.ಅಡಿ): 88 ಲಕ್ಷ ರೂ.ನಿಂದ ಆರಂಭ

**ಯೋಜನೆ ಪೂರ್ಣಕ್ಕೆ 18 ತಿಂಗಳ ಕಾಲಮಿತಿ ನಿಗದಿ**

**ಅತ್ಯಾಧುನಿಕ, ಅತ್ಯಾಕರ್ಷಕ ಸೌಕರ್ಯ**

ಎರಡೂ ಯೋಜನೆಗಳು ಅತ್ಯಾಧುನಿಕ ಕ್ಲಬ್ ಹೌಸ್, ಲೈಬ್ರರಿ, ಜಿಮ್, ಪಾರ್ಟಿ ಹಾಲ್, ಈಜು ಕೊಳ ಸೌಕರ್ಯಗಳನ್ನು ಹೊಂದಿವೆ. ಅಲ್ಲದೆ, ಒಳಾಂಗಣ ಕ್ರೀಡಾಂಗಣ ವ್ಯವಸ್ಥೆ, ವಾಹನಗಳ ಪಾರ್ಕಿಂಗ್, ಹೊರಾಂಗಣ ಸೋಲಾರ್, ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್, ಮಕ್ಕಳ ಆಟದ ಮೈದಾನ, ದಿನದ 24 ತಾಸೂ ಭದ್ರತಾ ಸೇವೆ ಇದೆ. ಕಾವೇರಿ ಕುಡಿಯುವ ನೀರಿನ ಸಂಪರ್ಕ ಮತ್ತು ಮಳೆ ನೀರು ಕೊಯ್ಲು ಪದ್ಧತಿಯನ್ನೂ ಅಳವಡಿಸಲಾಗುತ್ತದೆ.

## ಸಾರಿಗೆ ನೌಕರರ ಮುಷ್ಕರದ ಎಫೆಕ್ಟ್ ನಮ್ಮ ಮೆಟ್ರೋಗೆ ಜನವೋ ಜನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ವೇತನ ಹಿಂಬಾಕಿ, ಸಂಬಳ ಹೆಚ್ಚಳ ಸೇರಿ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಂದಿನಿಂದ ಸಾರಿಗೆ ನೌಕರರ ಮುಷ್ಕರಕ್ಕೆ ಇಳಿದಿದ್ದಾರೆ. ಈ ಎಫೆಕ್ಟ್‌ನಿಂದಾಗಿ ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ಪ್ರಯಾಣಿಕರು ಸಾಲುಗಟ್ಟಿ ನಿಂತಿದ್ದಾರೆ. ಬಸ್ ಸರಿಯಾಗಿ ಸಿಗದೆ ಪರದಾಡುತ್ತಿರುವ ಜನರು ಮೆಟ್ರೋದ ಮೊರೆ ಹೋಗಿದ್ದಾರೆ. ಇದೀಗ ಮೆಟ್ರೋ ನಿಲ್ದಾಣಗಳಲ್ಲಿ ಎಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಓಡಾಡ್ತಿದ್ದಾರೆ. ದಿನನಿತ್ಯಕ್ಕಿಂತ ಮೆಟ್ರೋ ಪ್ರಯಾಣಿಕರು ಹೆಚ್ಚಾಗಿರುವುದರಿಂದ ತೊಂದರೆಯಾಗದಂತೆ ಮೆಟ್ರೋ ಸಿಬ್ಬಂದಿಗಳ ನಿಯೋಜನೆ ಮಾಡಲಾಗಿದೆ. ಮೆಟ್ರೋ ನಿಲ್ದಾಣದ ಹೊರಗಿನಿಂದಲೂ ಪ್ರಯಾಣಿಕರು ಕ್ಯೂ ನಿಂತಿದ್ದಾರೆ. ಮೆಜೆಸ್ಟಿಕ್ ಮೆಟ್ರೋ ನಿಲ್ದಾಣದ ಮುಂಭಾಗದಲ್ಲಿ ಕ್ಯೂ ಗಟ್ಟಲೆ ಪ್ರಯಾಣಿಕರು ಜಮಾಯಿಸಿದ್ದರಿಂದ ಮೆಟ್ರೋ ನಿಲ್ದಾಣದ ಬಳಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ.

ಬಸ್‌ಗಳ ಸಂಚಾರ ಕಡಿಮೆ ಆಗಿದ್ದರಿಂದ ಹಲವರು ಸ್ವಂತ ವಾಹನಗಳಲ್ಲೇ ಸಂಚಾರ ಮಾಡುತ್ತಿದ್ದಾರೆ. ಸರ್ಕಾರದ ವಿರುದ್ಧ ಸಾರಿಗೆ ನೌಕರರು ಸಿಡಿದಿದ್ದರಿಂದ ಸಾರ್ವಜನಿಕರ ಬಸ್ ಸಂಚಾರವಿಲ್ಲದೇ ಪರದಾಡುವಂತಾಗಿದೆ.

# ನಂಜನಗೂಡಿನಲ್ಲಿ ಅಕ್ರಮ ಯೂರಿಯಾ ಗೊಬ್ಬರದ ದಾಸ್ತಾನು ಪತ್ತೆ

• ಉದಯವಾಹಿನಿ, ನಂಜನಗೂಡು :

ರಾಜ್ಯಾದ್ಯಂತ ಯೂರಿಯಾ ರಸಗೊಬ್ಬರದ ಕೊರತೆ ಬೆನ್ನಲ್ಲೇ ಇದೀಗ ಅಕ್ರಮ ಯೂರಿಯಾ ಗೊಬ್ಬರದ ದಾಸ್ತಾನು ಪತ್ತೆಯಾಗಿದೆ. ರಾಜ್ಯದ ರೈತರಿಗೆ ಸೇರಬೇಕಾದ ಯೂರಿಯಾ ಗೊಬ್ಬರವನ್ನು ಅನ್ಯ ರಾಜ್ಯಗಳಿಗೆ ಅಕ್ರಮವಾಗಿ ಸಾಗಾಣಿಕೆ ಮಾಡಲಾಗುತ್ತಿತ್ತು. ಗೋದಾಮಿನಲ್ಲಿ ಯೂರಿಯಾ ಗೊಬ್ಬರದ ಸಮೇತ ದಂಧೆಕೋರರು ಸಿಕ್ಕಿ ಬಿದ್ದಿದ್ದಾರೆ. ನಂಜನಗೂಡಿನ ಹುಲ್ಲಹಳ್ಳ ರಸ್ತೆಯಲ್ಲಿರುವ ಗೌಸಿಯಾ ರೈಸ್ ಮಿಲ್‌ನ ಗೋದಾಮಿನಲ್ಲಿ ಯೂರಿಯಾ ಗೊಬ್ಬರ ಪತ್ತೆಯಾಗಿದೆ.

**ಗೋದಾಮಿಗೆ ಬೀಗ:** ಅಕ್ರಮವಾಗಿ ಯೂರಿಯಾ ಗೊಬ್ಬರ ಶೇಖರಿಸಿಟ್ಟಿದ್ದ ಗೋದಾಮಿನ ಮೇಲೆ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆ ಸದಸ್ಯರು ದಾಳಿ ನಡೆಸಿದ್ದಾರೆ. ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ವಿದ್ಯಾಸಾಗರ್, ತಾಲ್ಲೂಕು ಅಧ್ಯಕ್ಷ ಸತೀಶ್ ರಾವ್ ನೇತೃತ್ವದಲ್ಲಿ ದಾಳಿ ನಡೆಸಿ ಗೋದಾಮಿಗೆ ಬೀಗ ಹಾಕಲಾಗಿದೆ. ಸ್ಥಳಕ್ಕೆ ಕೃಷಿ ಅಧಿಕಾರಿ ರವಿ, ಕಂದಾಯ ಇಲಾಖೆ ಅಧಿಕಾರಿ ರಾಜು, ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಸುನಿಲ್ ಕುಮಾರ್, ರೈತ ಮುಖಂಡ ರಘು ಮೊದಲಾದವರು ಭೇಟಿ ನೀಡಿ ಪರಿಶೀಲನೆ, ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.


ಉದಯವಾಹಿನಿ ಚಿತ್ರ

**ಅನ್ಯ ರಾಜ್ಯಗಳಿಗೆ ಅಕ್ರಮವಾಗಿ ಮಾರಾಟ**

ಕೇಂದ್ರ ಸರ್ಕಾರ ಸಬ್ಸಿಡಿ ಮುಖಾಂತರ ರೈತರ ಅನುಕೂಲಕ್ಕಾಗಿ ಯೂರಿಯಾ ಗೊಬ್ಬರ ಸುಲಭವಾಗಿ ಸಿಗಲಿ ಎಂದು ಕಡಿಮೆ ಬೆಲೆ ನಿಗದಿಪಡಿಸಿದೆ. ಆದರೆ, ಅಧಿಕ ಹಣಕ್ಕಾಗಿ ಅನ್ಯ ರಾಜ್ಯಗಳಿಗೆ ಅಕ್ರಮವಾಗಿ ಮಾರಾಟ ಮಾಡಿ ರಾಜ್ಯದ ರೈತರಿಗೆ ವಂಚಿಸಿ ಅಕ್ರಮ ದಂಧೆಯಲ್ಲಿ ತೊಡಗಿದ್ದಾರೆ. ಕಳೆದ 20 ದಿನಗಳಿಂದ ಎಷ್ಟು ಮೂಟೆ ಯೂರಿಯಾ ಅಕ್ರಮವಾಗಿ ಸಾಗಾಣಿಕೆ ಮಾಡಿದ್ದಾರೆ ಎಂಬುದನ್ನು ಸಿಸಿ ಕ್ಯಾಮೆರಾ ಪರಿಶೀಲಿಸಿ ಪತ್ತೆ ಹಚ್ಚಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ವಿದ್ಯಾಸಾಗರ್ ಒತ್ತಾಯಪಡಿಸಿದ್ದಾರೆ.

## ದುರಾಡಳಿತ ಸರ್ಕಾರ: ಜೆಡಿಎಸ್ ಟೀಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

ರಾಜ್ಯ ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಇದು ದುರಾಡಳಿತ ಸರ್ಕಾರ, ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಜೆಡಿಎಸ್ ಮುಖಂಡರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು. ಅಶೋಕ ರಸ್ತೆಯ ಜೆಡಿಎಸ್ ಕಚೇರಿಯಿಂದ ಜಿಲ್ಲಾಧಿಕಾರಿ ಕಚೇರಿ ತನಕ ಪ್ರತಿಭಟನಾ ಮೆರವಣಿಗೆ ನಡೆಯಿತು. ನೂರಾರು ಜನ ಭಾಗವಹಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 2 ವರ್ಷದಿಂದ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಲಂಚಗುಳಿತನ, ದುರಾಡಳಿತ, ಆಡಳಿತ ವೈಫಲ್ಯತೆಯಿಂದ ಜನರ ಆಕ್ರೋಶಕ್ಕೆ ತುತ್ತಾಗಿದೆ. ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜ ಪೂರೈಸುವಲ್ಲಿ ವಿಫಲವಾಗಿದೆ. ಮುಂಜಾಗ್ರತಾ ಕ್ರಮವಾಗಿ ಗೊಬ್ಬರ ದಾಸ್ತಾನು ಮಾಡದೆ ನಿರ್ಲಕ್ಷ್ಯ ವಹಿಸಿದೆ. ಈಗ ರೈತರು ಗೊಬ್ಬರಕ್ಕಾಗಿ ಪರದಾಡುತ್ತಿದ್ದಾರೆ ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಸಿ.ಆಂಜನಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕರಿಗೆ ರಾಜ್ಯದ ಜನ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ. ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು ರೈತರ ಸಮಸ್ಯೆಗೆ ಸ್ಪಂದಿಸಬೇಕು. ಇಲ್ಲವೆ ಅಧಿಕಾರ ಬಿಟ್ಟು ತೊಲಗಲಿ ಎಂದರು. ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ, ರಾಜ್ಯದಲ್ಲಿ ಭ್ರಷ್ಟ ಸರ್ಕಾರ ಅಧಿಕಾರದಲ್ಲಿದೆ. ರೈತರು ರಸಗೊಬ್ಬರಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರ ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ. ಕೇಂದ್ರ ಸರಬರಾಜು ಮಾಡಿದ್ದ ರಸಗೊಬ್ಬರ ರೈತರಿಗೆ ಹಂಚಿಕೆ ಮಾಡದೆ, ದಲ್ಲಾಳಿಗಳ ಮೂಲಕ ಕಾಳಸಂತೆಯಲ್ಲಿ ಮಾರಾಟ ಮಾಡಿದೆ ಎಂದು ದೂರಿದರು.

### ಎಚ್.ಸಿ ಮಹದೇವಪ್ಪ ಹೇಳಿಕೆ ಖಂಡಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ಪ್ರತಿಭಟನೆ

## ಕೆಆರ್‌ಎಸ್ ಇತಿಹಾಸವನ್ನು ತಿರುಚಿದ್ದಾರೆ

• ಉದಯವಾಹಿನಿ, ಮೈಸೂರು

ಕೆಆರ್‌ಎಸ್‌ಗೆ ಅಡಿಪಾಯ ಹಾಕಿದ್ದು ಟಿಪ್ಪು ಸುಲ್ತಾನ್ ಎಂದಿರುವ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಹೇಳಿಕೆ ಖಂಡಿಸಿ, ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು. ಮಹದೇವಪ್ಪ ಅವರು ಟಿಪ್ಪು ಸುಲ್ತಾನರನ್ನು ವೈಭವೀಕರಿಸುವ ಭರದಲ್ಲಿ ಲಕ್ಷಾಂತರ ರೈತರ ಜೀವನಾಡಿಯಾದ ಕೆಆರ್‌ಎಸ್ ಇತಿಹಾಸವನ್ನು ತಿರುಚಿದ್ದಾರೆ.

**ಲಕ್ಷಾಂತರ ರೈತರ ಜೀವನಾಡಿ**

ಮಹದೇವಪ್ಪ ಅವರು ಇತಿಹಾಸ ತಿಳಿದು ಮಾತನಾಡಬೇಕು, ಎಂದು ಕಿಡಿಕಾರಿದರು. ವೇದಿಕೆ ಅಧ್ಯಕ್ಷ ಬಿ.ಬಿ.ರಾಜಶೇಖರ್ ಮಾತನಾಡಿ ಟಿಪ್ಪುಗೂ ಮೊದಲು ಮೈಸೂರು ಅರಸರು ಜಲಾಶಯ ನಿರ್ಮಿಸಲು ಯೋಜನೆ ರೂಪಿಸಿದ್ದರು . 1595ರಲ್ಲಿ ದಳವಾಯಿ ಕುಮಾರ ರಾಮ, 1659–1673ರ ನಡುವೆ ಕಂಠೀರವ ನರಸರಾಜ ಒಡೆಯರ್ ಅವರು ಶ್ರೀರಂಗಪಟ್ಟಣದ ಉತ್ತರದಲ್ಲಿ ಅಣೆಕಟ್ಟನ್ನು ನಿರ್ಮಿಸಿದ್ದರು. 1638–1659 ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ಕಾವೇರಿಗೆ ಒಂದು ಅಣೆಕಟ್ಟೆ ಕಟ್ಟಲು ಪ್ರಯತ್ನಿಸಿದ್ದರು. ತದ ನಂತರ ಟಿಪ್ಪು ಸುಲ್ತಾನ್ ಕೂಡ ಅಣೆಕಟ್ಟೆ ಕಟ್ಟಲು ಶಂಕುಸ್ಥಾಪನೆ ನೆರವೇರಿಸಿದ್ದರು ಎಂದರು. ಈ ಬಗ್ಗೆ ಪರ್ಶಿಯನ್ ಭಾಷೆಯಲ್ಲಿ ಅವರು ಬರೆಸಿದ್ದ ಶಾಸನ 1911ರಲ್ಲಿ ಪತ್ತೆಯಾಗಿತ್ತು.



ಉದಯವಾಹಿನಿ ಚಿತ್ರ

**ಮೊದಲ ಪುಟದಿಂದ ಇತಿಹಾಸ ತಿಳಿಯದ ಮಹದೇವಪ್ಪ**

ನಮ್ಮ ಮೊದಲ ಪುಟದಿಂದ ಇಂತಹ ಇತಿಹಾಸ ತಿಳಿಯದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಕೇವಲ ಟಿಪ್ಪು ಸುಲ್ತಾನ್ ಅವರನ್ನು ಮಾತ್ರ ನೆನಪಿಸಿಕೊಳ್ಳುವುದು ಸರಿಯಲ್ಲ. ಅದಕ್ಕೂ ಮೊದಲು ಜಲಾಶಯ ಕಟ್ಟಲು ನಿರ್ಧರಿಸಿದ್ದ ಮೈಸೂರು ಅರಸರನ್ನೂ ನೆನಪಿಸಿಕೊಳ್ಳಬೇಕಿತ್ತು ಎಂದು ಕಿಡಿಕಾರಿದರು.

ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೆಆರ್‌ಎಸ್ ಜಲಾಶಯ ನಿರ್ಮಿಸುವಾಗ ಅಲ್ಲಿ ಸಿಕ್ಕಿದ ಟಿಪ್ಪು ಶಾಸನವನ್ನು ಕನ್ನಡದಲ್ಲಿ ಬರೆಸಿ ಜಲಾಶಯದ ದ್ವಾರದ ಬಳಿ ಇರಿಸಿದ್ದು ಸಹ ನಾಲ್ವಡಿ ಅವರ ಹೆಗ್ಗಳಿಗೆ. ಕೆಆರ್ ಎಸ್ ಜಲಾಶಯದ ಇತಿಹಾಸವನ್ನು ಇತಿಹಾಸ ತಜ್ಞರು ಸಂಶೋಧನೆಯನ್ನು ನಡೆಸಿ ದಳವಾಯಿ ಕುಮಾರ ರಾಮ, ಚಿಕ್ಕದೇವರಾಜ ಒಡೆಯರು, ಕಂಠೀರವ ನರಸರಾಜ ಒಡೆಯರ್ ಸಹ ಅಣೆಕಟ್ಟು ನಿರ್ಮಿಸಲು ಪ್ರಯತ್ನಿಸಿದರು ಎಂಬುದಾಗಿ ಇತಿಹಾಸದಲ್ಲಿ ದಾಖಲಿಸಿದ್ದಾರೆ. ಇವರ ಹೆಸರುಗಳನ್ನು ಬಿಟ್ಟು ಬರಿ ಟಿಪ್ಪು ಸುಲ್ತಾನ್ ಅಡಿಪಾಯ ಹಾಕಿದರು ಎನ್ನುವ ಹೇಳಿಕೆಯನ್ನು ಒಂದು ಸಮುದಾಯ, ಒಂದು ವರ್ಗವನ್ನು ಓಲೈಕೆ ಮಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಓಲೈಸುವ ತಂತ್ರ ಎಂದು ಆಕ್ರೋಶ**

ಕೆಆರ್‌ಎಸ್‌ಗೆ ಟಿಪ್ಪು ಸುಲ್ತಾನ್ ಅಡಿಪಾಯ ಹಾಕಿದರು ಎಂಬ ಸಚಿವ ಮಹದೇವಪ್ಪ ಅವರ ಹೇಳಿಕೆಯನ್ನು ಕನ್ನಡಾಂಬೆ ರಕ್ಷಣಾ ವೇದಿಕೆ ಖಂಡಿಸಿದೆ. ಟಿಪ್ಪುವನ್ನು ವೈಭವೀಕರಿಸುವ ಭರದಲ್ಲಿ ಕೆಆರ್‌ಎಸ್‌ನ ಇತಿಹಾಸ ತಿರುಚಲಾಗಿದೆ ಎಂದು ಆರೋಪಿಸಿ ಗಾಂಧಿವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ಟಿಪ್ಪುವಿಗೂ ಮುನ್ನ ಮೈಸೂರು ಅರಸರು ಜಲಾಶಯಕ್ಕೆ ಯೋಜನೆ ರೂಪಿಸಿದ್ದರು ಎಂದು ವೇದಿಕೆ ಅಧ್ಯಕ್ಷ ರಾಜಶೇಖರ್ ತಿಳಿಸಿದರು. ಸಂಪೂರ್ಣ ಇತಿಹಾಸ ತಿಳಿಯದೆ ಬರಿ ಟಿಪ್ಪು ಸುಲ್ತಾನರನ್ನು ನೆನೆಸಿಕೊಳ್ಳುವುದು ಸರಿಯಲ್ಲ. ಸಚಿವರ ಹೇಳಿಕೆ ಒಂದು ವರ್ಗವನ್ನು ಓಲೈಸುವ ತಂತ್ರವೆಂದು ಆಕ್ರೋಶ ವ್ಯಕ್ತಪಡಿಸಿದರು.

## ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರ ರಾಜೀನಾಮೆಗೆ ಒತ್ತಾಯ

• ಉದಯವಾಹಿನಿ, ಚನ್ನಪಟ್ಟಣ

ನಗರದ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಗೋವಿಂದಹಳ್ಳಿ ಜಿ.ಎಚ್.ನಾಗರಾಜು ಅವರು ಅಧಿಕಾರ ಹಂಚಿಕೆ ಒಪ್ಪಂದದಂತೆ ಈ ಕೂಡಲೇ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಜೆಡಿಎಸ್ ಬೆಂಬಲಿತ ಬ್ಯಾಂಕ್ ನಿರ್ದೇಶಕರು ಒತ್ತಾಯಿಸಿದ್ದಾರೆ. ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧ್ಯಕ್ಷರು ರಾಜೀನಾಮೆ ನೀಡದಿದ್ದರೆ ಅಧ್ಯಕ್ಷರ ವಿರುದ್ಧ ಹೋರಾಟದ ಜೊತೆಗೆ ಅವಿಶ್ವಾಸ ತರಲಾಗುವುದು ಎಂದು ನಿರ್ದೇಶಕರಾದ ಇಗ್ಗಲೂರು ಡಿಎಂಕೆ ಕುಮಾರ್, ಮಾಗನೂರು ಡಿ.ಗಂಗರಾಜು, ಬೈರನರಸಿಂಹಯ್ಯ, ಗರಕಹಳ್ಳಿ ಸಿದ್ದರಾಜು, ಬಿ.ವಿ. ಮೋಹನ್ ಹಾಗೂ ಇತರರು ಎಚ್ಚರಿಕೆ ನೀಡಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ತಲಾ 5 ಮಂದಿ ಆಕಾಂಕ್ಷಿಗಳಿದ್ದರು. ಪಕ್ಷದ ವರಿಷ್ಠರ ತೀರ್ಮಾನದಂತೆ ತಲಾ ಐದು ಮಂದಿಗೂ ಒಬ್ಬೊಬ್ಬರಿಗೆ ಒಂದು ವರ್ಷ ಅಧಿಕಾರ ಹಂಚಿಕೆ ಮಾಡಲಾಗಿತ್ತು. ಪ್ರಥಮವಾಗಿ ಅಧ್ಯಕ್ಷರಾಗಿ ಗೋವಿಂದಹಳ್ಳಿ ನಾಗರಾಜು ಮತ್ತು ಉಪಾಧ್ಯಕ್ಷರಾಗಿ ಪ್ರಮೀಳಾ ವೆಂಕಟೇಶ್ ಅವರಿಗೆ ಅವಕಾಶ ಮಾಡಿ ಕೊಡಲಾಗಿತ್ತು. ಈ ತೀರ್ಮಾನಕ್ಕೆ ಎಲ್ಲರೂ ಒಪ್ಪಿದ್ದರು. ಆದರೆ, ಅವಧಿ ಮೀರಿ ಎರಡು ವರ್ಷ ಕಳೆದರೂ, ಅಧ್ಯಕ್ಷರು, ಯಾವ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, ಪ್ರತ್ಯೇಕ ಸಭೆ ಮಾಡಿಲ್ಲ.

ಚರ್ಚೆ ನಡೆಸಿಲ್ಲ ಒಪ್ಪಂದದಂತೆ ರಾಜೀನಾಮೆ ಕೊಟ್ಟು ಬೇರೆಯವರಿಗೆ ಅವಕಾಶ ಮಾಡಿಕೊಡಿ ಎಂದು ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ವರಿಷ್ಠರಾದ ಎಚ್ .ಡಿ. ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರು ರಾಜೀನಾಮೆ ನೀಡಲೂ ಸೂಚಿಸಿದ್ದರೂ ನಾಗರಾಜು ಅವರು ಸ್ಪಂದಿಸದೆ ವರಿಷ್ಠರ ಮಾತನ್ನು ಧಿಕ್ಕರಿಸಿದ್ದಾರೆ ಎಂದು ಆರೋಪಿಸಿದರು.


ಉದಯವಾಹಿನಿ ಚಿತ್ರ

**ಹೋರಾಟಕ್ಕೂ ಮುಂದು**

ಪಕ್ಷದ ವರಿಷ್ಠರ ಆದೇಶದಂತೆ ಗೋವಿಂದಹಳ್ಳಿ ನಾಗರಾಜು ಅವರು ಅಧ್ಯಕ್ಷ ಸ್ಥಾನಕ್ಕೆ ಈ ಕೂಡಲೇ ರಾಜೀನಾಮೆ ಕೊಟ್ಟು ಬೇರೆಯವರಿಗೆ ಅವಕಾಶ ನೀಡಬೇಕು. ಇಲ್ಲದಿದ್ದರೆ ನಮ್ಮಲ್ಲಿ ಕೋರಂ ಇದ್ದು ಜೆಡಿಎಸ್ ಬೆಂಬಲಿತ ನಿರ್ದೇಶಕರು, ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಚರ್ಚಿಸಿ, ಅಧ್ಯಕ್ಷರ ವಿರುದ್ಧ ಅವಿಶ್ವಾಸ ತರಲಾಗುವುದು. ಮುಂದಿನ ಹೋರಾಟಕ್ಕೂ ಮುಂದಾಗುವುದಾಗಿ ಎಚ್ಚರಿಕೆ ನೀಡಿದರು.

## ಜಿವಿಎಸ್ ಹೆಸರಿಡಿ; ಕೃಷ್ಣಾ ಹೆಸರು ಬೇಡ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಬಾಗೇಪಲ್ಲಿಯ ಜೀವನಾಡಿ ಚಿತ್ರಾವತಿ ಜಲಾಶಯಕ್ಕೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಹೆಸರು ಇಡಬಾರದು. ಮಾಜಿ ಶಾಸಕ ಜಿ.ವಿ ಶ್ರೀರಾಮರೆಡ್ಡಿ ಅವರ ಹೆಸರು ಇಡಬೇಕು ಎಂದು ಆಗ್ರಹಿಸಿ ಚಿತ್ರಾವತಿ ಹೋರಾಟ ಸಮಿತಿಯು ಬಾಗೇಪಲ್ಲಿಯಿಂದ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದವರೆಗೆ ಬೈಕ್ ರ‍್ಯಾಲಿ ನಡೆಸಿತು. ಚಿತ್ರಾವತಿ ಹೋರಾಟ ಸಮಿತಿ, ಸಿಪಿಎಂ ಕಾರ್ಯಕರ್ತರು ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.

ಎಸ್.ಎಂ.ಕೃಷ್ಣ ಹೆಸರು ಇಡುವುದಾಗಿ ಶಾಸಕ ಎಸ್. ಎನ್.ಸುಬ್ಬಾರೆಡ್ಡಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಘೋಷಿಸಿದ್ದಾರೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಉಸ್ತುವಾರಿ ಸಚಿವರು ತಿಳಿಸಿದ್ದಾರೆ. ಎಸ್.ಎನ್.ಸುಬ್ಬಾರೆಡ್ಡಿ ಇದನ್ನು ಸಮರ್ಥಿಸಿದ್ದಾರೆ. ಚಿತ್ರಾವತಿ ಜಲಾಶಯಕ್ಕೆ ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಅವರ ಹೆಸರನ್ನೇ ಇಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

ಹೋರಾಟ ಮಾಡಿರುವವರ ಹೆಸರು ಬಿಟ್ಟು ಎಸ್. ಎಂ.ಕೃಷ್ಣ ಹೆಸರು ಇಡಲು ಹೊರಟ್ಟಿದ್ದಾರೆ. ಜಲಾಶಯಕ್ಕೆ, ಬಾಗೇಪಲ್ಲಿ ಜನರಿಗೆ ಎಸ್.ಎಂ.ಕೃಷ್ಣ ಕೊಡುಗೆ ಶೂನ್ಯ. ಬಾಗೇಪಲ್ಲಿ ಜನರ ಭಾವನಾತ್ಮಕ ಸಂಬಂಧ ಎಸ್.ಎಂ.ಕೃಷ್ಣ ಅವರ ಜೊತೆ ಇಲ್ಲ. ಹೀಗಿದ್ದರೂ ಸಚಿವರು ಮತ್ತು ಶಾಸಕರು ರಾಜಕೀಯ ಮಾಡುತ್ತಿದ್ದಾರೆ. ಈ ನಿಲುವು ಕೈ ಬಿಡಬೇಕು ಎಂದು ಆಗ್ರಹಿಸಿದರು. ಚಿತ್ರಾವತಿ ಎಂಬ ಹೆಸರೇ ಬಾಗೇಪಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕು ಜನರ ಭಾವನಾತ್ಮಕ ಬೆಸುಗೆ. ಜನರ ಹೋರಾಟದಿಂದ ಜಲಾಶಯ ನಿರ್ಮಾಣವಾಗಿದೆ.

ಜಲಾಶಯ ಯಾವುದೇ ಸರ್ಕಾರದ ಕೊಡುಗೆಯಲ್ಲ. ಜಿ.ವಿ. ಶ್ರೀ.ರಾಮರೆಡ್ಡಿ ನೇತೃತ್ವದಲ್ಲಿ ನಡೆದ ಹೋರಾಟದಿಂದ ಜಲಾಶಯ ನಿರ್ಮಾಣವಾಗಿದೆ ಎಂದರು.

## 50 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ

• ಉದಯವಾಹಿನಿ, ಚಿಂತಾಮಣಿ

ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಗ್ರಾಮೀಣ, ನಗರ ಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಕಾಂಗ್ರೆಸ್ ಪಕ್ಷ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ನೀಡಲಿರುವ 50 ಕೋಟಿ ಪೈಕಿ ಗ್ರಾಮೀಣ ಭಾಗದ ರಸ್ತೆಗಳಿಗೆ 19 ಕೋಟಿ ಮತ್ತು ನಗರಭಾಗದ ರಸ್ತೆಗಳ ಅಭಿವೃದ್ಧಿಗಾಗಿ 18 ಕೋಟಿ ನೀಡಲಾಗುವುದು ಎಂದರು.

ತಾಲ್ಲೂಕಿನ ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ 10 ವರ್ಷವಾದರೂ, ವಿದ್ಯುತ್ ಸಂಪರ್ಕ ಒದಗಿಸಲಾಗದವರು ಯಾವ ಪುರುಷಾರ್ಥಕ್ಕಾಗಿ ಉದ್ಯೋಗ ಮೇಳ ಮಾಡುತ್ತಿದ್ದಾರೆ. ನಾನು ಶಾಸನಾಗಿದ್ದಾಗ ಮಸ್ತೇನಹಳ್ಳಿ ಬಳಿ ಕೈಗಾರಿಕಾ ವಲಯ ಸ್ಥಾಪಿಸಲು ನೂರಾರು ಎಕರೆ ಜಮೀನು ಕಾಯ್ದಿರಿಸಿದ್ದೆ. ನಾನು ಸೋತ ನಂತರ ನಿಮ್ಮ ಕೈಯಲ್ಲಿ ವಿದ್ಯುತ್ ಸಂಪರ್ಕ ಕೊಡಿಸಲಾಗಿಲ್ಲ ಎಂದು ಮಾಜಿ ಶಾಸಕರ ಹೆಸರು ಪ್ರಸ್ತಾಪಿಸದೆ ಛೇಡಿಸಿದರು.

ಅಂತರ್ಜಲ ಹೆಚ್ಚಿಸಲು ತಾಲ್ಲೂಕಿನ ಅಂಬಾಜಿದುರ್ಗ ಮತ್ತು ಮುಂಗಾನಹಳ್ಳಿ ಹೋಬಳಿಗಳ 119 ಕೆರೆಗಳಿಗೆ ಎಚ್.ಎನ್ ವ್ಯಾಲಿ ನೀರು ತರಲು ಹಣ ಮಂಜೂರು ಮಾಡಲಾಗಿದೆ. ಸಣ್ಣ ನೀರಾವರಿ ಇಲಾಖೆಯಿಂದಲೂ ಕೆರೆಗಳಿಗೆ ನೀರು ಹರಿಸಲು ಯತ್ನಿಸಲಾಗುತ್ತಿದೆ. ಕೆ.ಸಿ ವ್ಯಾಲಿಯಲ್ಲಿ ಕಸಬಾ ಮತ್ತು ಅಂಬಾಜಿದುರ್ಗ ಹಾಗೂ ಮುರುಗಮಲ್ಲ ಹೋಬಳಿಗಳ 50 ಕೆರೆಗಳಿಗೆ ನೀರು ಹರಿಸಲು ಹಣ ಮಂಜೂರು ಮಾಡಲಾಗಿದೆ ಎಂದರು. ಕುಡಿಯುವ ನೀರಿಗಾಗಿ ಭಕ್ತರಹಳ್ಳಿ ಅರಸೀಕೆರೆಗೆ ಹೆಚ್ಚುವರಿ 36 ಕೋಟಿ, ಕನಂಪಲ್ಲಿ ಕೆರೆ, ನೆಕ್ಕುಂದಿ ಕೆರೆಗೆ 84 ಕೋಟಿ ಮಂಜೂರು ಮಾಡಿಸಲಾಗಿದೆ. ನಗರ ಬೆಳವಣಿಗೆಗೆ ಸುತ್ತಮುತ್ತಲ 110 ಹಳ್ಳಿಗಳನ್ನು ಸೇರಿಸಿಕೊಳ್ಳಲಾಗಿದ್ದು, ಭೂಪರಿವರ್ತನೆ ತೊಂದರೆಯನ್ನು ಶೀಘ್ರವೇ ಪರಿಹರಿಸಲಾಗುವುದು ಎಂದರು.


ಉದಯವಾಹಿನಿ ಚಿತ್ರ

## ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

• ಉದಯವಾಹಿನಿ, ರಾಮನಗರ

ನಗರದ ವಿವಿಧ ವಾರ್ಡ್‌ಗಳಲ್ಲಿ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಧಿ (ಯುಐಡಿಎಫ್) ಅನುದಾನದಡಿ ಒಟ್ಟು 19 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್, ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಭೂಮಿಪೂಜೆ ನೆರವೇರಿಸಿದರು. ವಾರ್ಡ್ 27 ಭುವನೇಶ್ವರಿ ಗೋಪುರ ಬಳಿ, 26ರ ಕೆಂಪೇಗೌಡ ವೃತ್ತ, 29ರ ಮಾಗಡಿ ರಸ್ತೆಯ 1ನೇ ಕ್ರಾಸ್, 30ರ ಐಜೂರು ಗಣೇಶ ದೇವಸ್ಥಾನದ ಎದುರು, ವಾರ್ಡ್ 28ರ ಪ್ರಮೋದ ಮನೆ ಎದುರು ಹಾಗೂ ವಾರ್ಡ್ 31ರ ಅರ್ಚಕರಹಳ್ಳಿ ಹಾಲಿನ ಡೇರಿ ಬಳಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು.

ಬಳಿಕ ಮಾತನಾಡಿದ ಶೇಷಾದ್ರಿ, ಮೊದಲ ಹಂತದಲ್ಲಿ ಯುಐಡಿಎಫ್ ಅನುದಾನದ 67 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಇದೀಗ ಎರಡನೇ ಹಂತದಲ್ಲಿ 10 ಕಿಲೋಮೀಟರ್ ಉದ್ದದ ಕಾಂಕ್ರೀಟ್ ರಸ್ತೆ ಹಾಗೂ ನಗರದ ಎಲ್ಲಾ ವಾರ್ಡ್ ವ್ಯಾಪ್ತಿಯಲ್ಲಿ 20 ಕಿ.ಮೀ. ಉದ್ದದ ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು. ವಿವೇಕಾನಂದನಗರ ದೊಡ್ಡ ಬಡಾವಣೆಯಾಗಿದ್ದು, ಜನವಸತಿಯೂ ಹೆಚ್ಚಾಗಿದೆ.

ಹಾಗಾಗಿ, ಈ ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಸುಮಾರು 50 ಕೋಟಿಯ ಅಗತ್ಯವಿದೆ. ವಾರ್ಡ್ ಭೇಟಿ ಸಂದರ್ಭದಲ್ಲಿ ಅಲ್ಲಿರುವ ಸಮಸ್ಯೆಗಳ ಕುರಿತು ಸ್ಥಳೀಯರು ಗಮನ ಸೆಳೆದಿದ್ದು, ಎಲ್ಲವನ್ನೂ ಹಂತಹಂತವಾಗಿ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.


ಉದಯವಾಹಿನಿ ಚಿತ್ರ

ನಿರಂತರ ಕುಡಿಯುವ ನೀರು ಯೋಜನೆಯಿಂದಾಗಿ ಹದಗೆಟ್ಟಿದ್ದ ರಸ್ತೆಗಳನ್ನು ಮರು ನಿರ್ಮಾಣಕ್ಕೆ ಯುಐಡಿಎಫ್ ಅನುದಾನದಲ್ಲಿ ವಿಶೇಷ ಒತ್ತು ನೀಡಲಾಗಿದೆ. ಅದಕ್ಕಾಗಿ ರಾಜ್ಯ ಸರ್ಕಾರವು 82.5 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ಅದರಲ್ಲಿ 40 ಕೋಟಿ ವೆಚ್ಚದಲ್ಲಿ ಮೊದಲ ಹಂತದಲ್ಲಿ 25 ವಾರ್ಡ್‌ಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಜಿಲ್ಲೆಯವರಾದ ಡಿಸಿಎಂ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ, ಸ್ಥಳೀಯ ಶಾಸಕ ಇಕ್ಬಾಲ್ ಹುಸೇನ್ ಹಾಗೂ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಸಹಕಾರದೊಂದಿಗೆ ನಗರದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿ, ನಗರಕ್ಕೆ ಹೊಸರೂಪ ನೀಡಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

# ಒಬ್ಬ ರೈತರಿಗೆ ಒಂದು ಮೂಟೆ ಯೂರಿಯಾ ಮಾತ್ರ ಲಭ್ಯ

### ಕೃಷಿ ಸಚಿವರ ತವರಲ್ಲೇ ಯೂರಿಯಾ ಕೊರತೆ ; ಆತಂಕ ಬೇಡ: ಸಚಿವ, ಅಧಿಕಾರಿಗಳ ಅಭಯ

• ಉದಯವಾಹಿನಿ, ಮಂಡ್ಯ

ರಾಜ್ಯಾದ್ಯಂತ ಯೂರಿಯಾ ರಸಗೊಬ್ಬರ ಕೊರತೆಯದ್ದೇ ಚರ್ಚೆ. ಜಿಲ್ಲೆಯವರೆ ಆದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮತ್ತು ಇಲಾಖೆ ಅಧಿಕಾರಿಗಳು ರಸಗೊಬ್ಬರಕ್ಕೆ ಕೊರತೆಯಿಲ್ಲ ಎನ್ನುತ್ತಿದ್ದರೂ ಸಕ್ಕರೆ ನಾಡಿನಲ್ಲಿ ಒಬ್ಬ ರೈತರಿಗೆ ಒಂದು ಮೂಟೆ ಯೂರಿಯಾ ಕೊಡಲಾಗುತ್ತಿದೆ. ಇದನ್ನು ಪಡೆದು ಹೇಗೆ ಕೃಷಿ ಮಾಡುವುದು ಎನ್ನುವುದು ರೈತರ ಪ್ರಶ್ನೆ. ಜಿಲ್ಲೆಯಲ್ಲಿ ಮೊದಲು ಕೃಷಿ ಚಟುವಟಿಕೆಗಳು ಆರಂಭಗೊಳ್ಳುವುದೇ ಶ್ರೀರಂಗಪಟ್ಟಣದಲ್ಲಿ. ನಂತರ ಉಳಿದ ತಾಲ್ಲೂಕುಗಳಲ್ಲಿ ಮುಂಗಾರು ಹಂಗಾಮಿನ ಕೃಷಿ ಚುಟವಟಿಕೆ ಗರಿಗೆದರುತ್ತದೆ.

**73,065 ಮೆಟ್ರಿಕ್ ಟನ್ ರಸಗೊಬ್ಬರಕ್ಕೆ ಬೇಡಿಕೆ**

ಜಿಲ್ಲೆಯಲ್ಲಿ ಮುಂಗಾರಿನ ಹಂಗಾಮಿಗೆ(ಏಪ್ರಿಲ್‌ನಿಂದ ಸೆಪ್ಟಂಬರ್ ಅಂತ್ಯಕ್ಕೆ 41,194 ಮೆಟ್ರಿಕ್ ಟನ್ ಯಾರಿಯಾ ಸೇರಿದಂತೆ 73,065 ಮೆಟ್ರಿಕ್ ಟನ್ ರಸಗೊಬ್ಬರಕ್ಕೆ ಬೇಡಿಕೆಯಿದೆ. ಈ ವರ್ಷ ಆರಂಭಿಕ ಶಿಲ್ಕು(ಹಳೆಯ ದಾಸ್ತಾನು) 36,522 ಮೆಟ್ರಿಕ್ ಟನ್ ಇದ್ದು, ಜುಲೈ ಅಂತ್ಯದವರೆಗೆ 40,803ಮೆಟ್ರಿಕ್ ಟನ್ ಪೂರೈಕೆಯಾಗಿದೆ. ಇದರಲ್ಲಿ 49,097 ಮೆಟ್ರಿಕ್ ಟನ್ ಮಾರಾಟವಾಗಿ, 28,228 ಮೆಟ್ರಿಕ್ ಟನ್ ದಾಸ್ತಾನಿದೆ.


ಉದಯವಾಹಿನಿ ಚಿತ್ರ

ಆದರೆ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲೇ ಯೂರಿಯಾಗೆ ಅಭಾವವಿದೆ. ಬೇಡಿಕೆಯಷ್ಟು ಯೂರಿಯಾ ಸಿಗುತ್ತಿಲ್ಲ. ಹೀಗಾಗಿ ನೆರೆಯ ಬನ್ನೂರು ಹೋಬಳಿಗೆ ಹೋಗಿ ರೈತರು ಯೂರಿಯಾ ತಂದು ಬೆಳೆಗಳಿಗೆ ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಳವಳ್ಳಿ, ಮದ್ದೂರು ತಾಲ್ಲೂಕಿನ ಕಡೆಯ ಭಾಗದ ಪ್ರದೇಶಗಳಿಗೆ ಇನ್ನೂ ಸಮರ್ಪಕವಾಗಿ ನೀರು ತಲುಪಿಲ್ಲ. ಹೀಗಾಗಿ ಇವೆರಡು ತಾಲ್ಲೂಕುಗಳಲ್ಲಿ ಯೂರಿಯಾಗೆ ಬೇಡಿಕೆ ಸ್ವಲ್ಪ ಕಡಿಮೆಯಿದೆ. ಆದರೆ, ಭತ್ತ ನಾಟಿ ಆಗಿರುವ ಮತ್ತು ಕಬ್ಬು ಮುರಿ ಹಂತದಲ್ಲಿ ಬಂದಿರುವ ಪ್ರದೇಶಗಳಲ್ಲಿನ ರೈತರು ಯೂರಿಯಾಗಿ ರಸಗೊಬ್ಬರ ಅಂಗಡಿಗಳಿಗೆ ಎಡತಾಕುತ್ತಿದ್ದಾರೆ.

ಒಂದು ಎಕರೆ ಕಬ್ಬು ಬೆಳೆಗೆ ಮುರಿ ಮಾಡುವ ಹೊತ್ತಿಗೆ 10 ಮೂಟೆ ಯೂರಿಯಾ ಬೇಕು. ಭತ್ತದ ಬೆಳೆ ನಾಟಿ ಬಳಿಕ 3 ಮೂಟೆ ಯೂರಿಯಾ ಬೇಕಿದೆ. ಯೂರಿಯಾ ಜತೆಗೆ ಡಿಎಪಿ, ಎಂಒಪಿ, ಎಸ್‌ಎಸ್‌ಪಿ, ಕಾಂಪ್ಲೆಕ್ಸ್ ರಸಗೊಬ್ಬವನ್ನು ಬಳಸಲಾಗುತ್ತಿದೆ. ಆದರೆ, ಎಲ್ಲಾ ರಸಗೊಬ್ಬರಗಳ ಪೈಕಿ ಯಾರಿಯಾ ಬೆಲೆ ಮಾತ್ರ ಕಡಿಮೆ. ಹೀಗಾಗಿ ಅದಕ್ಕೆ ಹೆಚ್ಚು ಬೇಡಿಕೆಯಿದೆ.

ಜಿಲ್ಲೆಯಲ್ಲಿ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದಾಸ್ತಾನಿದೆ. ಆದರೆ, ಕಬ್ಬು ಬೆಳೆಗೆ ಅಗತ್ಯಕ್ಕಿಂತ 200 ಪಟ್ಟು ಹೆಚ್ಚುವರಿಯಾಗಿ ಯೂರಿಯಾ ಬಳಸಲಾಗುತ್ತಿದೆ. ದರ ಹೆಚ್ಚಳದ ಕಾರಣಕ್ಕೆ ಕಾಂಪ್ಲೆಕ್ಸ್ ಗೊಬ್ಬರ ಬಳಕೆ ಕಡಿಮೆಯಾಗಿದೆ. ಮೂರ್ನಾಲ್ಕು ಸಾವಿರ ರೂ. ಉಳಿಸಲು ಹೋಗುತ್ತಿರುವ ರೈತರು 30–40ಸಾವಿರ ರೂ. ಮೌಲ್ಯದ ಕಬ್ಬಿನ ಬೆಳೆ ಇಳುವರಿ ಕಳೆದುಕೊಳ್ಳುತ್ತಿದ್ದಾರೆ. ಪೋಟ್ಯಾಷ್‌ಯುಕ್ತ ಸಂಯುಕ್ತ ರಸಗೊಬ್ಬರ(ಕಾಂಪ್ಲೆಕ್ಸ್) ಬಳಸಿದರೆ ಇಳುವರಿ ಹೆಚ್ಚಾಗಲಿದೆ. ಇದರಿಂದ ಸಹಜವಾಗಿಯೇ ಲಾಭ ಸಿಗಲಿದೆ.

–ವಿ.ಎಸ್.ಅಶೋಕ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ, ಮಂಡ್ಯ

ಜಿಲ್ಲೆಯಲ್ಲಿ ಯೂರಿಯಾ ಕೊರತೆ ಇಲ್ಲ. ರೈತರು ಆತಂಕಕ್ಕೆ ಒಳಗಾಗುವ ಅವಶ್ಯಕತೆಯಿಲ್ಲ. ಜಿಲ್ಲೆಯಲ್ಲಿ 5000 ಮೆಟ್ರಿಕ್ ಟನ್ ಯೂರಿಯಾ ದಾಸ್ತಾನಿದ್ದು, ಇನ್ನು ಕೆಲವೇ ದಿನದಲ್ಲಿ 1800 ಮೆ.ಟನ್ ಬರಲಿದೆ.

– ಡಾ.ಕುಮಾರ, ಜಿಲ್ಲಾಧಿಕಾರಿ, ಮಂಡ್ಯ



ಮಂಡ್ಯದಲ್ಲಿ 4895 ಮೆಟ್ರಿಕ್ ಟನ್ ಯೂರಿಯಾ ಸೇರಿದಂತೆ 28,228 ಮೆಟ್ರಿಕ್ ರಸಗೊಬ್ಬರ ದಾಸ್ತಾನಿದೆ. ಹೀಗಾಗಿ ರೈತರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಅಗತ್ಯ ಸಂದರ್ಭದಲ್ಲಷ್ಟೇ ಯೂರಿಯಾ ಖರೀದಿಸಿ. ಸುಮ್ಮನೆ ಖರೀದಿಸಿ ಶೇಖರಿಸಿಟ್ಟುಕೊಳ್ಳಬೇಡಿ.

– ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಒಬ್ಬರಿಗೆ ಒಂದು ಮೂಟೆಯನ್ನಷ್ಟೇ ಯೂರಿಯಾಗೆ ಕೊಡಲಾಗುತ್ತಿದೆ. 45ಕಿಲೋ ತೂಕದ ಒಂದು ಮೂಟೆ ಯೂರಿಗೆ 270 ರೂ. ಬೆಲೆ ಇದೆ. ಉಳಿದ ರಸಗೊಬ್ಬರಗಳ ಬೆಲೆ ಏರಿಕೆಯಾಗಿದೆ. ಹೀಗಾಗಿ ರೈತರು ಅನಿವಾರ್ಯವಾಗಿ ಯೂರಿಯಾ ಬಳಸುತ್ತಿದ್ದಾರೆ.

–ಸಿ.ಡಿ.ಸುಮನ್, ಯುವ ರೈತ, ಚಿಕ್ಕಮಂಡ್ಯ

## ಮಿನಿ ನ್ಯೂಸ್

### ಲಂಚ: ಗ್ರಾಮ ಲೆಕ್ಕಾಧಿಕಾರಿಗೆ ಶಿಕ್ಷೆ

• ಉದಯವಾಹಿನಿ, ತುಮಕೂರು

ಲಂಚ ತೆಗೆದುಕೊಳ್ಳುವಾಗ ಸಿಕ್ಕಿ ಬಿದ್ದಿದ್ದ ತಾಲ್ಲೂಕಿನ ಬೆಳ್ಳಾವಿ ಹೋಬಳಿ ಚನ್ನೇನಹಳ್ಳಿ ವೃತ್ತದ ಗ್ರಾಮ ಲೆಕ್ಕಾಧಿಕಾರಿ ಡಿ.ನಟರಾಜು ಎಂಬಾತನಿಗೆ ನಾಲ್ಕು ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ 7ನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ. ಜಮೀನಿನ ದಾಖಲೆ ಸರಿಪಡಿಸಿಕೊಡಲು 2022 ಏಪ್ರಿಲ್ 1ರಂದು ಲಂಚ ತೆಗೆದುಕೊಳ್ಳುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸರ ಟ್ರ್ಯಾಪ್‌ಗೆ ಸಿಲುಕಿದ್ದರು. ಶಿವಮೊಗ್ಗ ಜಿಲ್ಲೆ ಭದ್ರಾವತಿ ನಗರದ ಆರ್.ಮಂಜುನಾಥ್ ಹಾಗೂ ಸಹೋದರ ವಿಶ್ವನಾಥ ರಾವ್ ಅವರು ತಾಲ್ಲೂಕಿನ ಬೆಳ್ಳಾವಿ ಹೋಬಳಿ, ಚನ್ನೇನಹಳ್ಳಿ ಗ್ರಾಮದಲ್ಲಿ 1 ಎಕರೆ 6 ಗುಂಟೆ ಜಮೀನು ಖರೀದಿಸಿದ್ದರು. ಜಮೀನಿಗೆ ಖಾತೆ ಮಾಡಿಕೊಡುವ ಸಮಯದಲ್ಲಿ ವಿಸ್ತೀರ್ಣ ನಮೂದಿಸದೆ ಉದ್ದೇಶಪೂರ್ವಕವಾಗಿ ಸೊನ್ನೆ ಎಂದು ತೋರಿಸಲಾಗಿತ್ತು.

ಈ ತಪ್ಪನ್ನು ಸರಿಪಡಿಸಿಕೊಡುವಂತೆ ಮಂಜುನಾಥ್ ಅರ್ಜಿ ಸಲ್ಲಿಸಿದರು. ಸಮಸ್ಯೆ ಸರಿಪಡಿಸಿಕೊಡಲು 20 ಸಾವಿರ ಲಂಚ ನೀಡುವಂತೆ ಗ್ರಾಮ ಲೆಕ್ಕಾಧಿಕಾರಿ ನಟರಾಜು ಬೇಡಿಕೆ ಸಲ್ಲಿಸಿದ್ದರು. ಮುಂಗಡವಾಗಿ 5 ಸಾವಿರ ಪಡೆದುಕೊಂಡಿದ್ದು, ಉಳಿದ 15 ಸಾವಿರವನ್ನು ಮಂಜುನಾಥ್ ಸಹೋದರನ ಪುತ್ರ ಅಜಯ್ ಬರ್ಡೆ ಅವರಿಂದ ಬೆಳ್ಳಾವಿ ಉಪತಹಶೀಲ್ದಾರ್ ಕಚೇರಿಯಲ್ಲಿ ಪಡೆದುಕೊಳ್ಳುತ್ತಿದ್ದ ಸಮಯದಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಇನ್ಸ್‌ಪೆಕ್ಟರ್ ಎಸ್.ವಿಜಯಲಕ್ಷ್ಮಿ ನೇತೃತ್ವದ ತಂಡ ದಾಳಿ ನಡೆಸಿ ನಟರಾಜನನ್ನು ಬಂಧಿಸಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಯಾಸ್ಮಿನ ಪರವೀನ ಲಾಡಖಾನ ಅವರು ಆರೋಪ ಸಾಬೀತಾಗಿದ್ದರಿಂದ ಅಪರಾಧಿಗೆ ಶಿಕ್ಷೆ ವಿಧಿಸಿದ್ದಾರೆ. ಲೋಕಾಯುಕ್ತ ಸಂಸ್ಥೆ ಪರವಾಗಿ ಆರ್.ಪಿ.ಪ್ರಕಾಶ್ ವಾದಿಸಿದ್ದರು.

### ಪಿ.ಎಂ. ಕಿಸಾನ್ ಯೋಜನೆಯ 20ನೇ ಕಂತಿನ ಹಣ ಬಿಡುಗಡೆ: ಸಂಸದ ಭಾಗಿ

• ಉದಯವಾಹಿನಿ, ಕೋಲಾರ

ಪಿಎಂ ಕಿಸಾನ್ ಯೋಜನೆಯಡಿ 20ನೇ ಕಂತಿನ ಹಣ ಬಿಡುಗಡೆ ಆಗಿದ್ದು, ಜಿಲ್ಲೆಯ 97 ಸಾವಿರ ರೈತರಿಗೆ ನೇರವಾಗಿ 19.78 ಕೋಟಿ ಜಮೆಯಾಗಿದೆ ಎಂದು ಸಂಸದ ಎಂ.ಮಲ್ಲೇಶ್ ಬಾಬು ತಿಳಿಸಿದರು. ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಆಶ್ರಯದಲ್ಲಿ ರೈತರಿಗೆ ಪಿಎಂ ಕಿಸಾನ್ 20ನೇ ಕಂತಿನ ಹಣ ಬಿಡುಗಡೆ ಅಂಗವಾಗಿ ಉತ್ತರ ಪ್ರದೇಶದ ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ನೇರ ಪ್ರಸಾರ ಕಾರ್ಯಕ್ರಮವನ್ನು ನಗರ ಹೊರವಲಯದಲ್ಲಿರುವ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕೆವಿಕೆಯಲ್ಲಿ ನಡೆದ ಈ ಕಾರ್ಯಕ್ರಮವನ್ನು ಸಂಸದರು ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯ ಮಣ್ಣಿನ ಆರೋಗ್ಯ ತೀರಾ ಹದಗೆಟ್ಟಿದೆ. ಸಾವಯವ, ನೈಸರ್ಗಿಕ ಕೃಷಿಗೆ ಒತ್ತು ನೀಡಬೇಕು. ಎರೆಹುಳು ಗೊಬ್ಬರ ಉತ್ಪಾದಿಸಿ ಬಳಸಲು ಆದ್ಯತೆ ನೀಡಬೇಕು. ಆದಾಯ ವೃದ್ಧಿಗೆ ರೈತರು ಒಂದೇ ಬೆಳೆ ಬೆಳೆಯದೆ ಇತರ ಬೆಳೆ ಬೆಳೆಯುವ ಪ್ರವೃತ್ತಿಯನ್ನು ಅಳವಡಿಸಿಕೊಳ್ಳಬೇಕು ಎಂದರು.

ರೈತ ಉತ್ಪಾದಕ ಸಂಸ್ಥೆಗಳನ್ನು ನಿರ್ಮಿಸಿಕೊಂಡಲ್ಲಿ ಮಾರ್ಕೆಟಿಂಗ್ ಮಾಡುವುದು ಸುಲಭವಾಗುತ್ತದೆ. ಕೇಂದ್ರ ಸರ್ಕಾರದ ಪಿಎಂ ಕಿಸಾನ್ ಸಮ್ಮಾನ್ ಯೋಜನೆಯು ರೈತರಿಗೆ ಪರಿಕರ ಖರೀದಿಗೆ ತುಂಬಾ ಸಹಕಾರಿಯಾಗಿದೆ. ಬ್ಯಾಂಕಿನಿಂದ ಸಾಲ, ಸಬ್ಸಿಡಿ ಪಡೆದು ಫುಡ್ ಪ್ರೊಸೆಸಿಂಗ್ ಯುನಿಟ್ ಅನ್ನು ರೈತರು ಸ್ಥಾಪಿಸಿಕೊಳ್ಳಬೇಕು ಎಂದರು.

### ವನ್ಯಪ್ರಾಣಿ ಹಾವಳಿ ನಿಯಂತ್ರಿಸಿ ಈಶ್ವರ್ ಖಂಡ್ರೆಗೆ ಮನವಿ ಸಲ್ಲಿಕೆ

• ಉದಯವಾಹಿನಿ, ಹುಣಸೂರು

ನಗರದ ಸಂವಿಧಾನ ವೃತ್ತದಲ್ಲಿ ಗಜಪಯಣ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ರೈತ ಸಂಘ, ದಸಂಸ ಮುಖಂಡರು ಭೇಟಿ ಮಾಡಿ ವನ್ಯಪ್ರಾಣಿ ಹಾವಳಿ ನಿಯಂತ್ರಣಕ್ಕೆ ಕ್ರಮವಹಿಸಬೇಕು ಎಂದು ಮನವಿ ಸಲ್ಲಿಸಿದರು. ಅರಣ್ಯದಂಚಿನ ಗ್ರಾಮದಲ್ಲಿ ವನ್ಯಪ್ರಾಣಿ ಹಾವಳಿಗೆ ರೈತರು ನಿರಂತರವಾಗಿ ಫಸಲು ನಷ್ಟ, ಜೀವಹಾನಿಗೆ ತುತ್ತಾಗುತ್ತಿದ್ದು, ಅರಣ್ಯ ಇಲಾಖೆ ಮಾನವ ವನ್ಯಪ್ರಾಣಿ ಮಾನವ ಸಂಘರ್ಷ ನಿಯಂತ್ರಿಸಬೇಕು ಎಂದು ಕೋರಿದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, ಅರಣ್ಯದಂಚಿನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿರಂತರವಾಗಿದೆ. ಉಪಟಳ ನಿಯಂತ್ರಿಸಲು ಇಲಾಖೆ ಗಂಭೀರ ಪ್ರಯತ್ನ ಮಾಡಿಲ್ಲ. ರೈಲ್ವೆ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳದೆ ಲಕ್ಷ್ಮಣತೀರ್ಥ ನದಿ ಪಾತ್ರದಲ್ಲಿ ಆನೆ ಗ್ರಾಮದತ್ತ ಬರುತ್ತಿದೆ. ಅರಣ್ಯ ಇಲಾಖೆ ಗುರುತಿಸಿರುವ ಸ್ಥಳದಲ್ಲಿ ರೈಲ್ವೆ ತಡೆಗೋಡೆ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಅರಣ್ಯದಂಚಿನ ಗ್ರಾಮಗಳಿಗೆ ವನ್ಯಪ್ರಾಣಿ ಹಾವಳಿ ಇರುವುದು ತಿಳಿದಿದೆ. ಈ ಹಾವಳಿ ನಿಯಂತ್ರಣಕ್ಕೆ ವೈಜ್ಞಾನಿಕವಾಗಿ ಪರಿಹಾರ ಕಂಡುಕೊಳ್ಳುತ್ತಿದ್ದೇವೆ. ಈಗಾಗಲೇ ನಾಗರಹೊಳೆ ಅರಣ್ಯದಲ್ಲಿ ಗರುಡ ಎಂಬ ಯೋಜನೆ ಜಾರಿಯಲ್ಲಿದ್ದು, ಆ ಮೂಲಕ ಆನೆ ಚಲನವಲನ ಕುರಿತು ಅರಣ್ಯ ಸಿಬ್ಬಂದಿಗಳ ಮೊಬೈಲ್‌ಗೆ ಸಂದೇಶ ಬರುತ್ತಿದ್ದಂತೆ ಅರಣ್ಯ ಇಲಾಖೆ ಸ್ಥಳಕ್ಕೆ ಬರುವ ವ್ಯವಸ್ಥೆ ಚಾಲನೆಯಲ್ಲಿದೆ. ಇದಲ್ಲದೆ ಮತ್ತಷ್ಟು ವೈಜ್ಞಾನಿಕ ಪ್ರಯತ್ನಗಳು ನಡೆದಿದ್ದು, ಎಲ್ಲದಕ್ಕೂ ಪರಿಹಾರ ಸಿಗಲಿದೆ ಎಂದರು. ರೈತ ಸಂಘ ನೀಡಿದ 11 ಬೇಡಿಕೆಗಳಿಗೆ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಕ್ರಮವಹಿಸುವೆ ಎಂದು ಭರವಸೆ ನೀಡಿದರು.

### ಚೆನ್ನೇನಹಳ್ಳಿ ಸರ್ಕಾರಿ ಶಾಲೆ ಪುನರಾರಂಭಕ್ಕೆ ಆಗ್ರಹ

• ಉದಯವಾಹಿನಿ, ಶ್ರೀರಂಗಪಟ್ಟಣ

ತಾಲ್ಲೂಕಿನ ಚೆನ್ನೇನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಮುಚ್ಚಿದ್ದು, ಮತ್ತೆ ಆರಂಭಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಈ ಶಾಲೆ 1965ರಲ್ಲಿ ಆರಂಭವಾಗಿ 2020ರ ವರೆಗೆ ಯಶಸ್ವಿಯಾಗಿ ನಡೆದಿದೆ. ಕಳೆದ ಮೂರು ವರ್ಷಗಳಿಂದ ಮಕ್ಕಳ ದಾಖಲಾತಿ ಕೊರತೆ ಉಂಟಾಗಿತ್ತು. 2025ನೇ ಸಾಲಿಗೆ ಒಂದು ಮಗು ಮಾತ್ರ ಸೇರ್ಪಡೆಯಾಗಿತ್ತು. ಒಂದು ವಾರದ ಬಳಿಕ ಆ ಮಗು ಕೂಡ ಶಾಲೆಯನ್ನು ತೊರೆದಿದೆ. ಹಾಗಾಗಿ ಶಾಲೆಯನ್ನು ಶೂನ್ಯ ವಿದ್ಯಾರ್ಥಿಗಳ ಶಾಲೆ ಎಂದು ಘೋಷಿಸಿ ಮುಚ್ಚಲಾಗಿದೆ. 2020ರ ನಂತರ ಈ ಶಾಲೆಗೆ ಬಂದ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳ ಮನ ಗೆಲ್ಲುವಲ್ಲಿ ವಿಫಲರಾಗಿದ್ದಾರೆ ಎಂದು ಗ್ರಾಮದ ಮುಖಂಡ ಎಲ್. ಸ್ವಾಮಿ ದೂರಿದ್ದಾರೆ. ತಾಲ್ಲೂಕಿನ ಆಲದಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಳೆದ ವರ್ಷ ಮುಚ್ಚಿತ್ತು. ಕೆಲವೇ ತಿಂಗಳಲ್ಲಿ ಅದು ಪುನರಾರಂಭವಾಗಿದೆ. ಖಾಸಗಿ ಶಾಲೆಗೆ ಹೋಗುತ್ತಿದ್ದ ವಿದ್ಯಾರ್ಥಿಗಳನ್ನು ಮತ್ತೆ ಸರ್ಕಾರಿ ಶಾಲೆಗೆ ಕರೆತರಲಾಗಿದೆ. ಅದೇ ರೀತಿ ಚೆನ್ನೇನಹಳ್ಳಿ ಸರ್ಕಾರಿ ಶಾಲೆಯನ್ನು ಪುನರರಾಂಭಿಸಬೇಕು ಎಂದು ಕುಮಾರ್ ಒತ್ತಾಯಿಸಿದ್ದಾರೆ.

ಅಂತರಾಳದಿಂದ.. EDITORIAL

# ಮಾಲೇಗಾಂವ್ ಸ್ಫೋಟ ಪ್ರಕರಣ; ಹಳಿ ತಪ್ಪಿತೆ ನ್ಯಾಯದಾನ ವ್ಯವಸ್ಥೆ?



2008ರಲ್ಲಿ ಮಾಲೇಗಾಂವ್‌ನಲ್ಲಿ ನಡೆದ ಸ್ಫೋಟ ಪ್ರಕರಣದ ತನಿಖೆ ನಡೆಸಿದ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ದೋಷಾರೋಪ ಪಟ್ಟಿಯಲ್ಲಿ ಹೆಸರಿಸಿದ್ದ ಏಳೂ ಮಂದಿಯನ್ನು ನ್ಯಾಯಾಲಯವು ದೋಷಮುಕ್ತಗೊಳಿಸಿದೆ. ಮಾಲೇಗಾಂವ್‌ನಲ್ಲಿ ನಡೆದ ಸ್ಫೋಟವು ಆರು ಮಂದಿಯ ಜೀವ ತೆಗೆದಿತ್ತು. 2006ರಲ್ಲಿ ಮುಂಬೈನಲ್ಲಿ ನಡೆದ ರೈಲು ಸ್ಫೋಟದ ಎಲ್ಲಾ ಆರೋಪಿಗಳನ್ನು ನ್ಯಾಯಾಲಯವೊಂದು ದೋಷಮುಕ್ತಗೊಳಿಸಿದ ಕೆಲವೇ ದಿನಗಳ ನಂತರದಲ್ಲಿ, ಮಾಲೇಗಾಂವ್ ಸ್ಫೋಟ ಪ್ರಕರಣದ ಆರೋಪಿಗಳು ದೋಷಮುಕ್ತರಾಗಿದ್ದಾರೆ.

ಇದು ಪ್ರಮುಖ ಪ್ರಕರಣಗಳಲ್ಲಿ ನ್ಯಾಯ ಕೊಡಿಸುವಲ್ಲಿ ತನಿಖಾಧಿಕಾರಿಗಳು ಹಾಗೂ ಪ್ರಾಸಿಕ್ಯೂಷನ್ ವಿಫಲವಾಗುತ್ತಿರುವುದಕ್ಕೆ ಇನ್ನೊಂದು ನಿದರ್ಶನದಂತೆ ಇದೆ. ಎರಡೂ ಪ್ರಕರಣಗಳಲ್ಲಿ ಆರೋಪಿಗಳನ್ನು ದೋಷಮುಕ್ತಗೊಳಿಸುತ್ತಿರುವುದಕ್ಕೆ ಸಾಕ್ಷ್ಯಾಧಾರಗಳ ಕೊರತೆ ಹಾಗೂ ಅಸಮರ್ಪಕ ತನಿಖೆಯನ್ನು ನ್ಯಾಯಾಲಯಗಳು ಕಾರಣವನ್ನಾಗಿ ಉಲ್ಲೇಖಿಸಿವೆ.ಮುಂಬೈ ಸ್ಫೋಟ ಪ್ರಕರಣದಲ್ಲಿ ಬಲವಂತವಾಗಿ ತಪ್ಪೊಪ್ಪಿಗೆ ಹೇಳಿಕೆ ಪಡೆದುಕೊಳ್ಳಲಾಗಿತ್ತು, ಸಾಕ್ಷಿಗಳಿಗೆ ಏನು ಹೇಳಬೇಕು ಎಂಬುದನ್ನು ಹೇಳಿಕೊಡಲಾಗಿತ್ತು ಎಂಬ ಗಂಭೀರ ಲೋಪಗಳನ್ನು ನ್ಯಾಯಾಲಯವು ಗುರುತಿಸಿದೆ.

**ಸ್ಫೋಟ ನಡೆದಾಗ ಮಹಾರಾಷ್ಟ್ರದಲ್ಲಿ ಹಾಗೂ ಕೇಂದ್ರದಲ್ಲಿ ಸರ್ಕಾರದ ನೇತೃತ್ವವನ್ನು ಕಾಂಗ್ರೆಸ್ ವಹಿಸಿತ್ತು. ಆಗ ಕೇಸರಿ ಭಯೋತ್ಪಾದನೆ ಎಂಬ ಪದವು ಚಾಲ್ತಿಗೆ ಬಂದಿತ್ತು. ಪ್ರಕರಣದ ತನಿಖೆಯನ್ನು ನಂತರದಲ್ಲಿ ಎನ್‌ಐಎಗೆ ವಹಿಸಲಾಯಿತು. ಇದಾದ ನಂತರದಲ್ಲಿ, ಎನ್‌ಐಎ ಅಧಿಕಾರಿಗಳು ಕೆಲವರ ವಿರುದ್ಧದ ಆರೋಪಗಳನ್ನು ಕೈಬಿಟ್ಟರು. ಸಾಕ್ಷ್ಯಗಳ ಬಗ್ಗೆ ಪ್ರಶ್ನೆಗಳು ಮೂಡಿದ್ದವು. ವಿಚಾರಣೆಯ ಸಂದರ್ಭದಲ್ಲಿ 37 ಜನ ಪ್ರತಿಕೂಲ ಸಾಕ್ಷಿಗಳಾದರು. ಆರೋಪಿಗಳ ವಿಚಾರದಲ್ಲಿ ಮೃದು ಧೋರಣೆ' ತಳೆಯುವಂತೆ ಎನ್‌ಐಎ ಸೂಚಿಸಿದೆ ಎಂದು ಆಗ ಪ್ರಕರಣದ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ ಆಗಿದ್ದ ರೋಹಿಣಿ ಸಾಲಿಯಾನ್ ಬಹಿರಂಗವಾಗಿ ಆರೋಪಿಸಿದ್ದರು. ನಂತರ ರೋಹಿಣಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.**

ಮಾಲೇಗಾಂವ್ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯವು 'ತೀವ್ರ ಪ್ರಮಾಣದಲ್ಲಿ ಅನುಮಾನವನ್ನು ಸಾಬೀತು ಮಾಡಲಾಗಿದೆಯಾದರೂ, ಆರೋಪಿಗಳು ದೋಷಿಗಳು ಎಂದು ಹೇಳಲು ಸಾಕಾಗುವಷ್ಟು ಆಧಾರ ಇರಲಿಲ್ಲ' ಎಂದು ಹೇಳಿದೆ. ಹೀಗಾಗಿ ಈ ಪ್ರಕರಣದಲ್ಲಿ ನ್ಯಾಯಾಲಯವು ಸಂದೇಹದ ಲಾಭವನ್ನು ಆರೋಪಿಗಳಿಗೆ ನೀಡಿದೆ.

ಮಾಲೇಗಾಂವ್ ಪ್ರಕರಣವು ಹಲವು ಬಗೆಯ ತಿರುವುಗಳನ್ನು ಪಡೆದುಕೊಂಡಿತ್ತು. ಆ ತಿರುವುಗಳು ರಾಜಕೀಯ ಸ್ಥಿತ್ಯಂತರಗಳು, ಸರ್ಕಾರದ ಚುಕ್ಕಾಣಿ ಹಿಡಿದವರಲ್ಲಿ ಆದ ಬದಲಾವಣೆಗಳಿಗೆ ಅನುಗುಣವಾಗಿ ಇದ್ದವು. ಹೇಮಂತ ಕರ್ಕರೆ ನೇತೃತ್ವದ ಮಹಾರಾಷ್ಟ್ರ ಭಯೋತ್ಪಾದನಾ ವಿರೋಧಿ ದಳವು ಎಟಿಎಸ್ ಬಲಪಂಥೀಯ ಹಿಂದೂ ಸಂಘಟನೆ ಅಭಿನವ ಭಾರತದ ಜೊತೆ ನಂಟು ಹೊಂದಿದ್ದ ವ್ಯಕ್ತಿಗಳನ್ನು ಬಂಧಿಸಿತ್ತು. ಅವರಲ್ಲಿ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ಅವರೂ ಒಬ್ಬರು. ಪ್ರಜ್ಞಾ ಅವರು ನಂತರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಲೋಕಸಭಾ ಸದಸ್ಯರೂ ಆಗಿದ್ದರು. ಭಯೋತ್ಪಾದನೆಗೆ ಸಂಬಂಧಿಸಿದ ಹಲವು ಪ್ರಕರಣಗಳು ಈ ಹಿಂದೆಯೂ ತಾರ್ಕಿಕ ಅಂತ್ಯ ಕಂಡಿಲ್ಲ. 2006ರಲ್ಲಿ ನಡೆದ ಮಾಲೇಗಾಂವ್ ಸ್ಫೋಟ ಪ್ರಕರಣವು 37 ಜನರನ್ನು ಬಲಿ ಪಡೆದಿತ್ತು. ಆ ಸ್ಫೋಟಕ್ಕೆ ಸಂಬಂಧಿಸಿದ ಪ್ರಕರಣಗಳು ತಾರ್ಕಿಕ ಅಂತ್ಯ ಕಂಡಿಲ್ಲ. 2007ರಲ್ಲಿ 68 ಜನರ ಸಾವಿಗೆ ಕಾರಣವಾದ ಸಂಝೋತಾ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣ, ಹೈದರಾಬಾದ್ ಮೆಕ್ಕಾ ಮಸೀದಿಯಲ್ಲಿ 2007ರಲ್ಲಿ ಒಂಬತ್ತು ಜನರ ಸಾವಿಗೆ ಕಾರಣವಾದ ಸ್ಫೋಟ, ಅಜ್ಮೇರ್ ದರ್ಗಾ ಷರೀಫ್‌ನಲ್ಲಿ ಮೂವರ ಸಾವಿಗೆ ಕಾರಣವಾದ ಸ್ಫೋಟ ಪ್ರಕರಣ ಕೂಡ ತಾರ್ಕಿಕ ಅಂತ್ಯ ಕಂಡಿಲ್ಲ. ಈ ಎಲ್ಲಾ ಪ್ರಕರಣಗಳ ಪೂರ್ಣ ಸತ್ಯ ಏನು ಎಂಬುದು ದೇಶಕ್ಕೆ ಗೊತ್ತಾಗುವ ಸಾಧ್ಯತೆಯೂ ಕಾಣುತ್ತಿಲ್ಲ. ಮುಂಬೈ ರೈಲು ಸ್ಫೋಟ ಪ್ರಕರಣದ ಆರೋಪಿಗಳನ್ನು ದೋಷಮುಕ್ತಗೊಳಿಸಿದ ಆದೇಶ ಪ್ರಶ್ನಿಸಿ ದೇವೇಂದ್ರ ಫಡ್ನವೀಸ್ ನೇತೃತ್ವದ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಆದರೆ ಮಾಲೇಗಾಂವ್ ಪ್ರಕರಣದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದೇ ಎಂಬ ಬಗ್ಗೆ ಎನ್‌ಐಎ ಏನೂ ಹೇಳಿಲ್ಲ.

ಆರೋಪಿಗಳು ದೋಷಮುಕ್ತರಾಗಿರುವುದಕ್ಕೆ ಕಾರಣ ಅಸಮರ್ಥ ತನಿಖೆಯೇ, ತನಿಖಾ ಸಂಸ್ಥೆಗಳ ಪಕ್ಷಪಾತಿ ಧೋರಣೆಯೇ, ಅವುಗಳಲ್ಲಿ ಇರುವ ಪೂರ್ವಗ್ರಹಗಳೇ ಅಥವಾ ತನಿಖೆಯಲ್ಲಿ ಇದ್ದಿರಬಹುದಾದ ರಾಜಕೀಯ ಹಸ್ತಕ್ಷೇಪವೇ ಇವುಗಳಲ್ಲಿ ಯಾವುದು ಕಾರಣ ಆಗಿದ್ದರೂ, ಪ್ರಮುಖ ಪ್ರಕರಣಗಳಲ್ಲಿ ನ್ಯಾಯದಾನ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡದೆ ಇರುವುದನ್ನು ಅದು ತೋರಿಸುತ್ತದೆ.

# ಡ್ರೈ ಸ್ಕಿನ್ ಇರುವವರಿಗೆ ಬೆಸ್ಟ್ ಹಾಲಿನ ಕೆನೆಯ ಫೇಸ್‌ಪ್ಯಾಕ್

ಹಾಲಿನ ಕೆನೆ, ಅರಿಶಿನವನ್ನು ಬಹಳ ಹಿಂದಿನಿಂದಲೂ ಸೌಂದರ್ಯವನ್ನು ಹೆಚ್ಚಿಸಲು ಬಳಸಲಾಗುತ್ತಿತ್ತು. ಈ ಫೇಸ್‌ಪ್ಯಾಕ್ ಅನ್ನು ತಯಾರಿಸುವುದು ಹೇಗೆ ಎನ್ನುವುದನ್ನು ತಿಳಿಯೋಣ. ಡ್ರೈ ಸ್ಕಿನ್ ಇರುವವರು ತಮ್ಮ ಚರ್ಮವನ್ನು ಹೈಡ್ರೇಟ್ ಆಗಿರಿಸಲು, ಚರ್ಮವನ್ನು ಕೋಮಲವಾಗಿರಿಸಲು ಅಡುಗೆ ಮನೆಯಲ್ಲಿರುವ ಕೆಲವೊಂದು ಸಾಮಾಗ್ರಿಗಳು ಸಹಕಾರಿಯಾಗಬಲ್ಲದು. ಅಡುಗೆ ಮನೆಯು ನೈಸರ್ಗಿಕ ಚರ್ಮದ ಆರೈಕೆ ಪದಾರ್ಥಗಳಿಂದ ತುಂಬಿದೆ. ಅಂತಹ ಪದಾರ್ಥಗಳಲ್ಲಿ ಹಾಲಿನ ಕೆನೆ ಮತ್ತು ಅರಿಶಿನ ಕೂಡಾ ಒಂದು. ಇವು ಹಲವಾರು ತಲೆಮಾರುಗಳಿಂದ ಭಾರತೀಯ ಸೌಂದರ್ಯದ ಭಾಗವಾಗಿವೆ. ಹಾಲಿನ ಕೆನೆಯು ಕಠಿಣವಾದ ಸ್ಕಬ್ಬರ್‌ಗಳು ಮತ್ತು ಕ್ಲೀನರ್ ಗಳಿಲ್ಲದೆ ನಿಮ್ಮ ಚರ್ಮವನ್ನು ಹೈಡ್ರೇಟ್ ಮಾಡುತ್ತದೆ ಮತ್ತು ಎಫ್ಫೋಲಿಯೇಟ್ ಮಾಡುತ್ತದೆ. ಅರಿಶಿನವು ಆಂಟಿಫಂಗಲ್ ಮತ್ತು ಉರಿಯೂತ ನಿವಾರಕವಾಗಿದೆ.

**ಒಣ ಚರ್ಮಕ್ಕಾಗಿ DIY ಹಾಲಿನ ಕೆನೆ, ಅರಿಶಿನ ಫೇಸ್ ಮಾಸ್ಕ್:** ಈ ಮಳೆಗಾಲದಲ್ಲಿ ಹೊಳೆಯುವ ಚರ್ಮವನ್ನು ಪಡೆಯುವ ಬಯಕೆ ನಿಮ್ಮದಾಗಿದ್ದರೆ ಬಹಳ ಸರಳವಾಗಿ ಮನೆಯಲ್ಲೇ ಈ ಹಾಲಿನ ಕೆನೆ ಹಾಗೂ ಅರಿಶಿನದಿಂದ ಫೇಸ್‌ಮಾಸ್ಕ್ ತಯಾರಿಸಿ ಹಚ್ಚಿಕೊಳ್ಳಿ.

**ತಯಾರಿಸುವ ವಿಧಾನ:** ಒಂದು ಶುದ್ಧ ಬಟ್ಟಲಿನಲ್ಲಿ, ತಾಜಾ ಹಾಲಿನ ಕೆನೆ ತೆಗೆದುಕೊಳ್ಳಿ. ಅರಿಶಿನ ಪುಡಿಯನ್ನು ಸೇರಿಸಿ. ಬಳಸುತ್ತಿದ್ದರೆ, ಕಡಲೆ ಹಿಟ್ಟು ಮತ್ತು ಕೆಲವು ಹನಿ ರೋಸ್ ವಾಟರ್ ಸೇರಿಸಿ. ನೀವು ನಯವಾದ, ಸ್ಥಿರವಾದ ಪೇಸ್ಟ್ ಅನ್ನು ಪಡೆಯುವವರೆಗೆ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಬೆರೆಸಿ. ಮಾಸ್ಕ್ ಅನ್ನು ಹಚ್ಚುವ ಮೊದಲು, ಸೌಮ್ಯವಾದ ಕ್ಲೆನ್ಸರ್‌ನಿಂದ ನಿಮ್ಮ ಮುಖವನ್ನು ನಿಧಾನವಾಗಿ ಸ್ವಚ್ಛಗೊಳಿಸಿ. ಮುಖವನ್ನು ಒರೆಸಿ.

ಸ್ವಚ್ಛವಾದ ಬೆರಳುಗಳು ಅಥವಾ ಮೃದುವಾದ ಬ್ರಷ್ ಬಳಸಿ, ನಿಮ್ಮ ಮುಖ ಮತ್ತು ಕುತ್ತಿಗೆಯಾದ್ಯಂತ ಪೇಸ್ಟ್ ಅನ್ನು ಹಚ್ಚಿ. ನಿಮ್ಮ ಕಣ್ಣುಗಳು ಮತ್ತು ತುಟಿಗಳ ಸುತ್ತಲಿನ ಸೂಕ್ಷ್ಮ ಚರ್ಮವನ್ನು ತಪ್ಪಿಸಲು ಜಾಗರೂಕರಾಗಿರಿ.

**ಬೇಕಾಗುವ ಪದಾರ್ಥಗಳು**

- **ಒಂದು ಚಮಚ ತಾಜಾ ಹಾಲಿನ ಕೆನೆ**
- **ಕಾಲು ಟೀಚಮಚ ಅರಿಶಿನ ಪುಡಿ**
- **ಅರ್ಧ ಟೀಚಮಚ ಕಡಲೆ ಹಿಟ್ಟು**
- **ಕೆಲವು ಹನಿ ರೋಸ್ ವಾಟರ್**



ಮಾಸ್ಕ್ ಅನ್ನು 15 ರಿಂದ 20 ನಿಮಿಷಗಳ ಕಾಲ ಬಿಡಿ. ಪದಾರ್ಥಗಳು ನಿಮ್ಮ ಚರ್ಮವನ್ನು ಆಳವಾಗಿ ಪೋಷಿಸಲು ಬಿಡಿ.

**ಮುಖ ತೊಳೆಯುವ ಮೊದಲು ಮಸಾಜ್ ಮಾಡಿ**

ನೀವು ಮುಖವನ್ನು ತೊಳೆಯುವಾಗ ವೃತ್ತಾಕಾರದ ಚಲನೆಗಳಲ್ಲಿ ನಿಧಾನವಾಗಿ ಮಸಾಜ್ ಮಾಡಿ. ಈ ಲಘು ಮಸಾಜ್ ಚರ್ಮವನ್ನು ನಿಧಾನವಾಗಿ ಎಫ್ಫೋಲಿಯೇಟ್ ಮಾಡಲು ಸಹಾಯ ಮಾಡುತ್ತದೆ. ಉಗುರು ಬೆಚ್ಚಗಿನ ನೀರಿನಿಂದ ಚೆನ್ನಾಗಿ ತೊಳೆಯಿರಿ.

ಚರ್ಮವನ್ನು ಹೈಡ್ರೇಟ್ ಆಗಿರಿಸಲು ಮಾಯಿಶ್ಚರೈಸರ್ ಅನ್ನು ಹಚ್ಚಿರಿ. ಉತ್ತಮ ಬದಲಾವಣೆಗಳನ್ನು ನೋಡಲು ವಾರಕ್ಕೆ ಒಂದು ಅಥವಾ ಎರಡು ಬಾರಿ ಈ DIY ಹಾಲಿನ ಕೆನೆ ಮತ್ತು ಅರಿಶಿನ ಫೇಸ್ ಮಾಸ್ಕ್ ಅನ್ನು ಬಳಸಿ.



# ಹಬ್ಬದ ಸಮಯಕ್ಕೆ ಮನೆಯಲ್ಲೇ ಮಾಡಿ ಸಿಹಿ ಬೂಂದಿ

ವರಮಹಾಲಕ್ಷ್ಮಿ ಹಬ್ಬ ಆಗಮಿಸುತ್ತಿದೆ. ಶ್ರಾವಣ ಮಾಸದಲ್ಲಂತು ಒಂದಲ್ಲಾ ಒಂದು ಹಬ್ಬಗಳು ಬರುತ್ತಲೇ ಇರುತ್ತವೆ. ಒಂದರ ಹಿಂದೆ ಒಂದು ಹಬ್ಬ, ವ್ರತ, ಪೂಜೆ ಬಂದೇ ಬರುತ್ತವೆ. ಇನ್ನು ವರಮಹಾಲಕ್ಷ್ಮಿ ಹಬ್ಬದಲ್ಲಿ ಲಕ್ಷ್ಮಿ ದೇವಿಯ ಪೂಜೆ ಮಾಡಲಾಗುತ್ತದೆ. ಈ ಸಮಯದಲ್ಲಿ ಲಕ್ಷ್ಮಿಗೆ ಬಹಳ ಇಷ್ಟದ ಪೂಜೆ, ಪ್ರಸಾದ ಮಾಡುವುದು ಸಾಮಾನ್ಯ. ನಾವಿಂದು ಮನೆಯಲ್ಲೇ ಹಬ್ಬದ ಸಲುವಾಗಿ ಮಾಡುವಂತಹ ಒಂದು ಪೂಜೆಯ ಕುರಿತಾಗಿ ತಿಳಿದುಕೊಳ್ಳೋಣ. ಅದ್ರಲ್ಲೂ ಹಬ್ಬ ಎಂದರೆ ಅಲ್ಲಿ ಸಿಹಿ ಇರಲೇಬೇಕು. ನಾವಿಂದು ಹಬ್ಬದ ಸಂಭ್ರಮ ಹೆಚ್ಚಿಸುವಂತಹ ಸಿಹಿ ಬೂಂದಿ ಮಾಡುವ ಕುರಿಯಾಗಿ ತಿಳಿದುಕೊಳ್ಳೋಣ. ನೀವು ಅಂಗಡಿಗಳಲ್ಲಿ, ಬೇಕರಿಗಳಲ್ಲಿ ನೋಡಿದಂತೆ ಸಿಹಿಯಾದ ಈ ಬೂಂದಿ ಎಲ್ಲರ ಬಾಯಲ್ಲೂ ನೀರು ತರಿಸಲಿವೆ. ಹಾಗೆ ಬೂಂದಿ ಅಂದ್ರೆ ಎಲ್ಲರಿಗೂ ಇಷ್ಟವಾಗುತ್ತೆ. ಸಿಹಿ ಬೂಂದಿಯಿಂದಲೇ ಲಡ್ಡು ಸಹ ಮಾಡುತ್ತಾರೆ, ಆದ್ರೆ ನಾವಿಂದು ಸುಲಭದ ಈ ಸಿಹಿ ಬೂಂದಿ ಮಾಡುವ ಕುರಿತು ತಿಳಿಯೋಣ. ಇದು ಸುಲಭವಾಗಿ ನಿಮ್ಮ ಬಾಯಲ್ಲಿ ನೀರು ತರಿಸಬಹುದು. ಹಾಗೆ ಮನೆಯಲ್ಲಿ ಇದನ್ನು ಮಾಡಿದ್ರೆ ಹಬ್ಬದಂದು ಪೂಜೆಯಲ್ಲಿ ನೈವೇದ್ಯಕ್ಕೂ ಬಳಸಬಹುದು. ಹಾಗೆ ಹಬ್ಬದ ಊಟದ ರುಚಿ ಹೆಚ್ಚಿಸೋದು ಖಚಿತ. ಹಾಗಾದ್ರೆ ಈ ಸಿಹಿ ಬೂಂದಿ ಮಾಡುವುದು ಹೇಗೆ? ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು? ಮಾಡಲು ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ.

**ಸಿಹಿ ಬೂಂದಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು?**

- ಕಡಲೆ ಹಿಟ್ಟು
- ಸಕ್ಕರೆ
- ಸೋಡಾ ಕಲರ್ ಪುಡಿ
- ಏಲಕ್ಕಿ ಪುಡಿ
- ಲವಂಗ
- ಎಣ್ಣೆ

**ಸಿಹಿ ಬೂಂದಿ ಮಾಡುವುದು ಹೇಗೆ:** ಮೊದಲು ಒಂದು ಅಳತೆ ಕಪ್‌ನಲ್ಲಿ ಎರಡು ಕಪ್ ಕಡಲೆ ಹಿಟ್ಟನ್ನು ತೆಗೆದುಕೊಂಡು ಬೌಲ್‌ಗೆ ಹಾಕಿ ನೀರು ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಸುಮಾರು ಎರಡು ಕಾಲು ಕಪ್ ನೀರು ಹಾಕಿ ಗಂಟುಗಳು ಇಲ್ಲದಂತೆ ಹಿಟ್ಟನ್ನು ಹದ ಮಾಡಿಕೊಳ್ಳಿ. ಇದು ತೆಳುವಾಗಿ ದೋಸೆ ಹಿಟ್ಟಿನ ಹದಕ್ಕೆ ಬರಬೇಕು. ನಂತರ ಇದಕ್ಕೆ ಹಳದಿ ಕಲರ್ ಪುಡಿ ಹಾಗೆ ಚಿಟಿಕೆ ಸೋಡಾ ಹಾಕಿ ಮಿಕ್ಸ್ ಮಾಡಿಕೊಳ್ಳಿ. ಈಗ ಒಲೆ ಮೇಲೆ ಬಾಣಲೆ ಇಟ್ಟು ಕಾಯಲು ಬಿಡಿ. ಉರಿ ದೊಡ್ಡದಾಗಿ ಇಟ್ಟು ಕಾಯಲು ಬಿಡಿ. ಈಗ ಬೂಂದಿಯನ್ನು ಎಣ್ಣೆಗೆ ಬಿಡಬೇಕು. ಬೂಂದಿ ಹಾಕು ತೂತುಗಳಿರುವ ಜರಡಿ, ಸೌಟು ಅಥವಾ ಕೈ ಪಾತ್ರೆ ಬಳಸಬಹುದು. ಬಾಣಲೆ ಮೇಲೆ ಹಿಡಿದು ಅದರೊಳಗೆ ಹಿಟ್ಟು ಹಾಕಿದರೆ ಬೂಂದಿ ಕರಿಯಲು ಸಿದ್ದವಾಗುತ್ತದೆ. ಸುಮಾರು ಅರ್ಧ ನಿಮಿಷಕ್ಕಿಂತ ಕಡಿಮೆ (15 ಸೆಕೆಂಡ್) ಸಮಯ ಫ್ರೈ ಮಾಡಬೇಕು. ಎಲ್ಲಾ ಹಿಟ್ಟನ್ನು ಇದೇ ರೀತಿ ಬೂಂದಿ ಕರಿದುಕೊಂಡು ಜರಡಿಯಲ್ಲಿ ಇಟ್ಟ ಎಣ್ಣೆ ಇಳಿಯಲು ಬಿಡಿ. ಬೂಂದಿ ಗಟ್ಟಿಯಾಗಿರಬಾರದು ಇದು ಮೃದುವಾಗಿರಬೇಕು. ಈಗ ಎರಡು ಮುಷ್ಟಿ ಬೂಂದಿಯನ್ನು ಮಿಕ್ಸಿ ಜಾರ್‌ಗೆ ಹಾಕಿ ತರಿತರಿಯಾಗಿ ರುಬ್ಬಿಟ್ಟುಕೊಳ್ಳಿ. ಈಗ ಮತ್ತೊಂದು ಬಾಣಲೆ ಇಟ್ಟು ಅದಕ್ಕೆ 2 ಕಪ್ ಸಕ್ಕರೆ ಹಾಕಿ ಅಧ ಕಪ್ ನೀರು ಹಾಕಿ. ಬಳಿಕ ಹಳದಿ ಬಣ್ಣ, ಏಲಕ್ಕಿಪುಡಿ, 2 ಲವಂಗ ಸೇರಿಸಿ ಚೆನ್ನಾಗಿ ಮಿಕ್ಸ್ ಆಗಿ 1 ಎಳೆ ಪಾಕ ಬರುವಂತೆ ಮಾಡಿ. ಈಗ ಒಲೆ ಸಣ್ಣ ಮಾಡಿಕೊಂಡು ಫ್ರೈ ಮಾಡಿಕೊಂಡ ಬೂಂದಿಯನ್ನು ಹಾಕಿಕೊಂಡು 4 ನಿಮಿಷ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ನಂತರ ಮುಚ್ಚಳ ಮುಚ್ಚಿ 1 ಗಂಟೆ ಹಾಗೆಯೇ ಬಿಡಬೇಕು. ಇಷ್ಟಾದರೆ ಹುಡಿ ಹುಡಿಯಾದ ಸಹಿ ಬೂಂದಿ ರೆಡಿಯಾಗುತ್ತದೆ. ನೀವು ಕೂಡ ಮನೆಯಲ್ಲಿ ಇದನ್ನು ಮಾಡಿ ನೋಡಿ.




ಉದಯವಾಹಿನಿ ಚಿತ್ರ

# ಭತ್ತ ಏಷ್ಯಾ ಖಂಡದ ಅದ್ಭುತ ಆಹಾರ


ವಿಶ್ವಾಸ್.ಡಿ.ಗೌಡ

ಭತ್ತ ಜಗತ್ತಿನ ಅರ್ಧ ಜನರ ಪ್ರಮುಖ ಆಹಾರವಾಗಿದೆ ಏಷ್ಯಾ ಖಂಡದ 2 ಕೋಟಿ ಜನರ ಮುಖ್ಯ ಆಹಾರವಾಗಿದ್ದು ಸುಮಾರು ಶೇ. 60 ಏಷ್ಯ ಖಂಡದ 200 ಕೋಟಿ ಜನರ ಮುಖ್ಯ ಶಕ್ತಿ ಒದಗಿಸುತ್ತದೆ. ಭತ್ತ ಮಲೆನಾಡಿನ ಮುಂಗಾರಿ ಹಂಗಾಮಿನ ಪ್ರಮುಖ ಬೆಳೆಯಾಗಿದೆ. ದಕ್ಷಿಣ ಭಾರತದಲ್ಲಿ ನೀರಾವರಿ ಆಶ್ರಯದಲ್ಲಿ ಆಹಾರವಾಗಿದ್ದು ವರ್ಷವಿಡೀ ಬೆಳೆಯಬಹುದು.

ಇತ್ತೀಚಿನ ದಶಕಗಳಲ್ಲಿ ಉತ್ತರ ಹಿಂದುಸ್ಥಾನದಲ್ಲಿ– ನೀರಾವರಿ ಸೌಕರ್ಯ ಹೆಚ್ಚಾಗಿ, ಹೆಚ್ಚಿನ ಬೆಂಬಲ ಬೆಲೆಯಿಂದ, ಕೊಳವೆ ಬಾವಿಗಳಿಗೆ ಪುಕ್ಕಿ ನೀರಾವರಿ ಪೂರೈಕೆಯಿಂದ ಭತ್ತ–ಗೋಧಿಯ ಸರಣಿ ಬೆಳೆ ಬಲು ಪ್ರಮುಖ ಬೆಳೆಯಾಗಿದೆ. ಉತ್ತರ ಪೂರ್ವ ಭಾರತದಲ್ಲಿ ಬಾಸುಮತಿ ಭತ್ತ ಅತಿ ಲಾಭದಾಯಕ ಬೆಳೆಯಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಬಾಸುಮತಿ ಅಕ್ಕಿಗೆ ಅಪಾರ ಬೇಡಿಕೆ ಇದೆ. ಬಾಸುಮತಿ ಬೆಳೆದ ರೈತರು ಬಲು ಹಣವಂತರಾಗಿದ್ದಾರೆ. ಭತ್ತ–ಗೋಧಿ ಬೆಳೆಯ ಸರಣಿ ಬೆಳೆಗಳು ಎರಡು ತೃಣ ಧಾನ್ಯಗಳಿಗೆ ಸೇರಿದ್ದರಿಂದ ಹೆಚ್ಚಿನ ಪೋಷಕಾಂಶಗಳನ್ನು ಹೀರುವುದರಿಂದ ಈ ಸರಣಿ ಬೆಳೆ ಮಣ್ಣಿನ ಫಲವತ್ತತೆ ಮತ್ತು ಗುಣಧರ್ಮ ಕಾಪಾಡುವಲ್ಲಿ ಹಾನಿಕಾರಕವಾಗಿವೆ. ಈ ಸರಣಿ ಬದಲು ಆಕಡಿ ಪೈರು ಸೇರ್ಪಡೆ ಮಾಡುವುದು ಸೂಕ್ತ. ಕೂರಿಗೆ ಭತ್ತದಲ್ಲಿ ಸೆಣಬು, ಅಲಸಂದಿ, ಮಿಶ್ರ ಬೆಳೆಯಾಗಿ ಬೆಳೆದು, ಭತ್ತದ ಜೊತೆ ಅಥವಾ ಮೊದಲು– ಅಜೊಲ್ಲಾ ಮತ್ತು ಹಸಿರು ಪಾಚಿ ಅಥವಾ ಹಸಿರು ಎಲೆ ಬೆಳೆಗಳಾದ ಸೆಣಬು, ಅಲಸಂದಿ, ಸಸ್ಪೇನಿಯ, ರೋಸ್ಪೇಟಾ ಬೆಳೆದು ರಸಗೊಬ್ಬರಗಳ ಪ್ರಮಾಣ ಕಡಿಮೆ ಮಾಡಬಹುದು. ಹೈಬ್ರಿಡ್ ಭತ್ತ ಚೀನಾ ದೇಶದಲ್ಲಿ 1976ರಲ್ಲಿ ಪರಿಚಯಿಸಿ ಈಗ ಒಟ್ಟು ಭತ್ತದ ಕ್ಷೇತ್ರದ ಅರ್ಧದಷ್ಟು 'ಬಿಐನ ಹೆಬ್ರಿಡ್ ಭತ್ತ ಆವರಿಸಿ ಭತ್ತದ ಉತ್ಪಾದನೆಯಲ್ಲಿ ಹೆಚ್ಚಳ ತಂದಿದೆ. ನಮ್ಮ ದೇಶದಲ್ಲೂ ಕೂಡ ಹೆಬ್ರಿಡ್ ಭತ್ತ 1980ರ ದಶಕದಲ್ಲಿ ಪರಿಚಯಿಸಲ್ಪಟ್ಟು ಈಗ ಸುಮಾರು 5 ಲಕ್ಷ ಹೆಕ್ಟೇರ್ ಕ್ಷೇತ್ರ ಆವರಿಸಿದೆ. ಸುಧಾರಿಸಿದ ಅಧಿಕ ಇಳುವರಿ ಕೊಡುವ ತಳಿಗಿಂತ ಹೈಬ್ರಿಡ್ ಭತ್ತದ ಇಳುವರಿಯಲ್ಲಿ ಸುಮಾರು ಶೇ.15 ದರಿಂದ 20 ಹೆಚ್ಚಳ ಕಂಡು ಬಂದಿದೆ. ಹೈಬ್ರಿಡ್ ಬೀಜೋತ್ಪಾದನೆ ಬೇಸಾಯ ಅತಿ ಲಾಭದಾಯಕವಾಗಿದೆ. ಭತ್ತ ಹೆಚ್ಚು ನೀರು ಬಯಸುವ ಬೆಳೆ. ಒಂದು ಕೆ.ಜಿ. ಭತ್ತ ಉತ್ಪಾದಿಸಲು ಸುಮಾರು 5000 ಲೀಟರ್ ನೀರು ಬೇಕಾಗುವುದು.

ಬೇಸಿಗೆ ಹಂಗಾಮಿನಲ್ಲಿ, ನೀರಾವರಿ ನೀರು ಕಡಿಮೆಯಾದಲ್ಲಿ ಕಡಿಮೆ ನೀರು ಬಯಸುವ ಗೋವಿನ ಜೋಳ, ಜೋಳ, ರಾಗಿ, ಇನ್ನಿತರೆ ಬೆಳೆಯುವುದು ಸೂಕ್ತ. ಇತ್ತೀಚೆಗೆ ನೀರು ನಿಲ್ಲದ ಭತ್ತದ ಬೇಸಾಯದಿಂದ ಕಡಿಮೆ ನೀರಾವರಿ ನೀರಿನಿಂದ ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ. ಅಕ್ಕಿ ಗಿರಣಿಗಳಲ್ಲಿ ಅಕ್ಕಿ ಪಾಲಿಶ್ ಮಾಡಿದಾಗ ತೌಡಿನಲ್ಲಿ ಅನೇಕ ಲವಣಾಂಶಗಳು ಮತ್ತು ಎ ವಿಟಮಿನ್ ಪೂರೈಸುವ ಬೀಟಾ ಕ್ಯಾರೋಟಿನ್ ಹೋಗುವುದುಂಟು. ಇತ್ತೀಚೆಗೆ ಕೆಂಪು ಅಕ್ಕಿ ಅಥವಾ ಬಂಗಾರದ ಅಕ್ಕಿ ಅಭಿವೃದ್ಧಿ ಪಡಿಸಿದ್ದು ಈ ಅಕ್ಕಿ ಹೆಚ್ಚಿನ ಬೀಟಾ ಕ್ಯಾರೋಟಿನ್‌ಯುಕ್ತವಾಗಿದ್ದು ಮತ್ತು ಕಬ್ಬಿಣ ಪೂರೈಸುವ ಅಕ್ಕಿಯ ತಳಿ ಅಭಿವೃದ್ಧಿ ಪಡಿಸಿ ಎ ವಿಟಮಿನ್ ಕೊರತೆಯಿಂದಾಗುವ ಕುರುಡುತನ ಕಡಿಮೆ ಮಾಡುವಲ್ಲಿ ಮತ್ತು ಮಾನವನ ಚರ್ಮಕಾಂತಿ ಹೆಚ್ಚಿಸುವಲ್ಲಿ ಕೆಂಪು ಅಕ್ಕಿ ಸಹಕಾರಿ. ಭತ್ತಕ್ಕೆ ತಗಲುವ ಕೀಟಗಳಲ್ಲಿ ಕಣೆ, ಕಂದು ಜಿಗಿಹುಳು, ಕಾಂಡ ಕೊರಕ ಪ್ರಮುಖವಾಗಿವೆ.

ಈಗ ಕಣೆ ನಿರೋಧಕ ತಳಿಗಳು ಲಭ್ಯವಾಗಿದ್ದು ರೈತರಲ್ಲಿ ಜನಪಿಯವಾಗಿವೆ. ಕಂದು ಜಿಗಿಹುಳು ನಿಯಂತ್ರಿಸಬಹುದಾಗಿದೆ. ಭತ್ತದ ಕಾಂಡ ಕೊರಕ ನಿರೋಧಿಸುವ ಬಿ.ಟಿ.ಭತ್ತ ಈಗ ಅಭಿವದ್ಧಿ ಹಂತದಲ್ಲಿವೆ. ಬೆಂಕಿ ರೋಗ–ನಿರೋಧಕ ತಳಿಗಳು ಬೇಸಾಯ ಮತ್ತು ಸಾರಜನಕ ಗೊಬ್ಬರ ತಡೆಹಿಡಿದಿರುವುದರಿಂದ ರೋಗದ ತೀವ್ರತೆ ಕಡಿಮೆ ಮಾಡಬಹುದು.

**ಹೈಬ್ರಿಡ್ ಭತ್ತ :** ಕಡಿಮೆ ಅವಧಿಯಲ್ಲಿ ಹೆಚ್ಚು ಇಳುವರಿ ಕೊಡುವ ಶಕ್ತಿಯನ್ನು ಹೊಂದಿವೆ. ಹೆಕ್ಟೇರಿಗೆ 15 ರಿಂದ 20 ಕೆ.ಜಿ. ಬಿತ್ತನೆ ಬೀಜ ಅಂಗಲವಾಗಿ ಸಸಿಮಡಿಯಲ್ಲಿ ಬಿತ್ತನೆ ಮಾಡಿ ಸದ್ಯದ ಒಂದೇ ಸಸಿ ನಾಟಿ ಮಾಡಿರಿ. ಚ.ಮೀ.ಗೆ 55 ಸಸಿಗಳಂತೆ 20 ದಿನಗಳ ಸಸಿಗಳನ್ನು ನಾಟಿ ಮಾಡಿರಿ. ಕೆ.ಆರ್.ಹೆಚ್–2 ಮಧ್ಯಮಾವಧಿ ಹೈಬ್ರಿಡ್ ಭತ್ತ, ಬಿತ್ತನೆಯಿಂದ ಕಟಾವಿಗೆ 130 ದಿನಗಳು ವಾದ ಹಿಡಿಯುತ್ತದೆ. ಮುಂಗಾರಿಯಲ್ಲಿ ಜುಲೈ ಮಧ್ಯ ಮತ್ತು ಬೇಸಿಗೆ ಕಾಲದಲ್ಲಿ ಜನವರಿ 10 ರಿಂದ 20 ನಾಟಿ ಮಾಡಿರಿ. ರಸಗೊಬ್ಬರ ನೀರಾವರಿ ಆಶ್ರಯದಲ್ಲಿ ಹೆಕ್ಟೇರಿಗೆ 150ಕೆ.ಜಿ. ಸಾರಜನಕ, 75ಕೆ.ಜಿ. ರಂಜಕ, ಅಮಾ 75ಕೆ.ಜಿ. ಪೊಟ್ಯಾಷ್ ಒದಗಸಬೇಕು. ಕೂರಿಗೆ ಭತ್ತದ ಬೆಳೆಯಲ್ಲಿ ಸೆಣಬು/ಅಲಸಂದಿ ಬೀಜಗಳನ್ನು ಭತ್ತದ ಬೀಜದಲ್ಲಿ ಬೆರೆಸಿ ಬೆಳೆಯ 40 ಪ್ರಸರಿಂದ 50 ದಿನಗಳ ನಂತರ ಮುಗ್ಗು ಹೊಡೆಯಿರಿ. ಇಳುವರಿ ಕ್ವಿಂಟಾಲಿಗೆ 50 ರಿಂದ 55 ಕ್ವಿಂಟಾಲ್.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ**

- **ಕೃಷಿ ಸಂಶೋಧನಾ ಕೇಂದ್ರ, ಮಂಡ್ಯ, ನಾಗೇನಹಳ್ಳಿ(ಮೈಸೂರು), ಕತ್ತಲಗೆರೆ(ದಾವಣಗೆರೆ), ಕಂಕನಾಡಿ (ಮಂಗಳೂರು), ಮುಗದ (ಧಾರವಾಡ), ಸಿರುಗುಪ್ಪ, ಗಂಗಾವತಿ.**
- **ಭತ್ತದ ಸಂಶೋಧನಾಲಯ, ರಾಜೇಂದ್ರನಗರ, ಹೈದರಾಬಾದ್–500 030.**
- **ಕೇಂದ್ರೀಯ ಭತ್ತ ಸಂಶೋಧನಾ ಸಂಸ್ಥೆ, ಕಟಕ–753006**
- **ಅಂತರ ರಾಷ್ಟ್ರೀಯ ಭತ್ತದ ಸಂಶೋಧನಾ ಸಂಸ್ಥೆ, ಮಣಿಲಾ, ಫಿಲಿಫೈನ್ಸ್.**

# ರಾಮಾಯಣ



ಶ್ರೀರಾಮನು ಪಾದುಕೆಗಳನ್ನು ಕೊಟ್ಟು ಭರತನನ್ನು ಕಳುಹಿಸಿದ್ದು

• ಹಿಂದಿನ ಸಂಚಿಕೆಯಿಂದ

## 112 ನೆಯ ಅಧ್ಯಾಯ

ಶ್ರೀರಾಮನು ಅಯೋಧ್ಯಾಪಟ್ಟಣಕ್ಕೆ ಹೋಗಿ ಪಟ್ಟವನ್ನು ಕಟ್ಟಿಕೊಂಡು ರಾಜ್ಯಪರಿಪಾಲನವನ್ನು ಮಾಡಿಕೊಂಡಿರಲ್ಲಿ ಎಂದು ಹೇಳಿದನು. ಒಡಹುಟ್ಟಿದವನಾದ ಭರತನ ಮಾತನ್ನು ಕೇಳಿ ಶ್ರೀರಾಮನು ಅತ್ಯಂತಾಶ್ಚರ್ಯಪಟ್ಟು ಆ ಪುರಜನರನ್ನು ಕುರಿತು ಎಲೈ ಜನರೇ, ಕೇಳಿ. ನಮ್ಮ ತಂದೆಯಾದ ದಶರಥರಾಯನು ಜೀವಂತನಾಗಿದ್ದಾಗ ಒಬ್ಬರಿಗೆ ಕ್ರಯವಾಗಿ ಕೊಟ್ಟ ವಸ್ತುವನ್ನಾಗಲಿ, ಕೊಂಡ ವಸ್ತುವನ್ನಾಗಲಿ, ಅಡಮಾನವಿಟ್ಟದ್ದನ್ನಾಗಲಿ ಬದಲಾಯಿಸಲು ನನಗಾಗಲಿ ಭರತನಿಗಾಗಲಿ ಅಧಿಕಾರವಿಲ್ಲ. ದಶರಥರಾಯನ ಪ್ರತಿಜ್ಞೆಯನ್ನು ನಾನು ಮೀರಬಾರದು. ವನವಾಸಕ್ಕೆ ಪ್ರತಿನಿಧಿಯನ್ನು ಏರ್ಪಡಿಸುವುದು ಹೀನಕೃಷ್ಣ, ನಾನು ಅಯೋಧ್ಯಾಪಟ್ಟಣಕ್ಕೆ ತಿರುಗಿ ಹೋಗುವವನಲ್ಲ. ಕೈಕೇಯಿದೇವಿಯು ಯುಕ್ತವಾದುದನ್ನೇ ಆಡಿರುವಳು. ತಂದೆಯೂ ನ್ಯಾಯವಾದುದನ್ನೇ ಮಾಡಿರುವನು. ಭರತನು ಮಹಾ ಶಾಂತಗುಣವುಳ್ಳವನೂ ಸದ್ಗುಣಸಂಪನ್ನನೂ ಗುರುಭಕ್ತನೂ ಎಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಸತ್ಯಸಂಧನಾಗಿ ಮಹಾತ್ಮನಾದ ಭರತನಲ್ಲಿ ಕಲ್ಯಾಣಗುಣಗಳೇ ಇರುವುವು. ನಾನು ಹದಿನಾಲ್ಕು ವರುಷಗಳ ವನವಾಸ ಎಂಬ ಮಿತಿಯು ತುಂಬಿದ ಮೇಲೆ ಅಯೋಧ್ಯಾಪಟ್ಟಣಕ್ಕೆ ಬಂದು ಧರ್ಮಶೀಲನಾದ ಭರತನನ್ನು ಕೂಡಿಕೊಂಡು ರಾಜ್ಯಾಧಿಪತ್ಯವನ್ನು ಮಾಡುವೆನು. ಕೈಕೇಯಾದೇವಿಗೆ ವರವನ್ನು ಕೊಟ್ಟಿದ್ದಾಗಿ ಪ್ರತಿಜ್ಞೆಯನ್ನು ಮಾಡಿದ ದಶರಥರಾಯನ ಆಜ್ಞೆಯನ್ನು ಮೀರಲಾರೆನು ಎಂದು ನುಡಿದನು.

**ಶ್ರೀರಾಮನು ಪಾದುಕೆಗಳನ್ನು ಕೊಟ್ಟು ಭರತನನ್ನು ಕಳುಹಿಸಿದ್ದು**

ಆಮೇಲೆ ಆ ಆಶ್ರಮಕ್ಕೆ ಬಂದಿದ್ದ ಋಷಿಗಳು ಅಪರಿಮಿತವಾದ ತೇಜಸ್ಸುಳ್ಳ ಮಹಾತ್ಮರಾದ ಶ್ರೀರಾಮನನ್ನೂ ಭರತನನ್ನೂ ಕಂಡು ಅತ್ಯಂತ ಸಂತೋಷಪಟ್ಟು ಆಹಾ ಇಂಥ ಸತ್ಪುರುಷರುಂಟೆ ಲೋಕದಲ್ಲಿ ಇವರೇ ಸತ್ಯಸಂಧರು. ಇವರೇ ಮಹಾ ಧನ್ಯರು. ಅತ್ಯಂತ ಧರ್ಮರಹಸ್ಯವನ್ನು ಬಲ್ಲವರು. ಅತಿಪರಾಕ್ರಮಿಗಳು ಇಂಥ ಮಕ್ಕಳನ್ನು ಹೆತ್ತ ತಾಯಿತಂದೆಗಳೇ ಕೃತಾರ್ಥರು. ಇವರ ಸಂಭಾಷಣೆಯನ್ನು ಕೇಳುವುದಕ್ಕೆ ಪ್ರೀತಿಯಾಗುತ್ತದೆ ಎಂದು ಕೊಂಡಾಡಿದರು.

ಆನಂತರ ಭರತನನ್ನು ಕುರಿತು ಭರತ, ನೀನು ಸತ್ಕುಲಪ್ರಸೂತನು, ಮಹಾಪ್ರಾಜ್ಞನು, ಕೀರ್ತಿವಂತನು. ನಿನ್ನದು ಮಹಾ ಸಚ್ಚರಿತ್ರವು.

ನೀನು ಶ್ರೀರಾಮನನ್ನು ತಂದೆಗೆ ಸರಿಯಾಗಿ ಕಾಣುವ ಪಕ್ಷದಲ್ಲಿ ಆತನ ಮಾತನ್ನು ಕೇಳಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಶ್ರೀರಾಮನು ತಂದೆಯ ಆಜ್ಞೆಯನ್ನು ಮೀರದೆ ಆತನ ಋಣವನ್ನು ತೀರಿಸಬೇಕೆಂದು ಬಯಸುತ್ತಿದ್ದಾನೆ, ದಶರಥರಾಯನು ತನ್ನ ಪತ್ನಿಯಾದ ಕೈಕೇಯಾದೇವಿಗೆ ಕೊಟ್ಟ ಮಾತಿಗೆ ತಪ್ಪದೆ ಆಕೆಯ ಋಣವನ್ನು ತೀರಿಸಿ ಸ್ವರ್ಗಸ್ಥನಾದನಲ್ಲವೆ ತನ್ನ ಪ್ರತಿಜ್ಞೆಯನ್ನು ಶ್ರೀರಾಮನು ಕೆಡಿಸಬಹುದೆ ಎಂದು ನುಡಿದು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಮುಂದುವರಿಯುವುದು...

# ಶೀತ ಕೆಮ್ಮು ಗಂಟಲು ಕೆರೆತೆ ಸಮಸ್ಯೆಗೆ ಮನೆಮದ್ದುಗಳು

ವಾತಾವರಣದಲ್ಲಿ ಬದಲಾವಣೆಯಿಂದ ಇದ್ದಕ್ಕಿದ್ದಂತೆ ಆರೋಗ್ಯದಲ್ಲಿ ಏರುಪೇರಾಗುವುದು ಸಾಮಾನ್ಯ ಇಂತಹ ಸಮಯದಲ್ಲಿ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ, ಟಾನಿಕ್ ಅಥವಾ ಮಾತ್ರೆ ನುಂಗುವ ಬದಲು, ಮನೆಯಲ್ಲೇ ಮಾಡಿದ ಕೆಲವೊಂದು ಮನೆಮದ್ದುಗಳನ್ನು ಟ್ರೈ ಮಾಡಿದರೆ ಬಹಳ ಒಳ್ಳೆಯದು ವಾತಾವರಣದಲ್ಲಿ ಸ್ವಲ್ಪ ಏರುಪೇರಾದರೂ ಸಾಕು, ಅದರ ನೇರ ಪ್ರಭಾವ ನಮ್ಮ ಆರೋಗ್ಯದ ಮೇಲೆ ಬೀರುತ್ತದೆ ಮಳೆಗಾಲದಲ್ಲಿ ವಾತಾವರಣ ಹೇಗಿದೆಎಂದರೆ, ಬೆಳಗಿನ ಸಮಯದಲ್ಲಿ ಎಳೆಬಿಸಿಲು, ಅದೇ ಸಂಜೆ ಆಗುತ್ತಾ ಬರುತ್ತಿದ್ದಂತೆ, ಮೋಡ ಕವಿದ ವಾತಾವರಣ ಉಂಟಾಗಿ ಧೋ ಎಂದು ಮಳೆ ಬೀಳಲು ಶುರುವಾಗುತ್ತದೆ ಹೀಗಾಗಿ ಆರೋಗ್ಯ ತಜ್ಞರು ಹೇಳುವ ಪ್ರಕಾರ, ಸಮಯದಲ್ಲಿ ಆರೋಗ್ಯದ ಕಡೆ ಗಮನ ಕೊಡುವುದು ಬಹಳ ಮುಖ್ಯ. ಪ್ರಮುಖವಾಗಿ ಹವಾಮಾನದಲ್ಲಿ ಬದಲಾವಣೆ ಆಗುತ್ತಿರುವ ಹಾಗೆ, ಶೀತ, ಗಂಟಲು ನೋವು ಮತ್ತು ಕೆಮ್ಮು ಸಾಮಾನ್ಯ. ಅಂತಹ ಪರಿಸ್ಥಿತಿಯಲ್ಲಿ,ಪದೇ ಪದೇ ಔಷಧಿಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ ಎನ್ನುತ್ತಾರೆ ತಜ್ಞರು. ದಕ್ಕಾಗಿ ಮನೆಯ ಅಡುಗೆಮನೆಯಲ್ಲೇ ಸಿಗುವ ಕೆಲವೊಂದು ಬಗೆಯ ನೈಸರ್ಗಿಕ ಮಸಾಲೆ ಪದಾರ್ಥಗಳ ಮನೆಮದ್ದುಗಳನ್ನು ಅನುಸರಿಸಿಕೊಂಡು ಬರುವುದರಿಂದ, ಶೀತ ಮತ್ತು ಕೆಮ್ಮಿನ ಲಕ್ಷಣಗಳನ್ನು ಕಡಿಮೆ ಮಾಡುವುದರ ಜೊತೆಗೆ ದೇಹದ ರೋಗನಿರೋಧಕ ಶಕ್ತಿಯನ್ನು ಬಲಪಡಿಸಿಕೊಳ್ಳಬಹುದು.

**ಲವಂಗ:** ಲವಂಗವು ನೋವು ನಿವಾರಕ, ನಂಜುನಿರೋಧಕ ಗುಣವನ್ನು ಹೊಂದಿದ್ದು, ಇದು ಯುಜೆನಾಲ್ ಎಂಬ ಗಂಟಲು ನೋವು, ಒಣ ಕೆಮ್ಮು ಮತ್ತು ದಟ್ಟಣೆಗೆ ಪ್ರಯೋಜನಕಾರಿಯಾಗಿದೆ. ಇದು ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡಲು ಸಹ ಸಹಾಯಕವಾಗಿದೆ ಇದರಿಂದ ನಿಮ್ಮ ದೇಹದ ರೋಗನಿರೋಧಕ ಶಕ್ತಿ ಸೋಂಕಿನ ವಿರುದ್ಧ ಹೋರಾಡಬಹುದು.

**ಕೆಮ್ಮಿನಿಂದ ಪರಿಹಾರ ಪಡೆಯಲು, 6–7 ಲವಂಗ ಹೂವುಗಳನ್ನು ಮೇಲಿನ ಭಾಗ ತೆಗೆದುಕೊಂಡು ಅವುಗಳನ್ನು ಬಾಣಲೆಯಲ್ಲಿ ಹುರಿದು ಮಲಗುವ ಮುನ್ನ ಸೇವಿಸಿ. ಅರಿಶಿನವನ್ನು ಹುರಿದು ಎರಡು ಗುಟುಕು ಹಾಲಿನೊಂದಿಗೆ ಸೇವಿಸುವುದರಿಂದ ಕೆಮ್ಮಿನಿಂದ ಪರಿಹಾರ ಸಿಗುತ್ತದೆ. ಒಣ ಕೆಮ್ಮು ಇದ್ದರೆ, ಕರಿಮೆಣಸಿನ ಪುಡಿಯನ್ನು ಜೇನುತುಪ್ಪದೊಂದಿಗೆ ತೆಗೆದುಕೊಳ್ಳಬೇಕು. ಶುಂಠಿ ರಸ, ಜೇನುತುಪ್ಪವು ಕೆಮ್ಮಿನಿಂದ ಪರಿಹಾರ ನೀಡುತ್ತದೆ.**

**ದೇಹದಲ್ಲಿ ಬಿಳಿ ರಕ್ತ ಕಣಗಳನ್ನು ಹೆಚ್ಚಿಸಲು ಸಹಾಯ**

ಇನ್ನೂ ಮುಖ್ಯವಾಗಿ ಲವಂಗದಲ್ಲಿ ವಿಟಮಿನ್ ಸಿ ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದ್ದು, ದೇಹದಲ್ಲಿ ಬಿಳಿ ರಕ್ತ ಕಣಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದರಿಂದ ಅನೇಕ ರೋಗಗಳ ವಿರುದ್ಧ ಹೋರಾಡಲು ಸುಲಭಗೊಳಿಸುತ್ತದೆ. ಬದಲಾಗುತ್ತಿರುವ ಋತುಗಳಲ್ಲಿ ಲವಂಗವನ್ನು ಹಾಗೆಯೇ ಜಗಿಯುತ್ತಾ ಬರುವುದರಿಂದ ಶೀತ ಕೆಮ್ಮು ಮತ್ತು ಜ್ವರದ ಸಮಸ್ಯೆಗಳು ನಮ್ಮಿಂದ ಕ್ರಮೇಣವಾಗಿ ದೂರವಾಗುತ್ತವೆ.

**ಶುಂಠಿ:** ಶೀತವನ್ನು ಗುಣಪಡಿಸಲು ಶುಂಠಿಯು ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಶುಂಠಿಯಲ್ಲಿ ಉರಿಯೂತ ನಿವಾರಕ ಮತ್ತು ಉತ್ಕರ್ಷಣ ನಿರೋಧಕ ಗುಣಗಳು ಕಂಡುಬರುತ್ತವೆ. ಗಂಟಲು ನೋವು, ಕಫ, ಕೆಮ್ಮು ಗುಣಪಡಿಸಲು ಶುಂಠಿಯು ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಕುದಿಯುವ ನೀರಿಗೆ ಶುಂಠಿಯ ಚೂರುಗಳನ್ನು ಹಾಕಿ, ಅದರ ಹಬೆಯನ್ನು ತೆಗೆದುಕೊಂಡರೆ, ಬಿಸಿಬಿಸಿ ಶುಂಠಿ ಚಹಾ ಕುಡಿಯುತ್ತಾ ಬರುವುದರಿಂದ ಶೀತ ಕೆಮ್ಮು, ಗಂಟಲಿನ ಉರಿಯೂತದ ಸಮಸ್ಯೆ ಕ್ರಮೇಣವಾಗಿ ಕಡಿಮೆ ಆಗುತ್ತಾ ಬರುತ್ತದೆ

**ಅರಿಶಿನ:** ಶತಮಾನಗಳಿಂದ, ಆಯುರ್ವೇದದಲ್ಲಿ ಶೀತ ಮತ್ತು ಸಣ್ಣಪುಟ್ಟ ಗಾಯ ಗಳಿಗೆ ಚಿಕಿತ್ಸೆ ನೀಡಲು ಅರಿಶಿನವನ್ನು ಬಳಸಲಾಗುತ್ತಿದೆ. ಅರಿಶಿನ ದಲ್ಲಿ ಕಂಡುಬರುವ ಪ್ರಮುಖ ಸಂಯುಕ್ತವೆಂದರೆ ಕರ್ಕ್ಯುಮಿನ್, ಇದು ಪ್ರಬಲ ವಾದ ಉರಿಯೂತದ, ಆಂಟಿವೈರಲ್ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದೆ. ಕರ್ಕ್ಯುಮಿನ್ ಕಾರಣದಿಂದಾಗಿ, ಇದು ಗಂಟಲು ನೋವನ್ನು ಕಡಿಮೆ ಮಾಡುತ್ತದೆ, ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ ಮತ್ತು ಲೋಳೆಯ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಹೀಗಾಗಿ ರಾತ್ರಿ ಮಲಗುವ ಮುನ್ನ ಉಗುರು ಬೆಚ್ಚಗಿನ ಅರಿಶಿನದ ಹಾಲು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ.

**ಬೆಚ್ಚಗಿನ ಉಪ್ಪು ನೀರಿನಿಂದ ಬಾಯಿ ಮುಕ್ಕಳಿಸುವುದು:** ಹವಾಮಾನ ಬದಲಾವಣೆಯಿಂದಾಗಿ ಗಂಟಲು ನೋವು ಕಾಣಿಸಿಕೊಂಡರೆ, ಅದರಿಂದ ಪರಿಹಾರ ಪಡೆಯಲು ಉತ್ತಮ ಮಾರ್ಗವೆಂದರೆ ಬೆಚ್ಚಗಿನ ಉಪ್ಪು ನೀರಿನಿಂದ ಬಾಯಿ ಮುಕ್ಕಳಿಸುವುದು. ಸೂಪ್, ಬೆಚ್ಚಗಿನ ಬೇಳೆ ಮುಂತಾದ ದ್ರವ ಪದಾರ್ಥಗಳನ್ನು ಕುಡಿಯಿರಿ. ಲೈಕೋರೈಸ್ ಅನ್ನು ನಿಮ್ಮ ಹಲ್ಲುಗಳಿಂದ ಪುಡಿಮಾಡಿ ಕಬ್ಬಿನಂತೆ ಅಗಿಯಿರಿ. ಶುಂಠಿ, ತುಳಸಿ ಮತ್ತು ನಿಂಬೆಯಿಂದ ಮಾಡಿದ ಬೆಚ್ಚಗಿನ ಚಹಾವು ಗಂಟಲು ನೋವು, ಕೆಮ್ಮು, ಶೀತದಿಂದ ಪರಿಹಾರವನ್ನು ನೀಡುತ್ತದೆ.

**ದಾಲ್ಚಿನ್ನಿ:** ಒಂದು ಶಿಲೀಂಧ್ರ ವಿರೋಧಿ ಸೂಕ್ಷ್ಮಜೀವಿ ವಿರೋಧಿ. ದಾಲ್ಚಿನ್ನಿ ನಿಮ್ಮ ಗಂಟಲು ನೋವು ಮತ್ತು ಉರಿಯೂತವನ್ನು ನಿವಾರಿಸಲು ಸಹಾಯ ಮಾಡುತ್ತದೆ, ಇದು ಬೆಚ್ಚಗಾಗುವ ಪರಿಣಾಮವನ್ನು ಸಹ ಹೊಂದಿದೆ, ಆದ್ದರಿಂದ ಇದು ಶೀತ ಮತ್ತು ಕೆಮ್ಮಿನ ಪರಿಹಾರವನ್ನು ನೀಡುತ್ತದೆ.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ವೈಯಕ್ತಿಕ ಜೀವನದ ಜೊತೆಗೆ ಕೆಲವು ಧರ್ಮಾರ್ಥ ಕಾರ್ಯಗಳಲ್ಲೂ ನಿಮ್ಮನ್ನು ತೊಡಗಿಸಿಕೊಳ್ಳಿ. ಇದು ವೈಯಕ್ತಿಕ ಜೀವನವನ್ನು ಘಾಸಿಗೊಳಿಸದೇ ನಿಮಗೆ ಮಾನಸಿಕ ಶಾಂತಿ ನೀಡುತ್ತದೆ.

**ವೃಷಭ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ. ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಮಿಥುನ** ನೀವು ಚೈತನ್ಯದಿಂದ ತುಂಬಿರುತ್ತೀರಿ, ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ನೀವು ಉಳಿಸಿರುವ ಹಣ ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ.

**ಕರ್ಕಾಟಕ** ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಸಿಂಹ** ಅನಗತ್ಯ ಆಲೋಚನೆಗಳು ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ.

**ಕನ್ಯಾ** ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ.

**ತುಲಾ** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ.

**ವೃಶ್ಚಿಕ** ಮಕ್ಕಳ ಜೊತೆಗಿನ ನಿಮ್ಮ ಕಠಿಣ ವರ್ತನೆ ನಿಮಗೆ ಸಿಟ್ಟು ಬರಿಸಬಹುದು. ಇದು ನಿಮ್ಮ ನಡುವೆ ಕೇವಲ ಒಂದು ತಡೆಗೋಡೆಯನ್ನು ಮಾತ್ರ ಸೃಷ್ಟಿಸುವುದರಿಂದ ನೀವು ನಿಮ್ಮ ಮೇಲೆ ನಿಯಂತ್ರಣ ಹೊಂದಿರಬೇಕು.

**ಧನಸ್ಸು** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

**ಮಕರ** ನೀವು ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ, ನಿಮ್ಮನ್ನು ಅಸ್ತುಷ್ಟಗೊಳಿಸುವ ಬಹಳಷ್ಟು ಜನರಿರುತ್ತಾರೆ. ಯಾರೂ ನಿಮ್ಮ ಪ್ರೀತಿಯನ್ನು ಬೇರ್ಪಡಿಸಲಾಗದು.

**ಕುಂಭ** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟರಿ ಮತ್ತು ಅತಿಯಾಗಿ ತಿನ್ನಬೇಡಿ. ಬಹಳ ಪ್ರಯೋಜನಕಾರಿ ದಿನವಲ್ಲ, ನಿಮ್ಮ ಹಣದ ಪರಿಸ್ಥಿತಿಯನ್ನು ಪರಿಶೀಲಿಸಿ ಮತ್ತು ನಿಮ್ಮ ವೆಚ್ಚಗಳ ಮೇಲೆ ಮಿತಿ ಹೇರಿ.

**ಮೀನ** ನಿಮ್ಮ ಮಗುವಿನಂಥ, ಮುಗ್ಧ ವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರೀತಿಪಾತ್ರರೊಡನೆ ಸಹಿತಿಂಡಿ ಮತ್ತು ಮಿಠಾಯಿ ಹಂಚಿಕೊಳ್ಳುವ ಸಾಧ್ಯತೆಯಿದೆ.

### ಜಿ.ಪಂ ಸಭಾಂಗಣದಲ್ಲಿ ಏರ್ಪಡಿಸಿದ್ದ ಗ್ಯಾರಂಟಿ ಅನುಷ್ಠಾನ ಸಮಿತಿಯ ಸಮಾಲೋಚನ ಸಭೆ

# ಫಲಾನುಭವಿಗಳ ಸಮಸ್ಯೆ ಆಲಿಸಲು ಸೂಚನೆ

• ಉದಯವಾಹಿನಿ ವಿಜಯನಗರ

ಸರ್ಕಾರದ ಮಹತ್ವಕಾಂಕ್ಷಿ ಪಂಚಗ್ಯಾರಂಟಿ ಯೋಜನೆಗಳನ್ನು ಗ್ರಾಮೀಣ ಭಾಗದ ಜನರಿಗೆ, ಬಡವರ್ಗದ ಅರ್ಹ ಫಲಾನುಭವಿಗಳ ಸಮಸ್ಯೆಗಳನ್ನು ಆಲಿಸಿ, ಸಮರ್ಪಕವಾಗಿ ತಲುಪಿಸುವ ಕಾರ್ಯವನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿ ಮಾಡಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಮೆಹರೋಜ್ ಖಾನ್ ಹೇಳಿದರು.



☛ ಉದಯವಾಹಿನಿ ಚಿತ್ರ

**ಯುವನಿಧಿ ಫಲಾನುಭವಿಗಳಿಗೆ ಕೌಶಲ್ಯಾಧಾರಿತ ತರಬೇತಿ**

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಗ್ಯಾರಂಟಿ ಅನುಷ್ಟಾನ ಸಮಿತಿಯ ಸಮಾಲೋಚನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಈಗಾಗಲೇ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಮತ್ತು ಅಧಿಕಾರಿಗಳ ವರ್ಗ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿರುವುದರಿಂದಲೇ ಫಲಾನುಭವಿಗಳಿಗೆ ಯೋಜನೆಗಳ ಲಭ್ಯತೆ ಸಕಾರವಾಗಿದೆ. ಆದರೆ ಗ್ರಾಮೀಣ ಭಾಗದಲ್ಲಿ ಕೆಲವು ಸಣ್ಣಪುಟ್ಟ ಸಮಸ್ಯೆಗಳಿಂದ ಅರ್ಹ ಫಲಾನುಭವಿಗಳು ಯೋಜನೆಗಳನ್ನು ಪಡೆಯುವಲ್ಲಿ ವಂಚಿತರಾಗಿದ್ದರೇ ಅಂತಹ ಸಮಸ್ಯೆಗಳಿಗೆ ಶೀಘ್ರ ಪರಿಹಾರ ನೀಡಲು ಸಮಿತಿ ಸದಸ್ಯರು ಕಾರ್ಯೋನ್ಮುಖರಾಗಬೇಕಿದೆ.

ವಿಶೇಷವಾಗಿ ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಲ್ಲಿ 8007 ಜನ ಯುವಕರು ನೊಂದಾಯಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಮೊದಲ ಬಾರಿಗೆ ವಿಜಯನಗರ ಜಿಲ್ಲೆಯಿಂದಲೇ ಯುವನಿಧಿ ಫಲಾನುಭವಿಗಳಿಗೆ ಕೌಶಲ್ಯಾಧಾರಿತ ತರಬೇತಿ ಕಾರ್ಯಾಗಾರವನ್ನು ನೀಡಲು ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪೂರ್ವಸಿದ್ಧತೆಗಳನ್ನು ಕೈಗೊಳ್ಳಲಾಗುವುದು. ನಿರುದ್ಯೋಗಿ ಯುವಕರು, ಯುವನಿಧಿ ಪಲಾನುಭವಿಗಳಿಗೆ ಅಗತ್ಯವಿರುವ ಕೌಶಲ್ಯಾಧಾರಿತ ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸುವ ಮೂಲಕ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳುವ ಆತ್ಮಸ್ಥೆರ್ಯವನ್ನು ತುಂಬಬೇಕಿದೆ. ಬಹುತೇಕ ಖಾಸಗಿ ಕಂಪನಿಗಳಲ್ಲಿ ಉದ್ಯೋಗಿಗಳ ಅಗತ್ಯವಿದೆ. ಅಂತಹ ಕಂಪನಿಗಳಿಗೆ ಇಲ್ಲಿನ ಯುವಕರಿಗೆ ಉದ್ಯೋಗ ಕಲ್ಪಿಸುವ ಭರವಸೆಯನ್ನು ಮೂಡಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸಹಯೋಗದಲ್ಲಿ ವಿಶೇಷ ಕಾರ್ಯಾಗಾರವನ್ನು ನೀಡಲು ಸಿದ್ಧತೆಗೆ ಮುಂದಾಗಲಿದ್ದೇವೆ ಎಂದರು. ಸಮಿತಿ ಸದಸ್ಯ ಪರಶುರಾಮ ಮಾತನಾಡಿ, ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ಗ್ಯಾರಂಟಿ ಸಮಿತಿಯಿಂದ ಗ್ರಾಪಂ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಸಮಸ್ಯೆಗಳನ್ನು ಆಲಿಸುವ ಕಾರ್ಯವಾಗುತ್ತಿದೆ. ಶಕ್ತಿ ಯೋಜನೆಯ ಮೂಲಕ ಸಮಸ್ಯೆಗಳಿರುವ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಾಲಾ ವೇಳೆಗೆ ಬಸ್‌ಗಳ ಕೊರತೆಯನ್ನು ನೀಗಿಸಲಾಗಿದೆ. ಹಗರಿಬೊಮ್ಮನಹಳ್ಳಿ ಡಿಪೋದಲ್ಲಿ ಸುಮಾರು 27 ಚಾಲಕ ಕಂ ನಿರ್ವಾಹಕರ ಸಿಬ್ಬಂದಿ ಕೊರತೆಯಿದೆ. 15 ಬಸ್‌ಗಳ ಅಗತ್ಯವಿದೆ ಎಂದು ತಿಳಿದುಬಂದಿದೆ. ವಿಭಾಗೀಯ ನಿಯಂತ್ರಣಾಧಿಕಾರಿಗಳು ವಿವಿಧ ಡಿಪೋಗಳಲ್ಲಿರುವ ಸಿಬ್ಬಂದಿ ಕೊರತೆ ನಿರ್ವಹಿಸಲು ಮುಂದಾಗಬೇಕು ಎಂದರು. ಇದಕ್ಕೆ ಧ್ವನಿಗೂಡಿಸಿದ ಸದಸ್ಯೆ ಭಾಗ್ಯಲಕ್ಷ್ಮ್ಮ ಭರಾಡ ಮಾತನಾಡಿ, ರಾಜ್ಯದಲ್ಲಿಯೇ ಎರಡನೇ ಅತಿ ಹೆಚ್ಚು ಪ್ರವಾಸಿಗರು ಆಗಮಿಸುವ ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ನಿಲ್ದಾಣದಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ, ಶೌಚಾಲಯಗಳ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ದೂರಿದರು.

ಮಧ್ಯಪ್ರವೇಶಿಸಿದ ವಿಭಾಗೀಯ ಸಂಚಾರ ಅಧಿಕಾರಿ ರಾಜಶೇಖರ್.ಬಿ.ವಾಜಂತ್ರಿ ಪ್ರತಿಕ್ರಿಯಿಸಿ ಬಸ್ ನಿಲ್ದಾಣದಲ್ಲಿನ ದೋಷಗಳನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

**ಗೃಹಲಕ್ಷ್ಮಿ ಯೋಜನೆಯಲ್ಲಿ ಮರಣ ಹೊಂದಿದ ಫಲಾನುಭವಿಗಳ ಖಾತೆಯಲ್ಲಿರುವ ಹಣವನ್ನು ನಾಮಿನಿಗಳಿಗೆ ನೀಡಲು ಬ್ಯಾಂಕ್‌ಗಳಿಂದ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಜಿಪಂ ಸಿಇಒರವರು ಬ್ಯಾಂಕ್‌ಗಳಿಗೆ ನಿಯಮಾನುಸಾರ ಸೂಕ್ತ ನಿರ್ದೇಶನ ನೀಡಬೇಕು -ಗಿರೀಶ್ ಸದಸ್ಯ**

#### ಆರೋಗ್ಯ ಸೇವೆಗಳಿಗೆ ಆದ್ಯತೆ

**ಜಿಪಂ ಸಿಇಒ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಶಾ ಮಾತನಾಡಿ, ಬ್ಯಾಂಕಿನ ಸಮಸ್ಯೆಗಳಿಗೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಗೆ ಸೂಚನೆ ನೀಡಲಾಗುವುದು. ಅಹಾರ ಇಲಾಖೆಯಲ್ಲಿ ಹೊಸ ಪಡಿತರ ಅರ್ಜಿಗೆ ಅವಕಾಶ ನೀಡಿಲ್ಲ. ಈಗಾಗಲೇ ಶೇ.90 ರಷ್ಟು ಪಡಿತರ ನೊಂದಣಿ ಕಾರ್ಯವಾಗಿದೆ. ಹಾಗೂ ಅನಾರೋಗ್ಯ ಪೀಡಿತರಿಗೆ ಆರೋಗ್ಯ ಸೇವೆಗಳಿಗೆ ಆದ್ಯತೆ ನೀಡಿ ರೇಷನ್ ಕಾರ್ಡ್‌ಗಳಲ್ಲಿ ಸೇರಿಸುವ ಪ್ರಕ್ರಿಯೆ ನಿರಂತರವಾಗಿ ಅವಕಾಶ ನೀಡಲಾಗಿದೆ. ಸಮಿತಿ ಸದಸ್ಯರು ಅಂತಹ ಪ್ರಕರಣಗಳಿದ್ದಲ್ಲಿ ಮಾಹಿತಿ ನೀಡುವಂತೆ ಸೂಚಿಸಿದರು.**

## ರಸ್ತೆ ದುರಸ್ತಿಗೆ ಕಡೆಗಣನೆ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಕಮಲಾಪುರ

ತಾಲ್ಲೂಕಿನ ಮಹಾಗಾಂವ ಕ್ರಾಸ್‌ನಿಂದ ಚಿಂಚೋಳಿ ತಾಲ್ಲೂಕಿಗೆ ಹೋಗುವ ರಾಜ್ಯ ಹೆದ್ದಾರಿ ರಸ್ತೆಯ ಮಧ್ಯದ ನಮ್ಮ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಾಗೂರು ಗ್ರಾಮದಿಂದ ತಡಕಲ್ ಕ್ರಾಸ್‌ವರೆಗೆ ಸುಮಾರು ಮೂರು ಕಿಲೋಮೀಟರ್ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿದೆ. ಈ ರಸ್ತೆಯು ಸುಮಾರು ಎರಡ್ಮೂರು ವರ್ಷಗಳಿಂದ ಹದಗೆಟ್ಟಿದ್ದರೂ ದುರಸ್ಥಿ ಮಾಡಿಸುವವರು ಯಾರೂ ಇಲ್ಲ ಎಂದು ಕನಸು ಸೇವಾ ಸಂಸ್ಥೆಯ ಅಧ್ಯಕ್ಷರಾದ ಸಂತೋಷಕುಮಾರ ಎಸ್.ಪಿ ಅವರು ಕಿಡಿ ಕಾರಿದರು. ಸಾರ್ವಜನಿಕರು, ವಿದ್ಯಾರ್ಥಿಗಳು, ರೈತರು ಅನೇಕ ಬಾರಿ ಹೋರಾಟದ ಮುಖಾಂತರ ಮತ್ತು ಮಾಧ್ಯಮದ ಮುಖಾಂತರ ಮನವಿ ನೀಡಿದರು ಕೂಡ ಗ್ರಾಮೀಣ ಮತಕ್ಷೇತ್ರದ ಶಾಸಕರಾದ ಮತ್ತಿಮಡು ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ರಸ್ತೆ ಸಮಸ್ಯೆಗೆ ಪರಿಹಾರ ಸಿಗದಂತಾಗಿದೆ. ಆದ್ದರಿಂದ ಸಂಬಂಧಪಟ್ಟ ಶಾಸಕರು, ಜನಪ್ರತಿನಿಧಿಗಳು, ಅಧಿಕಾರಿಗಳು ಕೂಡಲೇ ಈ ಕಡೆ ಗಮನಹರಿಸಿ ರಸ್ತೆ ದುರಸ್ಥಿ ಮಾಡಿಸಬೇಕು. ಇಲ್ಲ ಅಂದ್ರೆ ಮುಂದಿನ ದಿನಮಾನಗಳಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಹೇಳಿದರು.

## ಅಂಗನವಾಡಿ ಕೇಂದ್ರಕ್ಕೆ ಇಒ ಭೇಟಿ

• ಉದಯವಾಹಿನಿ ಸಿಂಧನೂರು

ತಾಲ್ಲೂಕಿನ ಮಾಡಿಸಿರಿವಾರ ಹಾಗೂ ಬಾದರ್ಲಿ ಪಂಚಾಯಿತಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಉದ್ಬಾಳ್ ಗ್ರಾಮದಲ್ಲಿ ಹೈಟೆಕ್ ಶೌಚಾಲಯ ಪೂರ್ಣಗೊಂಡ ಕಾಮಗಾರಿಯನ್ನು ವೀಕ್ಷಣೆ ಮಾಡಿದರು ಹಾಗೂ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಹಾಜರಾತಿ ದಾಖಲೆಯನ್ನು ಪರಿಶೀಲಿಸಿ ಹಾಜರಾತಿ ಮಕ್ಕಳ ಸಂಖ್ಯೆ ಹೆಚ್ಚಿಗೆ ಕಂಡ ಬಂದಿದ್ದು .ಮಕ್ಕಳ ಸಂಖ್ಯೆ ಕಡಿಮೆ ಇದ್ದು ಮಕ್ಕಳಿಗೆ ಕೊಡಬೇಕಾದ ಪೌಷ್ಟಿಕ ಆಹಾರ ಪರಿಶೀಲನೆ ಮಾಡಿದರು. ಮಕ್ಕಳಿಗೆ ಕೊಡಬೇಕಾದ ಕುದಿಸಿದ ಹಾಲನ್ನು ಪರಿಶೀಲಿಸಿ ತಾವೇ ಸೇವನೆ ಮಾಡಿ ರುಚಿ ಸವಿದರು. ಮಾಡಿಸಿರುವಾರ ಗ್ರಾಮಕ್ಕೆ ಹೈಟೆಕ್ ಶೌಚಾಲಯ ಅನ್ನು ಪರಿಶೀಲನೆ ಮಾಡಿರಿ ಬಾದರ್ಲಿ ಪಂಚಾಯಿತಿಗೆ ಭೇಟಿ ನೀಡಿ ಕಾಮಗಾರಿ ಕಡಿತಗಳನ್ನು ಪರಿಶೀಲನೆ ಮಾಡಿದರು. ಈ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಸವರಾಜ್ ಸೂಡಿ ತಾಂತ್ರಿಕ ಸಂಯೋಜಕರು ಮಹೆಬೂಬ್ ಪಂಚಾಯಿಸಿ ಸಿಬ್ಬಂದಿ ವರ್ಗದವರು ಹಾಜರಿದ್ದರು.



☛ ಉದಯವಾಹಿನಿ ಚಿತ್ರ

## ಬಸ್ ನಿಲ್ದಾಣದ ಸುತ್ತಮುತ್ತ 1 ಕಿ.ಮೀ ನಿಷೇಧಾಜ್ಞೆ ಜಾರಿ

• ಉದಯವಾಹಿನಿ ಬಾಗಲಕೋಟೆ

ರಾಜ್ಯಾದ್ಯಂತ ಆಗಸ್ಟ 5 ರಿಂದ ಸಾರಿಗೆ ಬಸ್ ನೌಕರರ ಅನಿರ್ಧಿಷ್ಟಾವಧಿ ಮುಷ್ಕರ ಹಿನ್ನಲೆಯಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ನಾಗರಿಕ ಸುರಕ್ಷತೆ ಹಾಗೂ ಸಾರ್ವಜನಿಕ ಆಸ್ತಿ ಪಾಸ್ತಿಗಳ ಸುರಕ್ಷತೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಠಿಯಿಂದ ಜಿಲ್ಲೆಯಲ್ಲಿ ಇರುವ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳು ಹಾಗೂ ಎಲ್ಲಾ ಬಸ್ ಡಿಪೋಗಳ ಸುತ್ತಮುತ್ತ ಸುಮಾರು 1 ಕಿ.ಮೀ ವರೆಗೆ ಯಾವುದೇ ಪ್ರತಿಭಟನೆ, ಮುಷ್ಕರ ಹಾಗೂ ಗುಂಪು ಸೇರುವಿಕೆಯನ್ನು ನಿಷೇಧಿಸಿ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ-2023ರ ಕಲಂ 163 ಅನ್ವಯ ಆಗಸ್ಟ 4ರ ರಾತ್ರಿ 8 ಗಂಟೆಯಿಂದ ಆಗಸ್ಟ 10ರ ರಾತ್ರಿ 10 ಗಂಟೆವರೆಗೆ ನಿಷೇದಾಜ್ಞೆ ಜಾರಿಯಲ್ಲಿರುತ್ತದೆ. ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವದರ ಜೊತೆಗೆ ಜಿಲ್ಲೆಯಾದ್ಯಂತ ಇರುವ ಎಲ್ಲಾ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳು ಹಾಗೂ ಎಲ್ಲಾ ಬಸ್ ಡಿಪೋಗಳ ಸುತ್ತಮುತ್ತ ಸೂಕ್ತ ಪೊಲೀಸ್ ಭದ್ರತೆ ಒದಗಿಸಲು ಪೊಲೀಸ್ ಅಧೀಕ್ಷಕರಿಗೆ ಕ್ರಮಕೈಗೊಳ್ಳಲು ಆದೇಶದಲ್ಲಿ ತಿಳಿಸಲಾಗಿದೆ.



☛ ಉದಯವಾಹಿನಿ ಚಿತ್ರ

ಈ ಕುರಿತು ಜರುಗಿದ ಪೂರ್ವಭಾವಿ ಸಭೆಯಲ್ಲಿ ಒಂದು ವೇಳೆ ಮುಷ್ಕರದಿಂದ ವಾಪಸ್ಸು ಬರುವ ನೌಕರರಿಗೆ ಸೂಕ್ತ ಪೊಲೀಸ್ ಭದ್ರತೆಯೊಂದು ಬಸ್ ಸಂಚಾರಕ್ಕೆ ಕ್ರಮವಹಿಸಲಾಗುತ್ತದೆ. ಅಂತಹ ಪ್ರತಿ ಬಸ್‌ಗಳಿಗೆ ಪೊಲೀಸ್ ಸಿಬ್ಬಂದಿ ನೇಮಕ ಮಾಡುವದರ ಜೊತೆಗೆ ವಾಕಿಟಾಕಿ ವ್ಯವಸ್ಥೆ ಕೂಡ ಕಲ್ಪಿಸಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹಾಂತೇಶ್ವರ ಜಿದ್ದಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಚ್.ಸಿ.ಮಿರ್ಜಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ಆರ್.ಎಲ್.ಹೊಸಮನಿ, ಕೆ.ಎಸ್.ಆರ್‌ಟಿಸಿ ಡಿಟಿಓ ಲಮಾಣಿ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್. ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಶಾಲಾ-ಕಾಲೇಜುಗಳಿಗೆ ತೆರಳುವ ಮಕ್ಕಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಹಾಗೂ ಖಾಸಗಿ ಶಾಲಾ ವಾಹನಗಳು ಹೋಗುವ ಮಾರ್ಗದಲ್ಲಿ ಇತರೆ ಶಾಲೆಯ ಮಕ್ಕಳ ಇದ್ದಲ್ಲಿ ಅವರನ್ನು ಕರೆದುಕೊಂಡು ಹೋಗುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಆಯಾ ಖಾಸಗಿ ಶಾಲಾ ಕಾಲೇಜುಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಜಿ.ಪಂ ಸಿಇಓ ಶಶಿಧರ ಕುರೇರ್ ತಿಳಿಸಿದರು.**

## ಹುಬ್ಬಳ್ಳಿಗೆ ತಟ್ಟಿದ ಬಸ್ ಬಂದ್ ಬಿಸಿ ಪ್ರಯಾಣಿಕರ ಗೋಳಾಟ

• ಉದಯವಾಹಿನಿ ಹುಬ್ಬಳ್ಳಿ

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸಾರಿಗೆ ಸಂಸ್ಥೆ ಸಿಬ್ಬಂದಿ ನಡೆಸುತ್ತಿರುವ ಬಂದ್ ಬಿಸಿ ಹುಬ್ಬಳ್ಳಿಗೂ ತಟ್ಟಿದೆ. ಬಂದ್ ಹಿನ್ನೆಲೆಯಲ್ಲಿ ಡಿಪೋದಿಂದ ಬಸ್ ಗಳು ಹೊರಗಡೆ ಬಂದಿಲ್ಲ. ಹೀಗಾಗಿ ನಗರದ ಹೊಸ ಬಸ್ ನಿಲ್ದಾಣ, ಹೊಸೂರು ಬಸ್ ನಿಲ್ದಾಣ ಹಾಗೂ ಸಿಬಿಟಿ ಸೇರಿದಂತೆ ಇತರೆಡೆಗಳಲ್ಲಿ ಪ್ರಯಾಣಿಕರು ತೀವ್ರ ಪರದಾಡಬೇಕಾಯಿತು.

ಹೊರ ರಾಜ್ಯಗಳಿಗೆ ತೆರಳುವ ಬಸ್‌ಗಳು ಮಾತ್ರ ಅಲ್ಲೊಂದು ಇಲ್ಲೊಂದರಂತೆ ಓಡಾಟ ನಡೆಸಿದ್ದು, ಸ್ಥಳೀಯ ಬಸ್‌ಗಳ ಸಂಚಾರ ಗ್ರಾಮೀಣ, ನಗರ ಸಾರಿಗೆ ಬಸ್ ಸಂಚಾರ ಎಲ್ಲೂ ಸಂಪಕವಾಗಿ ಕಂಡು ಬರಲಿಲ್ಲ. ಹುಬ್ಬಳ್ಳಿ-ಧಾರವಾಡ ಅವಳಿ ನಗರ ಮಧ್ಯೆ ಸಂಚರಿಸುವ ಚಿಗರಿ ಬಸ್‌ಗಳ ಸಂಚಾರ ಸಹ ಎಲ್ಲೂ ಇರಲಿಲ್ಲ. ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ಗಂಟೆಗಟ್ಟಲೆ ಕಾದು ಕುಳಿತಿರುವ ದೃಶ್ಯ ಸಾಮಾನ್ಯವಾಗಿತ್ತು.

## ಮುಗಿಯದ ಸಾರಿಗೆ ನೌಕರರ ಮುಷ್ಕರ: ಕರ್ತವ್ಯಕ್ಕೆ ನೌಕರರು ಗೈರು

• ಉದಯವಾಹಿನಿ ಸಿಂಧನೂರು

ಸಾರಿಗೆ ನೌಕರರ ಸಂಘದ ರಾಜ್ಯ ಸಮಿತಿ ಆದೇಶ ಮೇರೆಗೆ ನಗರದಲ್ಲಿ ಸಾರಿಗೆ ನೌಕರರು ಕರ್ತವ್ಯಕ್ಕೆ ಹಾಜರಾಗದೆ ಗೈರಾಗಿರವುದು ತಾಲ್ಲೂಕು ಘಟಕ ಕಂಡು ಬಂತು. ಈಗಾಗಲೇ ಸಾರಿಗೆ ಮುಷ್ಕರ ದೂರದ ಊರುಗಳಿಂದ ಆಗಮಿಸಿರುವ ಪ್ರಾಮಾಣಿಕರಿಗೆ ಬಸ್ ವ್ಯವಸ್ಥೆ ಇಲ್ಲದೆ ಪರದಾಡಿದರು.

ನಗರದ ಬಸ್ ನಿಲ್ದಾಣದಲ್ಲಿ 96 ಬಸ್‌ಗಳು 92 ರೋಟಗಳವೆ 55 ಬಸ್‌ಗಳಲ್ಲಿ ಮುಂಜಾನೆ 30 ಬಸ್‌ಗಳ ಬೇರೆ ಬೇರೆ ರೋಟಗಳಿಗೆ ಹೋಗಿದ್ದೇವೆ. ಇನ್ನೂ ಉಳಿದ ಬಸ್‌ಗಳು ಡಿಪೋದಲ್ಲಿ ಉಳಿದಿರುವುದು. 30 ಕಂಡಕ್ಟರ್ ಹಾಗೂ ಡ್ರೈವರ್‌ಗಳು ಸೇರಿದಂತೆ ಸುಮಾರು 63 ಜನರು ಸಾರಿಗೆ ನೌಕರರಿಗೆ ಕರ್ತವ್ಯಕ್ಕೆ ಹಾಜರಾಗಿದ್ದರು. ಎಂದು ಡಿಪೋ ಮ್ಯಾನೇಜರ್ ಹೊನ್ನಪ್ಪ ಅವರು ಪತ್ರಕರ್ತರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದರು



☛ ಉದಯವಾಹಿನಿ ಚಿತ್ರ

ನಮ್ಮ ಘಟಕದ ಮೇಲುಸ್ತುವಾರಿ ಈಗಾಗಲೇ ಎಷ್ಟು ಬಸ್ ಹಾಗೂ ಸಂಚಾರ ಮಾಡಿದ್ದೇವೆ ಇನ್ನೂ ನಿಂತಿರುವ ಬಸ್‌ಗಳು ಹಾಗೂ ಬಸ್ ಕಂಡಕ್ಟರ್ ಡ್ರೈವರ್ ಗೈರು ಆಗಿರುವುದು ಮತ್ತು ಎಲ್ಲರದ್ದೂ ಬಗ್ಗೆ ಜಿಲ್ಲಾಧಿಕಾರಿಗಳು ಮಾಹಿತಿ ನೀಡಲಾಗುತ್ತದೆ ಎಂದು ಹೇಳಿದರು. ಈಗಾಗಲೇ ಸಾರಿಗೆ ಮುಷ್ಕರದಿಂದ ಬೇಸತ್ತು ಪ್ರಾಮಾಣಿಕರಿಗೆ ಬಸ್ಗಳ ಇಲ್ಲದೆ ಬಸ್‌ನಿಲ್ದಾಣದಲ್ಲಿ ಬಂದು ಖಾಸಗಿ ವಾಹನಗಳ ಮೂಲಕ ಕರೆದುಕೊಂಡು ಹೋಗುತ್ತಿದ್ದರು. ಎಲ್ಲೆಂದರಲ್ಲಿ ಕಂಡು ಬಂತು. ಆದರೆ ಬಸ್‌ಗಳದೆ ತೊಂದರೆ ಆಗದಂತೆ ಪೊಲೀಸರು ವಾಹನಗಳು ಭದ್ರತೆ ವ್ಯವಸ್ಥೆ ಮಾಡಲಾಗಿತ್ತು.

ನಗರ ಠಾಣೆಯ ಪಿಐ ದುರುಗಪ್ಪ ಹಾಗೂ ಪಿಡಬ್ಲ್ಯೂಡಿ ಕ್ಯಾಂಪ್‌ನ ಸಂಚಾರ ಪೊಲೀಸ್ ಎಎಸ್ಐ ಅಶೋಕ್ ತಮ್ಮ ಸಿಬ್ಬಂದಿಯೊಂದಿಗೆ ಬಸ್ ನಿಲ್ದಾಣದಲ್ಲಿ ದೂರದ ಊರುಗಳಿಗೆ ಹೋಗುವ ಖಾಸಗಿ ವಾಹನಗಳ ವ್ಯವಸ್ಥೆ ಮಾಡಿ ಕಳಿಸಲಾಯಿತು.

## ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪೂರ್ವ ಭಾವಿ ಸಭೆ

• ಉದಯವಾಹಿನಿ ಹುಣಸಗಿ

ಆಗಸ್ಟ್ 15 ರಂದು ತಾಲ್ಲೂಕಿನ ಸರ್ಕಾರಿ ಕಚೇರಿಗಳಲ್ಲಿ ಮತ್ತು ಶಾಲಾ, ಕಾಲೇಜುಗಳಲ್ಲಿ ಸರಿಯಾದ ಸಮಯಕ್ಕೆ ಧ್ವಜಾರೋಹಣ ನೆರವೇರಿಸಬೇಕು ಎಂದು ತಹಶೀಲ್ದಾರರಾದ ಎಂ ಬಸವರಾಜ ಹೇಳಿದರು.

ಪಟ್ಟಣದ ತಹಶೀಲ್ ಕಾರ್ಯಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪೂರ್ವಭಾವಿ ಸಭೆ ಹಮ್ಮಿಕೊಂಡು ಮಾತನಾಡಿದ ಅವರು, ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ, ಪಟ್ಟಣದ ಮುಖಂಡರಿಗೆ, ಯುವಕರಿಗೆ, ಸಾರ್ವಜನಿಕರಿಗೆ, ಯಾವುದೇ ಸಮಸ್ಯೆಯಾಗದಂತೆ ಸರಿಯಾದ ವ್ಯವಸ್ಥೆ ಮಾಡಲಾಗುವುದು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಗುರುತಿಸಿ ಸನ್ಮಾನ ಮಾಡಿ ಗೌರವಿಸಲಾಗುವುದು ಎಂದು ಹೇಳಿದರು.



☛ ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ತಹಶೀಲ್ ಕಾರ್ಯಾಲಯದ ಸಿಬ್ಬಂದಿಗಳು, ವಿವಿಧ ಸಂಘಟನೆಯ ಕಾರ್ಯಕರ್ತರು, ಪಟ್ಟಣದ ಮುಖಂಡರು, ಸಾರ್ವಜನಿಕರು ಇತರರು ಇದ್ದರು.

## ಅನುದಾನ ನೀಡಲು ಮನವಿ

• ಉದಯವಾಹಿನಿ ನವಲಗುಂದ

ತಾಲ್ಲೂಕು ಕೃಷಿಕ ಸಮಾಜದ ಕಾರ್ಯಾಲಯದ ಕಟ್ಟಡ ನಿರ್ಮಾಣ ಮಾಡಲಿಕ್ಕೆ ರಾಜ್ಯ ಕೃಷಿಕ ಸಮಾಜದಿಂದ ಅನುದಾನ ನೀಡಬೇಕೆಂದು ಆಗ್ರಹಿಸಿ ತಾಲ್ಲೂಕು ಸಂಘದದಿಂದ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕಟ್ಟಡ ಸಮಿತಿ ರಾಜ್ಯ ಉಪಾಧ್ಯಕ್ಷರಾದ ಶಿವಣ್ಣ. ಮೂಲಿಮನಿ ಅವರಿಗೆ ಧಾರವಾಡದಲ್ಲಿ ಮನವಿ ಸಲ್ಲಿಸಿದರು

ನವಲಗುಂದ ಕೃಷಿ ಸಮಾಜಕ್ಕೆ ಪ್ರತ್ಯೇಕ ಕಟ್ಟಡದ ಅವಶ್ಯಕತೆ ಇದ್ದು ಕಟ್ಟಡ ನಿರ್ಮಿಸಲು ಕ್ರಮಕೈಗೊಳ್ಳಬೇಕು. ರಾಜ್ಯ ಸರಕಾರ ಆರೋಗ್ಯ ಮತ್ತು ಶಿಕ್ಷಣಕ್ಕೆ ಒತ್ತು ನೀಡುವಷ್ಟು ಕೃಷಿಗೂ ಹೆಚ್ಚು ಒತ್ತು ನೀಡಬೇಕು. ಕೃಷಿ ಸಿಬ್ಬಂದಿಯನ್ನು ನೇಮಿಸಬೇಕು ಎಂದು ಕೃಷಿಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

## ಸಾರಿಗೆ ನೌಕರರ ಅನಿರ್ದಿಷ್ಟ ಮುಷ್ಕರ: ಪ್ರಯಾಣಿಕರ ಪರದಾಟ

• ಉದಯವಾಹಿನಿ ವಿಜಯಪುರ

ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಸಾರಿಗೆ ನೌಕರರು ಇಂದಿನಿಂದ ಅನಿರ್ದಿಷ್ಟ ಮುಷ್ಕರ ಆರಂಭಿಸಿದ್ದರಿಂದ ರಾಜ್ಯದ ಎಲ್ಲೆಡೆಯಂತೆ ವಿಜಯಪುರ ಜಿಲ್ಲೆಯಲ್ಲಿ ಬಸ್ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು ಪ್ರಯಾಣಿಕರು ಪರದಾಡುವಂತಾಗಿದೆ.

ನಿನ್ನೆಯಷ್ಟೇ ಸಾರಿಗೆ ನೌಕರರ ಮುಖಂಡರ ಜೊತೆಗೆ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಸಭೆ ನಡೆಸಿದ್ದರು. ಈ ಸಭೆಯಲ್ಲಿ ಮಾತುಕತೆಗಳು ವಿಫಲವಾಗಿದ್ದರಿಂದ ಸಾರಿಗೆ ಮುಷ್ಕರ ಇಂದಿನಿಂದ ಆರಂಭಗೊಂಡಿದೆ. ಬೆಳಿಗ್ಗೆ 6 ಗಂಟೆಯಿಂದಲೇ ಸಾರಿಗೆ ಮುಷ್ಕರ ಆರಂಭವಾಗಿದ್ದರಿಂದ ವಿಜಯಪುರ ಜಿಲ್ಲೆಯ ಯಾವುದೇ ಬಸ್ ನಿಲ್ದಾಣದಲ್ಲಿ ಬಸ್ ಓಡಾಟ ಕಂಡು ಬರಲಿಲ್ಲ. ವಿಜಯಪುರ ನಗರದ ಮೂರು ಬಸ್ ಡಿಪೋಗಳಿಂದ ಬಸ್‌ಗಳು ಸಂಚಾರಕ್ಕೆ ಹೊರ ಬರಲಿಲ್ಲ. ಬಸ್ ಚಾಲಕರು ಹಾಗೂ ನಿರ್ವಾಹಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರಿಂದ ವಿಜಯಪುರ ಕೇಂದ್ರ ಬಸ್ ನಿಲ್ದಾಣ, ಸೆಟಲೆಟ್ ಬಸ್ ನಿಲ್ದಾಣ ಸೇರಿದಂತೆ ಜಿಲ್ಲೆಯ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಬಸ್ ಓಡಾಟ ಇಲ್ಲದೆ ಬಸ್ ನಿಲ್ದಾಣಗಳು ಬಿಕೋ ಎನ್ನುತ್ತಿರುವುದು ಕಂಡು ಬಂತು. ಮುಷ್ಕರದ ವಿಷಯ ತಿಳಿಯದೆ ಬಸ್ ನಿಲ್ದಾಣಕ್ಕೆ ಆಗಮಿಸಿದ್ದ ಪ್ರಯಾಣಿಕರು ಬಸ್ ಇಲ್ಲದೆ ಪರದಾಡಿದರು. ಅನಿವಾರ್ಯ ಕೆಲಸಗಳಿಗೆ ಆಗಮಿಸಿದ್ದ ಪ್ರಯಾಣಿಕರು ವಿಧಿ ಇಲ್ಲದೆ ಖಾಸಗಿ ಬಸ್ಸುಗಳ ಮೊರೆ ಹೋಗಬೇಕಾಯಿತು.

## ಕಾರ್ಮಿಕರ ಕಾರ್ಡ್ ನವೀಕರಣಕ್ಕೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ಶಿಗ್ಗಾವಿ

ಅನರ್ಹಗೊಳಿಸಿರುವ ಕಾರ್ಮಿಕರ ಕಾರ್ಡ್‌ಗಳನ್ನು ನವೀಕರಣ ಮಾಡುವಂತೆ ಆದೇಶ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಹಿತರಕ್ಷಣಾ ವೇದಿಕೆ ಪದಾಧಿಕಾರಿಗಳು ಸೋಮವಾರ ತಹಶೀಲ್ದಾರ್ ಯಲ್ಲಪ್ಪ ಗೋಣ್ಣೆನವರ ಅವರಿಗೆ ಮನವಿ ಸಲ್ಲಿಸಿದರು.

ಕಟ್ಟಡ ಕಾರ್ಮಿಕರ ಹಿತರಕ್ಷಣಾ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಫಕ್ಕೀರೇಶ ಶಿಗ್ಗಾವಿ ಮಾತನಾಡಿ, ಕಾರ್ಮಿಕರಲ್ಲ ಎಂದು ಹಲವು ಕಾರ್ಡ್‌ಗಳನ್ನು ರದ್ದುಪಡಿಸಲಾಗಿತ್ತು. ಆದರೆ ಈ ಕಾರ್ಡ್‌ಗಳ ಆಧಾರದ ಮೇಲೆ ಕಾರ್ಮಿಕರು 'ಕಾರ್ಮಿಕರ ಕಲ್ಯಾಣ ಮಂಡಳಿ' ವತಿಯಿಂದ ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಕಾರ್ಮಿಕರಲ್ಲದೆ ಇದ್ದಿದ್ದರೆ ಆರೋಗ್ಯ ತಪಾಸಣೆ ಹೇಗೆ ಸಾಧ್ಯವಾಗುತ್ತಿತ್ತು. ಅವರ ತಪಾಸಣೆಗೆ ಅವಕಾಶ ಹೇಗೆ ನೀಡಲಾಯಿತು. ತಕ್ಷಣ ಅಧಿಕಾರಿಗಳು ಉತ್ತರಿಸಬೇಕು ಎಂದು ಆಗ್ರಹಿಸಿದರು.



☛ ಉದಯವಾಹಿನಿ ಚಿತ್ರ

ಆರೋಗ್ಯ ತಪಾಸಣೆ ಪಟ್ಟಿಯಲ್ಲಿ ಹೆಸರಿರುವ ಕಾರ್ಮಿಕರ ಕಾರ್ಡ್ ರದ್ದಾಗಿಲ್ಲ ಎಂಬುವುದನ್ನು ತೋರಿಸುತ್ತದೆ. ಹೀಗಾಗಿ ಕಾರ್ಮಿಕರಿಗೆ ಸಿಗಬೇಕಾದ ಶೈಕ್ಷಣಿಕ ಸಹಾಯಧನ, ವಿವಾಹ ಸಹಾಯಧನ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನೀಡಬೇಕು. ಕಾರ್ಮಿಕರ ಸಮಸ್ಯೆಗೆ ಸ್ಪಂದಿಸಿ ಸೌಲಭ್ಯ ನೀಡುವ ಮೂಲಕ ಕಾರ್ಡ್‌ಗಳನ್ನು ನವೀಕರಣ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

## ನೇಗಿಲ ಯೋಗ ಕೃಷಿ ನಿನಾದ ಕಾರ್ಯಕ್ರಮ

• ಉದಯವಾಹಿನಿ ಮೂಲ್ಕಿ

ಬ್ರಹ್ಮಶ್ರೀ ನಾರಾಯಣ ಗುರುಗಳು ಜನರ ಮನಸ್ಸಿನಲ್ಲಿ ಜ್ಞಾನದ ಬಿತ್ತನೆ ಮಾಡಿ ಮತಾಂತರ ನಿಲ್ಲಿಸಿ, ಶಿಕ್ಷಣ, ಕೈಗಾರಿಕೆ ವ್ಯವಸಾಯಗಳನ್ನು ಮುಂದಿಟ್ಟು ಆದರ್ಶ ವ್ಯಕ್ತಿಯಾಗಿ ಬದುಕಿದವರೆಂದು ಜಾನಪದ ವಿದ್ವಾಂಸ, ಡಾ.ವೈ.ಎನ್. ಶೆಟ್ಟಿ ಹೇಳಿದರು. ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಾಯನ ಪೀಠದ ಸಂಯೋಜನೆಯಲ್ಲಿ ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ ಪಾವಂಜೆ ಆಶ್ರಯದಲ್ಲಿ ಪಾವಂಜೆಯ ನಿನಾದ ಕೇಂದ್ರದಲ್ಲಿ ಜರುಗಿದ ಕೃಷಿ ನಿನಾದ ನೇಗಿಲ ಯೋಗ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ಹಿಂದಿನಕಾಲದ ಸರಿ ಮುಗುಳಿ ಆದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯ ನಾರಾಯಣ ಅಧ್ಯಯನ ಪೀಠದ ನಿರ್ದೇಶಕ ಡಾ.ಜಯರಾಜ್ ಅಂಚನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದು, ವಿದ್ಯಾರ್ಥಿಗಳಿಗೆ ನಾಟಿ ಗದ್ದೆಯಲ್ಲಿ ಕಳೆ ತೆಗೆಯುವ ಕಾರ್ಯವನ್ನು ಕಲಿಸಿಕೊಡಲಾಯಿತು.

ಸಂಸ್ಥೆಯ ಅಧ್ಯಕ್ಷ ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿ ಪ್ರಸ್ತಾವನೆಗೈದರು. ಭವ ಸಂಕಮಾರ್ ನಿರೂಪಿಸಿದರು. ಜಯಂತಿ ಸಂಕಮಾರ್ ವಂದಿಸಿದರು. ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.



☛ ಉದಯವಾಹಿನಿ ಚಿತ್ರ

# ಬೆಳೆ ವಿಮೆಗೆ ನಿರಾಸಕ್ತಿ: ನೋಂದಣಿ ಕುಸಿತ

• ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ • ಪ್ರಸಕ್ತ ವರ್ಷ ಕೇವಲ 2.10 ಲಕ್ಷ ಅರ್ಜಿ • ವಿಮೆಗೆ ರೈತರ ನಿರಾಸಕ್ತಿ

• ಉದಯವಾಹಿನಿ ಹಾವೇರಿ

ಜಿಲ್ಲೆಯಲ್ಲಿ ಬೆಳೆ ವಿಮೆ ಪಾವತಿಸುವ ರೈತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಗಣನೀಯ ಪ್ರಮಾಣದಲ್ಲಿ ಕುಸಿಯುತ್ತಿದೆ. ಪರಿಹಾರ ವಿತರಣೆ ಸಂದರ್ಭದಲ್ಲಿ ಆಡಳಿತ ವ್ಯವಸ್ಥೆಯಿಂದ ಸೂಕ್ತ ಸ್ಪಂದನೆ ಸಿಗದಿದ್ದರಿಂದ ನೊಂದಿರುವ ಬಹುತೇಕ ರೈತರು, ವಿಮೆ ಕಂತು ಪಾವತಿಯಿಂದ ದೂರ ಉಳಿಯುತ್ತಿದ್ದಾರೆ.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆ ಕಂತು ಪಾವತಿಸಲು ಜಿಲ್ಲೆಯಲ್ಲಿ ಜುಲೈ 31ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಅವಧಿಯಲ್ಲಿ ಜಿಲ್ಲೆಯಾದ್ಯಂತ 2.10 ಲಕ್ಷ ರೈತರು ಮಾತ್ರ ವಿಮೆ ಕಂತು ಪಾವತಿಸಿ ನೋಂದಣಿ ಮಾಡಿಕೊಂಡಿದ್ದಾರೆ.

2023ರ ಮುಂಗಾರಿನಲ್ಲಿ 3.25 ಲಕ್ಷ ರೈತರು ವಿಮೆಗಾಗಿ ನೋಂದಣಿ ಮಾಡಿಕೊಂಡಿದ್ದರು. 2024ರ ಜುಲೈ 31ರಲ್ಲಿ 2.51 ಲಕ್ಷ ರೈತರು ಮಾತ್ರ ನೋಂದಣಿ ಮಾಡಿಕೊಂಡಿದ್ದರು. ಕಳೆದ ವರ್ಷವೇ 74 ಸಾವಿರ ರೈತರು ವಿಮೆಯಿಂದ ದೂರ ಸರಿದಿದ್ದರು.

ಪ್ರಸಕ್ತ 2025ರಲ್ಲಿ ನೋಂದಣಿ ಸಂಖ್ಯೆ 2.10 ಲಕ್ಷವಾಗಿದ್ದು, ಸುಮಾರು 40 ಸಾವಿರ ರೈತರು ವಿಮೆ ಸಹವಾಸ ಬೇಡವೆಂದು ತಟಸ್ಥರಾಗಿದ್ದಾರೆ. ಇದು ವಿಮೆ ಯೋಜನೆ ಜಾರಿ ಮೇಲೆ ಪರಿಣಾಮ ಬೀರಿದ್ದು, ಮುಂಬರುವ ವರ್ಷಗಳಲ್ಲಿ ರೈತರ ನೋಂದಣಿ ಮತ್ತಷ್ಟು ಕಡಿಮೆಯಾಗುವ ಸಾಧ್ಯತೆ ಇದೆ.



☛ ಉದಯವಾಹಿನಿ ಚಿತ್ರ

**'ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮೆ) ಯೋಜನೆಯಡಿ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ನಾಲ್ಕು ಪ್ರಮುಖ ಬೆಳೆಗಳನ್ನು ಆಯ್ಕೆ ಮಾಡಲಾಗಿತ್ತು. ಜುಲೈ 31ಕ್ಕೆ ನೋಂದಣಿ ಅವಧಿ ಮುಗಿದಿದೆ. ಸದ್ಯ 2.10 ಲಕ್ಷ ಅರ್ಜಿ ಲೆಕ್ಕ ಮಾತ್ರ ಸಿಕ್ಕಿದೆ. ವಾರದ ನಂತರ ನಿಖರ ಮಾಹಿತಿ ಸಿಗಲಿದೆ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ್ ತಿಳಿಸಿದರು. ಮಳೆ ಹಾಗೂ ಬೆಳೆ ಪರಿಸ್ಥಿತಿ ನೋಡಿಕೊಂಡು ರೈತರು ವಿಮೆ ಕಟ್ಟುತ್ತಾರೆ. ಜಿಲ್ಲೆಯಲ್ಲಿ ಉತ್ತಮ ಮಳೆಯಿದೆ. ಹೀಗಾಗಿ ಸಂಖ್ಯೆ ಕಡಿಮೆಯಾಗಿರಬಹುದು' ಎಂದರು. '2024-25ನೇ ಸಾಲಿನಲ್ಲಿ 95.65 ಕೋಟಿ ಬೆಳೆ ವಿಮೆ ಪರಿಹಾರ ಬಂದಿದೆ. 2023-24ರಲ್ಲಿ 187 ಕೋಟಿ ಪರಿಹಾರ ಬಮದಿತ್ತು' ಎಂದು ಹೇಳಿದರು.**

**ವಾರದ ಬಳಿಕ ನಿಖರ ಮಾಹಿತಿ**

ಜಿಲ್ಲೆಯ ಬ್ಯಾಡಗಿ, ಹಾನಗಲ್, ಹಾವೇರಿ, ಹಿರೇಕೆರೂರು, ರಾಣೆಬೆನ್ನೂರು, ರಟ್ಟಿಹಳ್ಳಿ, ಸವಣೂರು, ಶಿಗ್ಗಾವಿ ತಾಲ್ಲೂಕಿನಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಜಾರಿಗೊಳಿಸಲಾಗಿದೆ.

ತಾಲ್ಲೂಕುಗಳ ಪೈಕಿ ಹಾನಗಲ್‌ನಲ್ಲಿ ಪ್ರಸಕ್ತ ವರ್ಷ ಅತೀ ಹೆಚ್ಚು ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ, 12,173 ರೈತರು ಈ ವರ್ಷ ನೋಂದಣಿ ಮಾಡಿಸಿಲ್ಲ. ಪ್ರತಿ ತಾಲ್ಲೂಕಿನಲ್ಲೂ ಈ ವರ್ಷ ನೋಂದಣಿ ಮಾಡಿಸುವ ರೈತರ ಸಂಖ್ಯೆ ಇಳಿಮುಖವಾಗಿದೆ.

**ಸಾಲ ಮಾಡಿ ಕೃಷಿ ಮಾಡುತ್ತಿದ್ದೇವೆ. ವಿಮೆ ತುಂಬಲೂ ಸಾಲ ಮಾಡಬೇಕು. ಕಳೆದ ಎರಡು ವರ್ಷ ಒಂದು ರೂಪಾಯಿಯೂ ಬಂದಿಲ್ಲ. ಹೀಗಾಗಿ ಈ ವರ್ಷ ವಿಮೆ ತುಂಬಿಲ್ಲ. -ನಾಗಣ್ಣ ಎಂ.**

**ವಿಮೆ ನಿರ್ಧಾರದಲ್ಲಿ ಅನ್ಯಾಯ:** ಜಿಲ್ಲೆಯಲ್ಲಿ ಮೆಕ್ಕೆ ಜೋಳ (ಗೋವಿನಜೋಳ), ಶೇಂಗಾ, ಹತ್ತಿ, ಭತ್ತ, ಹೆಸರು, ಸೋಯಾ ಅವರೆ, ಸೂರ್ಯಕಾಂತಿ, ಅಲಸಂದಿ, ತೊಗರಿ ಸೇರಿದಂತೆ ಹಲವು ಬೆಳೆಗಳನ್ನು ಬೆಳೆಯಲಾಗಿದೆ. ಕೃಷಿ ಇಲಾಖೆ ನಿಗದಿಪಡಿಸಿರುವ ವ್ಯಾಪ್ತಿಗೆ ತಕ್ಕಂತೆ ಬೆಳೆ ವಿಮೆ ಪಾವತಿಗೆ ಅವಕಾಶ ನೀಡಲಾಗಿತ್ತು. ಆದರೆ, ಹಲವರು ವಿಮೆ ಪಾವತಿಗೆ ಆಸಕ್ತಿ ತೋರಿಸಿಲ್ಲ. 'ಜಿಲ್ಲೆಯಲ್ಲಿ ರೈತಾಪಿ ಕುಟುಂಬಗಳು ಹೆಚ್ಚಿವೆ. ಕೃಷಿ ನಂಬಿಯೇ ಎಲ್ಲರೂ ಜೀವನ ನಡೆಸುತ್ತಿದ್ದಾರೆ. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಜಾರಿ ಸಂದರ್ಭದಲ್ಲಿ ಜಿಲ್ಲೆಯಲ್ಲಿ ರೈತರಿಂದ ಉತ್ತಮ ಸ್ಪಂದನೆ ಇತ್ತು. ಎಲ್ಲರೂ ವಿಮೆ ಪಾವತಿ ಮಾಡುತ್ತಿದ್ದರು. ಈಗ ವಿಮೆ ಪಡೆಯಲು ಹೋರಾಡಬೇಕಾದ ಸ್ಥಿತಿಯಿದೆ. ಇದೇ ಕಾರಣಕ್ಕೆ ರೈತರು ವಿಮೆ ಪಾವತಿಗೆ ಆಸಕ್ತಿ ತೋರುತ್ತಿಲ್ಲ' ಎಂದು ಹಾನಗಲ್ ರೈತ ಭರಮಪ್ಪ ಕೆಂಪಣ್ಣನವರ ಹೇಳಿದರು.

ಬೆಳೆ ಆಯ್ಕೆ ನಿರ್ಧಾರದಲ್ಲಿ ರೈತರಿಗೆ ಅನ್ಯಾಯ ಆಗುತ್ತಿದೆ. ಬೆಳೆ ಹಾನಿ ಸಂದರ್ಭದಲ್ಲಿ ವಿಮೆ ವಿತರಣೆಯಲ್ಲೂ ತಾರತಮ್ಯ ಮಾಡಲಾಗುತ್ತದೆ. ವಿಮೆ ಬಂದರೂ ಅದನ್ನು ಪಡೆದುಕೊಳ್ಳಲು ಕಚೇರಿಗೆ ಅಲೆದಾಡುವ ಸ್ಥಿತಿ ಬರುತ್ತದೆ ಎಂದು ತಿಳಿಸಿದರು.

ಉದಯ ವಾಹಿನಿ

ಪ್ರಾದೇಶಿಕ

ಬುಧವಾರ 06 ಆಗಸ್ಟ್ 2025




# ಸಾರ್ವಭೌಮ ದೇಶದ ನಿರ್ಧಾರ ಪ್ರಶ್ನಿಸಲು ನೀವ್ಯಾರು?

**ಟ್ರಂಪ್‌ಗೆ ಡ್ಯುಯೆಲ್ ಸಂಕಷ್ಟ**




**ಮಾಸ್ಕೋ:** ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿರುವ ಭಾರತಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕ ಬೆದರಿಕೆ ಹಾಕಿದ್ದಾರೆ. ಆದರೆ ಈ ಬೆದರಿಕೆಗಳಿಗೆ ಬಗ್ಗದ ಭಾರತ, ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಮುಂದುವರಿಸಿದೆ.

ಈ ಮಧ್ಯೆ, ಭಾರತದ ಪರವಾಗಿ ಬ್ಯಾಟ್ ಬೀಸಿರುವ ರಷ್ಯಾ, ಯಾವುದೇ ರಾಷ್ಟ್ರದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದು, ಸಾರ್ವಭೌಮ ರಾಷ್ಟ್ರದ ಹಕ್ಕು ಎಂದು ಹೇಳಿದೆ. ಈ ಕುರಿತು ಮಾತನಾಡಿರುವ ಕ್ರೆಮ್ಲಿನ್ ವಕ್ತಾರ ಡಿಮಿತ್ರಿ ಪೆಸ್ಕೋವ್, ಸಾರ್ವಭೌಮ ರಾಷ್ಟ್ರಗಳು ತಮ್ಮದೇ ಆದ ವ್ಯಾಪಾರ ಪಾಲುದಾರರನ್ನು ಆಯ್ಕೆ ಮಾಡುವ ಹಕ್ಕನ್ನು ಹೊಂದಿವೆ. ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ನಿರ್ಧಾರವನ್ನು ಪ್ರಶ್ನಿಸುವುದಕ್ಕೆ ಅಮೆರಿಕ ಯಾವ ನೈತಿಕತೆಯನ್ನು ಹೊಂದಿಲ್ಲ ಎಂದು ಗುಡುಗಿದ್ದಾರೆ. ಮುಂದುವರೆದು, ಭಾರತಕ್ಕೆ ಬೆದರಿಕೆ ಹಾಕುತ್ತಿರುವ ಅಮೆರಿಕದ ಹೇಳಿಕೆಗಳನ್ನು ನಾವು ಕಾನೂನುಬದ್ಧ ಎಂದು ಪರಿಗಣಿಸುವುದಿಲ್ಲ, ರಷ್ಯಾದೊಂದಿಗೆ ವ್ಯಾಪಾರ ಸಂಬಂಧ ಕಡಿತಗೊಳಿಸುವಂತೆ ಸಾರ್ವಭೌಮ ರಾಷ್ಟ್ರವಾದ ಭಾರತದ ಮೇಲೆ ಯಾರೂ ಒತ್ತಡ ಹೇರುವಂತಿಲ್ಲ ಎಂದು ಡಿಮಿತ್ರಿ ಪೆಸ್ಕೋವ್ ಬೆಂಬಲದ ಮಾತುಗಳನ್ನಾಡಿದ್ದಾರೆ.

ಸಾರ್ವಭೌಮ ರಾಷ್ಟ್ರಗಳು ವ್ಯಾಪಾರ, ಆರ್ಥಿಕ ಸಹಕಾರಕ್ಕಾಗಿ ತಮ್ಮದೇ ಆದ ವ್ಯಾಪಾರ ಪಾಲುದಾರರನ್ನು ಆಯ್ಕೆ ಮಾಡುವ ಹಕ್ಕನ್ನು ಹೊಂದಿವೆ. ನಿರ್ದಿಷ್ಟ ದೇಶದ ಹಿತಾಸಕ್ತಿಗಳಲ್ಲಿ ವ್ಯಾಪಾರ ಮತ್ತು ಆರ್ಥಿಕ ಸಹಕಾರದ ರೂಪಗಳನ್ನು, ತಾವೇ ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಈ ರಾಷ್ಟ್ರಗಳು ಹೊಂದಿರುತ್ತವೆ ಎಂದು ಡಿಮಿತ್ರಿ ಪೆಸ್ಕೋವ್ ಸ್ಪಷ್ಟವಾದ ಮಾತುಗಳಲ್ಲಿ ಹೇಳಿದ್ದಾರೆ. ಉಕ್ರೇನ್ ಜೊತೆಗಿನ ಸಂಘರ್ಷವನ್ನು ಕೊನೆಗೊಳಿಸಲು ಮಾಸ್ಕೋ ಕ್ರಮಗಳನ್ನು ತೆಗೆದುಕೊಳ್ಳದ ಹೊರತು, ರಷ್ಯಾ ಮತ್ತು ಅದರ ಇಂಧನ ರಫ್ತುಗಳನ್ನು ಖರೀದಿಸುವ ದೇಶಗಳ ಮೇಲೆ ಹೊಸ ನಿರ್ಬಂಧಗಳನ್ನು ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅದಾಗ್ಯೂ, ನಿರ್ದಿಷ್ಟ ಗಡುವಿನ ಹೊರತಾಗಿಯೂ, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಯುದ್ಧದ ಬಗೆಗಿನ ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಕೊಂಡಿಲ್ಲ.

**ಭಾರತ ವಿರೋಧ:** ಈ ಮಧ್ಯೆ, ಡೊನಾಲ್ಡ್ ಟ್ರಂಪ್ ಅವರ ಸುಂಕದ ಬೆದರಿಕೆಗಳನ್ನು ಅಸಮರ್ಥನೀಯ ಎಂದು ಕರೆದಿರುವ ಭಾರತ, ದೇಶದ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸುವುದಾಗಿ ಪ್ರತಿಜ್ಞೆ ಮಾಡಿದೆ. ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಗಳು, ಆರ್ಥಿಕ ಭದ್ರತೆಯನ್ನು ಕಾಪಾಡಿಕೊಳ್ಳಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಸ್ಪಷ್ಟಪಡಿಸಿದೆ.

ಇದೇ ವಿಚಾರವಾಗಿ ಮಾತನಾಡಿರುವ ಭಾರತದ ವಿದೇಶಾಂಗ ಸಚಿವಾಲಯ, ಭಾರತದ ಆಮದುಗಳು ಜಾಗತಿಕ ಮಾರುಕಟ್ಟೆ ಪರಿಸ್ಥಿತಿಯಿಂದ ಒತ್ತಾಯಿಸಲ್ಪಟ್ಟ ಅವಶ್ಯಕತೆಯಾಗಿದೆ ಆದರೆ ನಮ್ಮ ನಿರ್ಧಾರವನ್ನು ಟೀಕಿಸುವ ರಾಷ್ಟ್ರಗಳು ರಷ್ಯಾದೊಂದಿಗಿನ ತಮ್ಮ ವ್ಯಾಪಾರವನ್ನು ಮುಂದುವರೆಸಿವೆ ಎಂದು ತೀವ್ರವಾಗಿ ತಿರುಗೇಟು ತೆಗೆದುಕೊಂಡಿದೆ. ಈ ವಿಚಾರವಾಗಿ ಮಾತನಾಡಿರುವ ಟ್ರಂಪ್ ಅವರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಧಿಕ್ಕಾರದ ಧ್ವನಿ ಕೇಳಿಸಿದ್ದಾರೆ.

### ತೈಲ ಸಂಗ್ರಹಾಗಾರಗಳಿಗೆ ಸ್ಪಷ್ಟತೆ

**ಟ್ರಂಪ್ ಬೆದರಿಕೆಗಳ ಹೊರತಾಗಿಯೂ, ಭಾರತ ರಷ್ಯಾದಿಂದ ತೈಲ ಖರೀದಿಸುವುದನ್ನು ಮುಂದುವರಿಸುತ್ತದೆ ಎಂದು ಮೋದಿ ಸರ್ಕಾರದ ಉನ್ನತ ಮೂಲಗಳು ಸ್ಪಷ್ಟಪಡಿಸಿವೆ. ಕೇಂದ್ರದ ಈ ನಿರ್ಧಾರ ಭಾರತೀಯ ತೈಲ ಸಂಗ್ರಹಾಗಾರಗಳಿಗೆ ಸ್ಪಷ್ಟತೆ ಒದಗಿಸಿದೆ.**

# 24 ಗಂಟೆಗಳಲ್ಲಿ ಭಾರತದ ಸರಕುಗಳ ಮೇಲಿನ ಸುಂಕ ಮತ್ತಷ್ಟು ಏರಿಕೆ: ಟ್ರಂಪ್

**ನ್ಯೂಯಾರ್ಕ್:** ಭಾರತವು ಅಮೆರಿಕದ ಉತ್ತಮ ವ್ಯಾಪಾರ ಪಾಲುದಾರ ದೇಶವಲ್ಲ, ಮುಂದಿನ 24ಗಂಟೆಯೊಳಗೆ ಭಾರತದ ಸರಕುಗಳ ಮೇಲಿನ ಸುಂಕವನ್ನು ಗಣನೀಯವಾಗಿ ಹೆಚ್ಚಿಸಲಿದ್ದೇವೆ. ಏಕೆಂದರೆ ಭಾರತ ರಷ್ಯಾದಿಂದ ತೈಲವನ್ನು ಖರೀದಿಸುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಮಂಗಳವಾರ ಹೇಳಿದ್ದಾರೆ. ಜಗತ್ತಿನ ಇತರ ರಾಷ್ಟ್ರಗಳಿಗಿಂತ ಭಾರತ ಅತಿ ಹೆಚ್ಚು ಸುಂಕ ವಿಧಿಸುತ್ತದೆ, ಹೀಗಾಗಿ ಜನರು ಭಾರತದ ಬಗ್ಗೆ ಮಾತನಾಡಲು ಇಚ್ಚಿಸುವುದಿಲ್ಲ. ನಾವು ಅವರೊಂದಿಗೆ ಅತಿ ಚಿಕ್ಕ ಪ್ರಮಾಣದಲ್ಲಿ ವ್ಯಾಪಾರ ಮಾಡುತ್ತಿದ್ದೇವೆ. ಅದಕ್ಕೆ ಭಾರತ ವಿಧಿಸುತ್ತಿರುವ ಅತಿಯಾದ ಸುಂಕವೇ ಕಾರಣ ಎಂದು ಟ್ರಂಪ್ ಸಿಎನ್‌ಬಿಸಿ ಸ್ಕ್ವ್ಯಾಕ್ ಬಾಕ್ಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಭಾರತ ಉತ್ತಮ ವ್ಯಾಪಾರ ಪಾಲುದಾರ ದೇಶವಲ್ಲ. ಭಾರತ ನಮ್ಮೊಂದಿಗೆ ಅನೇಕ ವ್ಯಾಪಾರವನ್ನು ನಡೆಸುತ್ತಿದೆ. ಆದರೆ, ನಾವು ಅವರೊಂದಿಗೆ ವ್ಯಾಪಾರ ಮಾಡುವುದಿಲ್ಲ. ಹೀಗಾಗಿ ನಾವು ಶೇ 25 ರಷ್ಟು ಸುಂಕ ಹೇರಿದ್ದೇವೆ. ಬಹುಶಃ ಮುಂದಿನ 24 ಗಂಟೆಯಲ್ಲಿ ಗಣನೀಯವಾಗಿ ಅದನ್ನು ಇನ್ನಷ್ಟು ಹೆಚ್ಚಿಸಲಿದ್ದೇವೆ. ಏಕೆಂದರೆ ಭಾರತ ರಷ್ಯಾದಿಂದ ತೈಲವನ್ನು ಖರೀದಿಸುತ್ತಿದೆ, ಅವರು ಯುದ್ಧ ಯಂತ್ರಕ್ಕೆ ಇಂಧನವನ್ನು ತುಂಬಿಸುತ್ತಿದ್ದಾರೆ.



ಅವರು ಅದನ್ನು ಮುಂದುವರಿಸಿದರೆ, ನನಗೆ ಸಂತೋಷವಾಗದು ಎಂದು ಹೇಳಿದ್ದಾರೆ. ನಿನ್ನೆ ಸುಂಕ ಏರಿಸುವ ಕುರಿತು ಮಾತನಾಡಿದ್ದ ಟ್ರಂಪ್, ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುತ್ತಿರುವ ಭಾರತ, ದೊಡ್ಡ ಪ್ರಮಾಣದಲ್ಲಿ ಲಾಭ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದ್ದರು. ಅಲ್ಲದೆ ಭಾರತದ ಸರಕುಗಳಿಗೆ ಸುಂಕವನ್ನು ಗಣನೀಯವಾಗಿ ಏರಿಕೆ ಮಾಡಲಾಗುವುದು ಎಂದು ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಭಾರತ, ಸುಂಕ ಹೇರುವ ಪರಿಣಾಮಗಳ ಕುರಿತು ಪರಿಶೀಲನೆ ನಡೆಸುತ್ತಿದ್ದು, ದೇಶದ ಹಿತಾಸಕ್ತಿ ಕಾಯಲು ಎಲ್ಲಾ ರೀತಿಯ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿತ್ತು.

# ಆಪರೇಷನ್ ಸಿಂಧೂರದಲ್ಲಿ ಭರ್ಜರಿ ಪ್ರದರ್ಶನ

## ಬ್ರಹ್ಮೋಸ್ ಕ್ಷಿಪಣಿಗಳಿಗೆ ಸೇನಾಪಡೆಗಳಿಂದ ಬೃಹತ್ ಆರ್ಡರ್

**ಹೊಸದಿಲ್ಲಿ:** ಪಾಕಿಸ್ತಾನ ವಿರುದ್ಧ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ವೇಳೆ ವೈರಿ ದೇಶದ ಸೇನಾ ಮೂಲ ಸೌಕರ್ಯಗಳಿಗೆ ಹಾನಿ ಉಂಟುಮಾಡಿತ್ತು ಬ್ರಹ್ಮೋಸ್ ಕ್ಷಿಪಣಿ. ಇದೀಗ ಭಾರತೀಯ ಸಶಸ್ತ್ರ ಪಡೆಗಳು ಇದೇ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳಿಗಾಗಿಬೃಹತ್ ಪ್ರಮಾಣದ ಖರೀದಿ ಆರ್ಡರ್‌ಗಳನ್ನು ನೀಡಲು ಸಜ್ಜಾಗಿವೆ. ಶೀಘ್ರದಲ್ಲೇ ನಡೆಯಲಿರುವ ರಕ್ಷಣಾ ಸಚಿವಾಲಯದ ಉನ್ನತ ಮಟ್ಟದ ಸಭೆಯಲ್ಲಿ ಈ ಬೃಹತ್ ಖರೀದಿ ಪ್ರಸ್ತಾವನೆಗೆ ಅನುಮೋದನೆ ಸಿಗುವ ನಿರೀಕ್ಷೆ ಇದೆ ಎಂದು ಉನ್ನತ ರಕ್ಷಣಾ ಮೂಲಗಳನ್ನು ಉಲ್ಲೇಖಿಸಿ ಆಂಗ್ಲ ಮಾಧ್ಯಮಗಳು ವರದಿ ಮಾಡಿದೆ.

**ಯುದ್ಧ ವಿಮಾನ, ಯುದ್ಧ ನೌಕೆಗಳಿಗೆ ಬ್ರಹ್ಮೋಸ್:** ಈ ಯೋಜನೆಯ ಅಡಿಯಲ್ಲಿ ಭಾರತೀಯ ನೌಕಾಪಡೆಯ ವೀರ್‌ಕ್ಲಾಸ್ ಯುದ್ಧ ನೌಕೆಗಳಿಗೆ ಭಾರತೀಯ ವಾಯುಪಡೆಯು ತನ್ನ ರಷ್ಯಾ ಮೂಲದ ಸುಖೋಯ್-30 ಎಂಕೆಐ ಯುದ್ಧ ವಿಮಾನಗಳಿಗೆ ಭೂಮಿ ಮತ್ತು ವಾಯು ಉಡಾವಣಾ ಸಾಮರ್ಥ್ಯ ಹೊಂದಿರುವ ಬ್ರಹ್ಮೋಸ್ ಕ್ಷಿಪಣಿಗಳನ್ನು ಅಳವಡಿಸಲು ಉದ್ದೇಶಿಸಿದೆ. ಕೆಲ ತಿಂಗಳ ಹಿಂದೆ ನಡೆದ ಪಾಕಿಸ್ತಾನದ ಜೊತೆಗಿನ ಸಂಘರ್ಷದಲ್ಲಿ ಅಲ್ಲಿನ ವಾಯುನೆಲೆಗಳು, ಸೇನಾ ಕ್ಯಾಂಪ್‌ಗಳನ್ನು ಗುರಿಯಾಗಿಸಿ




- **ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳ ಬೃಹತ್ ಪ್ರಮಾಣದ ಖರೀದಿಗೆ ಸಜ್ಜಾಗಿವೆ ಸೇನಾಪಡೆಗಳು**
- **ಆಪರೇಷನ್ ಸಿಂಧೂರನ ಸಂದರ್ಭದಲ್ಲಿ ಬ್ರಹ್ಮೋಸ್ ಕ್ಷಿಪಣಿಗಳನ್ನು ಬಳಸಿಕೊಂಡು ಪಾಕಿಸ್ತಾನದ ಮೇಲೆ ಭೀಕರ ದಾಳಿ**
- **ಬ್ರಹ್ಮೋಸ್ ಕ್ಷಿಪಣಿಗಳ ಸಾಮರ್ಥ್ಯವನ್ನು ಆತ್ಮನಿರ್ಭರ ಭಾರತದ ಶಕ್ತಿಯ ಪ್ರತೀಕ ಎಂದು ಶ್ಲಾಘಿಸಿದ್ದ ಪ್ರಧಾನಿ ಮೋದಿ**

ಬ್ರಹ್ಮೋಸ್ ಕ್ಷಿಪಣಿಗಳನ್ನು ಬಳಸಲಾಗಿತ್ತು. ಕಾರ್ಯಾಚರಣೆಯ ಮೊದಲ ಹಂತದಲ್ಲಿ, ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿದ್ದ ಜೈಶ್-ಎ-ಮೊಹಮ್ಮದ್, ಲಷ್ಕರ್-ಎ-ತೊಯ್ಬಾ ಉಗ್ರ ಸಂಘಟನೆಗಳ ಪ್ರಧಾನ ಕಚೇರಿಗಳ ಮೇಲೆ ಅತ್ಯಂತ ನಿಖರವಾಗಿ ದಾಳಿ ನಡೆಸಲು ವಾಯುಪಡೆಯು ಇದೇ ಬ್ರಹ್ಮೋಸ್ ಕ್ಷಿಪಣಿಯನ್ನು ತನ್ನ ಪ್ರಮುಖ ಅಸ್ತ್ರವಾಗಿ ಬಳಸಿತ್ತು. ಈ ಕಾರ್ಯಾಚರಣೆಯಲ್ಲಿ ದೇಶೀಯ ಶಸ್ತ್ರಾಸ್ತ್ರಗಳ ಪ್ರದರ್ಶನದ ಬಗ್ಗೆ ಭಾರೀ ಮೆಚ್ಚುಗೆ ವ್ಯಕ್ತವಾಗಿತ್ತು. ಸ್ವತಃ ಪ್ರಧಾನಿ ನರೇಂದ್ರ ಮೋದಿ ಕೂಡ ಇದನ್ನು ಶ್ಲಾಘಿಸಿದ್ದರು. ಆಪರೇಷನ್ ಸಿಂಧೂರದ ಸಮಯದಲ್ಲಿ ನಮ್ಮ ದೇಶೀಯ ಶಸ್ತ್ರಾಸ್ತ್ರಗಳ ಸಾಮರ್ಥ್ಯವನ್ನು ಜಗತ್ತು ಕಂಡಿದೆ.

ನಮ್ಮ ವಾಯು ರಕ್ಷಣಾ ವ್ಯವಸ್ಥೆಗಳು, ಕ್ಷಿಪಣಿಗಳು, ಡ್ರೋನ್‌ಗಳು, ವಿಶೇಷವಾಗಿ ಬ್ರಹ್ಮೋಸ್ ಕ್ಷಿಪಣಿಗಳು ಆತ್ಮನಿರ್ಭರ ಭಾರತದ ಶಕ್ತಿಯನ್ನು ಸಾಬೀತುಪಡಿಸಿವೆ, ಎಂದು ಅವರು ಹೇಳಿದ್ದರು. ಬ್ರಹ್ಮೋಸ್ ದಾಳಿಯಿಂದ ಪಾಕಿಸ್ತಾನದ ವಾಯುನೆಲೆಗಳಿಗೆ ಅಪಾರ ಹಾನಿ ಉಂಟಾಗಿತ್ತು. ಅಲ್ಲದೆ ಉಗ್ರರನು, ಅವರ ಮೂಲ ಸೌಕರ್ಯಗಳನ್ನು ರಕ್ಷಿಸಲು ಪಾಕಿಸ್ತಾನಿ ಸೇನೆಯು ನಡೆಸಿದ ಪ್ರತಿದಾಳಿ ಪ್ರಯತ್ನಗಳು ಕೂಡ ವಿಫಲಗೊಂಡಿದ್ದವು. ಇಂಥ ಅಸಾಮಾನ್ಯ ಸಾಮರ್ಥ್ಯದ ಬ್ರಹ್ಮೋಸ್ ಕ್ಷಿಪಣಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಬತ್ತಳಿಕೆಗೆ ಸೇರಿಸಿಕೊಳ್ಳಲು ನೌಕಾಪಡೆ ಹಾಗೂ ವಾಯುಪಡೆ ನಿರ್ಧರಿಸಿವೆ.

### ಕ್ಷಿಪಣಿಗಳ ಖರೀದಿಗೆ ಸಿದ್ಧತೆ

**ಭಾರತೀಯ ಸಶಸ್ತ್ರ ಪಡೆಗಳು ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳ ಬೃಹತ್ ಖರೀದಿಗೆ ಸಿದ್ಧತೆ ನಡೆಸಿವೆ. ರಕ್ಷಣಾ ಸಚಿವಾಲಯದ ಸಭೆಯಲ್ಲಿ ಇದಕ್ಕೆ ಅನುಮೋದನೆ ದೊರೆಯುವ ನಿರೀಕ್ಷೆಯಿದೆ. ಈ ಯೋಜನೆಯು ನೌಕಾಪಡೆಯ ಯುದ್ಧನೌಕೆಗಳು ಮತ್ತು ವಾಯುಪಡೆಯ ಸುಖೋಯ್-30 ಎಂಕೆಐ ಯುದ್ಧ ವಿಮಾನಗಳಿಗೆ ಬ್ರಹ್ಮೋಸ್ ಕ್ಷಿಪಣಿಗಳನ್ನು ಅಳವಡಿಸುವ ಗುರಿಯನ್ನು ಹೊಂದಿದೆ. ಪಾಕಿಸ್ತಾನದ ವಿರುದ್ಧದ ಆಪರೇಷನ್ ಸಿಂಧೂರದಲ್ಲಿ ಬ್ರಹ್ಮೋಸ್ ಕ್ಷಿಪಣಿಯ ಯಶಸ್ಸಿನ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ.**

# ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ 40 ದಿನಗಳ ಪೆರೋಲ್

**ರೋಹ್ಟಕ್:** ತನ್ನ ಇಬ್ಬರು ಶಿಷ್ಯೆಯರ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ 20 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿರುವ ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್ ಅವರಿಗೆ 40 ದಿನಗಳ ಪೆರೋಲ್ ನೀಡಲಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಸ್ವಯಂ ಘೋಷಿತ ದೇವಮಾನವನಿಗೆ ನೀಡಲಾಗುತ್ತಿರುವ 14ನೇ ಪೆರೋಲ್ ಇದಾಗಿದೆ. ಮೂರು ತಿಂಗಳ ಹಿಂದೆ ಬಿಡುಗಡೆಯಾದ ನಂತರ ಹೊಸ ಪೆರೋಲ್ ಪಡೆದ ರಾಮ್ ರಹೀಮ್ ಬೆಳಿಗ್ಗೆ ರೋಹ್ಟಕ್‌ನ ಸುನಾರಿಯಾ ಜೈಲಿನಿಂದ ಹೊರಬಂದರು. 57 ವರ್ಷದ ರಾಮ್ ರಹೀಮ್ ಸೆಪ್ಟೆಂಬರ್ 14 ರಂದು ಜೈಲಿಗೆ ಮರಳುವವರೆಗೂ ಸಿರ್ಸಾದ ಪ್ರಧಾನ ಕಚೇರಿಯ ಡೇರಾದಲ್ಲಿಯೇ ಇರಲಿದ್ದಾರೆ.

2017 ರಲ್ಲಿ ತನ್ನ ಇಬ್ಬರು ಶಿಷ್ಯರ ಮೇಲೆ ಅತ್ಯಾಚಾರ ಎಸಗಿದ ಆರೋಪ ಮತ್ತು 2019 ರಲ್ಲಿ ಪತ್ರಕರ್ತೆಯ ಕೊಲೆ ಆರೋಪ ಹೊತ್ತಿದ್ದ ಸಿಂಗ್ ಅವರನ್ನು ಆಗಾಗ್ಗೆ ಬಿಡುಗಡೆ ಮಾಡಲಾಗುತ್ತಿದ್ದು,




ವಿವಿಧ ವಲಯಗಳಿಂದ ಟೀಕೆಗಳು ವ್ಯಕ್ತವಾಗುತ್ತಿವೆ.

ಈ ಹಿಂದೆ ಅವರಿಗೆ ಕೊನೆಯದಾಗಿ ಏಪ್ರಿಲ್ 9 ರಂದು 21 ದಿನಗಳ ಪೆರೋಲ್ ನೀಡಲಾಗಿತ್ತು. ಅದಕ್ಕೂ ಮೊದಲು, ಫೆಬ್ರವರಿ 5 ರಂದು ದೆಹಲಿ ವಿಧಾನಸಭಾ ಚುನಾವಣೆಗೆ ಸ್ವಲ್ಪ ಮೊದಲು, ಈ ವರ್ಷದ ಜನವರಿಯಲ್ಲಿ 30 ದಿನಗಳ ಪೆರೋಲ್ ಪಡೆದಿದ್ದರು. ಇದಕ್ಕೂ ಮೊದಲು, ಕಳೆದ ವರ್ಷ ಅಕ್ಟೋಬರ್ 1 ರಂದು, ಅಕ್ಟೋಬರ್ 5 ರಂದು ಹರಿಯಾಣ ವಿಧಾನಸಭಾ ಚುನಾವಣೆಗೆ ಮೊದಲು ಅವರಿಗೆ 20 ದಿನಗಳ ಪೆರೋಲ್ ನೀಡಲಾಗಿತ್ತು. ಸಿಂಗ್ ನೇತೃತ್ವದ ಡೇರಾ ಸಚ್ಚಾ ಸೌದಾ, ಹರಿಯಾಣ, ಪಂಜಾಬ್, ರಾಜಸ್ಥಾನ ಮತ್ತು ಇತರ ಹಲವಾರು ರಾಜ್ಯಗಳಲ್ಲಿ ದೊಡ್ಡ ಅನುಯಾಯಿಗಳನ್ನು ಹೊಂದಿದೆ.

ಹರಿಯಾಣದಲ್ಲಿ, ಸಿರ್ಸಾ, ಫತೇಹಾಬಾದ್, ಕುರುಕ್ಷೇತ್ರ, ಕೈಥಾಲ್, ಹಿಸಾರ್‌ನಂತಹ ಜಿಲ್ಲೆಗಳಲ್ಲಿ ಈ ಪಂಥವು ವಿಶೇಷವಾಗಿ ಪ್ರಭಲವಾಗಿದೆ. ರಾಮ್ ರಹೀಮ್ ಪ್ರಸ್ತುತ ಇಬ್ಬರು ಮಹಿಳಾ ಶಿಷ್ಯೆಯರ ಮೇಲಿನ ಅತ್ಯಾಚಾರಕ್ಕಾಗಿ 20 ವರ್ಷಗಳ ಜೈಲು ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ.

ವಿಶೇಷ ಸಿಬಿಐ ನ್ಯಾಯಾಲಯವು ಆಗಸ್ಟ್ 2017ರಲ್ಲಿ ಈ ಶಿಕ್ಷೆಯನ್ನು ವಿಧಿಸಿತ್ತು. ಜನವರಿ 2019ರಲ್ಲಿ, ಪತ್ರಕರ್ತ ರಾಮ್ ಚಂದರ್ ಛತ್ರಪತಿ ಅವರ ಕೊಲೆಗೆ ಇತರ ಮೂವರೊಂದಿಗೆ ಅವರನ್ನು ಅಪರಾಧಿ ಎಂದು ಘೋಷಿಸಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. 2002 ರಲ್ಲಿ ಪಂಥದ ಮಾಜಿ ವ್ಯವಸ್ಥಾಪಕ ರಂಜಿತ್ ಸಿಂಗ್ ಅವರ ಕೊಲೆಯಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಅವರನ್ನು ಮೇ 2024ರಲ್ಲಿ ಖುಲಾಸೆಗೊಳಿಸಿದರೂ, ಅತ್ಯಾಚಾರ ಮತ್ತು ಪತ್ರಕರ್ತೆಯ ಕೊಲೆ ಪ್ರಕರಣಗಳಲ್ಲಿ ಸಿಂಗ್ ಅವರ ಶಿಕ್ಷೆಗಳು ಹಾಗೆಯೇ ಉಳಿದಿವೆ.

# ರಾಹುಲ್‌ಗೆ ಛೀಮಾರಿ ಹಾಕಿದ ಸುಪ್ರೀಂ, ಇಂಡಿ ನಾಯಕರ ಆಕ್ಷೇಪ

**ನವದೆಹಲಿ:** ಚೀನಾವು ಭಾರತದ 2 ಸಾವಿರ ಚದರ ಕಿ.ಮೀ. ಭೂ ಪ್ರದೇಶವನ್ನು ಆಕ್ರಮಣ ಮಾಡಿದೆ ಎಂಬ ರಾಹುಲ್ ಗಾಂಧಿ ಆರೋಪಕ್ಕೆ ಛೀಮಾರಿ ಹಾಕಿದ್ದ ಸುಪ್ರೀಂಕೋರ್ಟ್ ಆರೋಪಕ್ಕೆ ಇಂಡಿಯಾ ಬ್ಲಾಕ್ ಮೈತ್ರಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಭಾರತೀಯ ಪ್ರಜೆಯೊಬ್ಬನನ್ನು ನೀನು ನಿಜವಾದ ಭಾರತೀಯನೇ ಎಂದು ನಿರ್ಧರಿಸಲು ನ್ಯಾಯಾಧೀಶರಿಗೆ ಸಾಧ್ಯವಿಲ್ಲ ಎಂದು ಕೈ ಸಂಸದೆ ಪ್ರಿಯಾಂಕ ವಾದ್ರಾ ಹೇಳಿದ್ದರು. ಇದರ ಬೆನ್ನಲ್ಲೇ ಇಂಡಿಯಾ ಮೈತ್ರಿ ನಾಯಕರು ಸುಪ್ರೀಂ ಆದೇಶಕ್ಕೆ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ್ದಾರೆ.

ಈ ಕುರಿತು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾಟೆ ತಮ ಅಧಿಕೃತ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ರಾಜಕೀಯ ಪಕ್ಷಗಳ ಪ್ರಜಾಸತ್ತಾತಕ ಹಕ್ಕುಗಳ ಮೇಲೆ ಅನಗತ್ಯವಾದ ಅಸಾಧಾರಣ ಅವಲೋಕನವನ್ನು ಹಾಲಿ ನ್ಯಾಯಾಧೀಶರು ಮಾಡಿದ್ದಾರೆ ಎಂದು ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್ ಜಾಲತಾಣದ ಮುಖ್ಯಸ್ಥ ಜಯರಾಂ ರಮೇಶ್ ಕೂಡ ಪೋಸ್ಟ್ ಮಾಡಿದ್ದು, ಪ್ರತಿಯೊಬ್ಬ ದೇಶಭಕ್ತ ಭಾರತೀಯರು ಉತ್ತರಗಳನ್ನು ಹುಡುಕಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರವು



**ಇಂಡಿಯಾ ಬ್ಲಾಕ್‌ನ ಅನೇಕ ನಾಯಕರು ಸುಪ್ರೀಂಕೋರ್ಟ್ ನ್ಯಾಯಾಧೀಶರ ಅವಲೋಕನಕ್ಕೆ ಅಸಮತಿ ವ್ಯಕ್ತಪಡಿಸಿದ್ದಾರೆ. ಇದು ಅನಗತ್ಯ, ಅಸಾಧಾರಣ ಹೇಳಿಕೆಯಾಗಿದೆ. ರಾಹುಲ್ ಗಾಂಧಿಯವರು ವಾಸ್ತವವನ್ನು ದೇಶದ ಜನತೆ ಮುಂದೆ ಇಟ್ಟಿದ್ದಾರೆ ಹೊರತು ದೇಶಕ್ಕಾಗಲೀ, ಸೈನಿಕರಿಗಾಗಲೀ ಅಪಮಾನ ಮಾಡುವ ಪ್ರಮೇಯವೇ ಇಲ್ಲ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ.**

ಡಿಡಿಎಲ್‌ಜೆ ನೀತಿಯನ್ನು ಅನುಸರಿಸುತ್ತದೆ. ನಿರಾಕರಿಸು, ಗಮನವನ್ನು ಬೇರೆಡೆ ಸೆಳೆ, ಸುಳ್ಳು ಹೇಳು ಮತ್ತು ಸಮರ್ಥಿಸು ಎಂಬುದು ಇದರ ಅರ್ಥ. ಕೇಂದ್ರ ಸರ್ಕಾರದ ನೀತಿಯೂ ಇದೇ ಆಗಿದೆ ಎಂದು ಕಿಡಿಕಾರಿದ್ದಾರೆ.

# ಅಸ್ಸಾಂನ ಎಸ್‌ಸಿಇಆರ್‌ಟಿಯಲ್ಲಿ ವಂಚನೆ

**ಗುವಾಹಟಿ :** ಅಸ್ಸಾಂನ ಎಸ್‌ಸಿಇಆರ್‌ಟಿಯಲ್ಲಿ ನಡೆದಿದೆ ಎನ್ನಲಾದ 105 ಕೋಟಿ ಮೊತ್ತದ ಹಗರಣಕ್ಕೆ ಸಂಬಂಧಿಸಿದಂತೆ ನಿವೃತ್ತ ಐಎಎಸ್ ಅಧಿಕಾರಿ ಸೇವಾಲಿ ದೇವಿ ಶರ್ಮಾಗೆ ಸಂಬಂಧಿಸಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ ಮಂಗಳವಾರ ಶೋಧ ನಡೆಸಿದೆ. ರಾಜ್ಯ ಶೈಕ್ಷಣಿಕ ಸಂಶೋಧನೆ, ತರಬೇತಿ ಮಂಡಳಿಯ ಮಾಜಿ ಕಾರ್ಯನಿರ್ವಾಹಕ ಅಧ್ಯಕ್ಷ, ನಿರ್ದೇಶಕರಾಗಿದ್ದ ಶರ್ಮಾ, ಅವರ ಆಪ್ತರ ಕನಿಷ್ಠ ಎಂಟು ಸ್ಥಳಗಳಲ್ಲಿ ಹಣ ಅಕ್ರಮ ವರ್ಗಾವಣೆ ತಡೆಗಟ್ಟುವಿಕೆ ಕಾಯ್ದೆ ಅಡಿ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಅಸ್ಸಾಂ ಸಿಎಂ ಅವರ ವಿಶೇಷ ಜಾಗೃತ ದಳದ ನಿರ್ದೇಶನದ ಮೇರೆಗೆ ರಾಜ್ಯ ಪೊಲೀಸರು 2023ರಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಪ್ರಕರಣ ದಾಖಲಾದ ಕೆಲವೇ ದಿನಗಳಲ್ಲಿ ಪೊಲೀಸರು ಶರ್ಮಾ ಅವರನ್ನು ರಾಜಸ್ಥಾನದಲ್ಲಿ ಬಂಧಿಸಿದ್ದರು.



ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕಳೆದ ಮಾರ್ಚ್‌ನಲ್ಲಿ ಶರ್ಮಾ ಅವರಿಗೆ ಜಾಮೀನು ನೀಡಿತ್ತು. ಶರ್ಮಾ ಅವರು 5.7 ಕೋಟಿ ಮೌಲ್ಯದ ಅಕ್ರಮ ಆಸ್ತಿ ಹೊಂದಿದ್ದಾರೆ ಎಂದು ದೂರಿ ಪೊಲೀಸರು ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎಸ್‌ಸಿಇಆರ್‌ಟಿಯಲ್ಲಿ 2017ರಿಂದ 20ರವರೆಗೆ ಅಧಿಕಾರದಲ್ಲಿದ್ದಾಗ ಶರ್ಮಾ ಹಲವು ಅಕ್ರಮ ಎಸಗಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದಾರೆ.

# ಇಡಿ ವಿಚಾರಣೆಗೆ ಹಾಜರಾದ ಅನಿಲ್ ಅಂಬಾನಿ

**ನವದೆಹಲಿ:** ರಿಲಯನ್ಸ್ ಗ್ರೂಪ್ ಅಧ್ಯಕ್ಷ ಅನಿಲ್ ಅಂಬಾನಿ ಅವರು ಇಂದು ಬಹು ಬ್ಯಾಂಕ್ ಸಾಲ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗಾಗಿ ಜಾರಿ ನಿರ್ದೇಶನಾಲಯದ ಮುಂದೆ ಹಾಜರಾದರು ಎಂದು ಅಧಿಕೃತ ಮೂಲಗಳು ತಿಳಿಸಿವೆ. ಬೆಳಿಗ್ಗೆ 11 ಗಂಟೆ ಸುಮಾರಿಗೆ ಕೇಂದ್ರ ದೆಹಲಿಯಲ್ಲಿರುವ ಕೇಂದ್ರ ತನಿಖಾ ಸಂಸ್ಥೆಯ ಕಚೇರಿಗೆ ಅವರು ಆಗಮಿಸಿದರು. ಇಡಿ 66 ವರ್ಷದ ಉದ್ಯಮಿಯ ಹೇಳಿಕೆಯನ್ನು ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ದಾಖಲಿಸಲಿದೆ. ಜುಲೈ 24 ರಂದು ಮುಂಬೈನಲ್ಲಿ 50 ಕಂಪನಿಗಳ 35 ಆವರಣದಲ್ಲಿ ಮತ್ತು ಅವರ ವ್ಯವಹಾರ ಗುಂಪಿನ ಕಾರ್ಯನಿರ್ವಾಹಕರು ಸೇರಿದಂತೆ 25 ಜನರ ಮೇಲೆ ಏಜೆನ್ಸಿ ಶೋಧ ನಡೆಸಿದ ನಂತರ ಅವರಿಗೆ ಸಮನ್ಸ್ ನೀಡಲಾಗಿತ್ತು. ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಸೇರಿದಂತೆ ಅನಿಲ್ ಅಂಬಾನಿಯ ಬಹು ಗ್ರೂಪ್ ಕಂಪನಿಗಳು ರೂ. 17,000 ಕೋಟಿಗೂ ಹೆಚ್ಚು ಮೊತ್ತದ ಹಣಕಾಸಿನ ಅಕ್ರಮಗಳು ಮತ್ತು ಸಾಮೂಹಿಕ ಸಾಲ ಮರುಪಾವತಿಗೆ ಸಂಬಂಧಿಸಿದೆ ಎಂದು ಆರೋಪಿಸಲಾಗಿದೆ. ಮೊದಲ ಆರೋಪವು ಯೆಸ್ ಬ್ಯಾಂಕ್ 2017, 2019 ರ ನಡುವೆ ಅಂಬಾನಿ ಗ್ರೂಪ್ ಕಂಪನಿಗಳಿಗೆ ನೀಡಿದ ಸುಮಾರು 3,000 ಕೋಟಿ ರೂ.ಗಳ ಅಕ್ರಮ ಸಾಲ ವರ್ಗಾವಣೆಗೆ ಸಂಬಂಧಿಸಿದೆ. ಸಾಲ ನೀಡುವ ಸ್ವಲ್ಪ ಮೊದಲು, ಯೆಸ್ ಬ್ಯಾಂಕ್ ಪ್ರವರ್ತಕರು ತಮ್ಮ ಕಂಪನಿಗಳಲ್ಲಿ ಹಣವನ್ನು ಸ್ವೀಕರಿಸಿದ್ದಾರೆ ಎಂದು ಇಡಿ ಶಂಕಿಸಿದೆ ಎಂದು ಮೂಲಗಳು ತಿಳಿಸಿವೆ.




ಈ ಹಣ ವರ್ಗಾವಣೆ ಪ್ರಕರಣವು ಕನಿಷ್ಠ ಎರಡು ಸಿಬಿಐ ಎಫ್‌ಐಆರ್‌ಗಳು, ರಾಷ್ಟ್ರೀಯ ವಸತಿ ಬ್ಯಾಂಕ್, ಸೆಬಿ, ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರ, ಬ್ಯಾಂಕ್ ಆಫ್ ಬರೋಡಾ ಇಡಿ ಜೊತೆ ಹಂಚಿಕೊಂಡ ವರದಿಗಳಿಂದ ಬಂದಿದೆ ಎಂದು ಅವರು ಹೇಳಿದ್ದರು. ಈ ವರದಿಗಳು, ಬ್ಯಾಂಕುಗಳು, ಷೇರುದಾರರು, ಹೂಡಿಕೆದಾರರು, ಇತರ ಸಾರ್ವಜನಿಕ ಸಂಸ್ಥೆಗಳನ್ನು ವಂಚಿಸುವ ಮೂಲಕ ಸಾರ್ವಜನಿಕ ಹಣವನ್ನು ಬೇರೆಡೆಗೆ ತಿರುಗಿಸಲು, ವಂಚಿಸಲು ಉತ್ತಮವಾಗಿ ಯೋಜಿಸಲಾದ, ಯೋಚಿಸಿದ ಯೋಜನೆ ಇತ್ತು ಎನ್ನಲಾಗಿದೆ.

## ಕ್ಷಣಾರ್ಧದಲ್ಲಿ ಸರ್ವನಾಶವಾದ ಧರಾಲಿ ಗ್ರಾಮದ ಜನವಸತಿ ಪ್ರದೇಶ; ಉಳಿದಿರುವುದು ಕೇವಲ ಅವಶೇಷ

# ಉತ್ತರಾಖಂಡದಲ್ಲಿ ಮತ್ತೆ ಭೀಕರ ಮೇಘಸ್ಫೋಟ

**ಡೆಹ್ರಾಡೂನ್:** ಉತ್ತರಾಖಂಡ ಪ್ರಾಕೃತಿಕ ಸಂಪನ್ಮೂಲಗಳಿಂದ ತುಂಬಿ ತುಳುಕುತ್ತಿರುವ ರಾಜ್ಯ. ಇಲ್ಲಿನ ಪ್ರಾಕೃತಿಕ ಸೌಂದರ್ಯ ಭಾರತದ ಆಧ್ಯಾತ್ಮದೊಂದಿಗೆ ಬೆರೆತಿದೆ. ಆದರೆ ಈ ರಾಜ್ಯ ಪದೇ ಪದೇ ಪ್ರಾಕೃತಿಕ ವಿಕೋಪಕ್ಕೂ ಗುರಿಯಾಗುತ್ತಿದ್ದು, ಮೇಘಸ್ಫೋಟ, ಭೂಕಂಪ, ಪ್ರವಾಹ ಮತ್ತಿತರ ನೈಸರ್ಗಿಕ ವಿಕೋಪಗಳು ಉತ್ತರಾಖಂಡ ರಾಜ್ಯವನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಇದಕ್ಕೆ ಪುಷ್ಟಿ ಎಂಬಂತೆ ಉತ್ತರಕಾಶಿಯ ಬಡ್ಕೋಟ್ ತಹಶೀಲ್ ಪ್ರದೇಶದ ಬನಾಲ್ ಪಟ್ಟಿಯಲ್ಲಿ, ಭಾರಿ ಮಳೆಯಿಂದಾಗಿ ಇಡೀ ಜನವಸತಿ ಪ್ರದೇಶವೊಂದು ಕ್ಷಣಾರ್ಧದಲ್ಲಿ ನಾಶವಾದ ಘಟನೆ ನಡೆದಿದೆ. ಮೇಘಸ್ಫೋಟದಿಂದಾಗಿ ಇಲ್ಲಿನ ಕೀರ್ ಗಂಗಾನದಿ ಉಕ್ಕಿ ಹರಿದಿದ್ದು, ನೀರು ಜನವಸತಿ ಪ್ರದೇಶಕ್ಕೆ ನುಗ್ಗಿ ಭಾರೀ ಹಾನಿಯನ್ನುಂಟು ಮಾಡಿದೆ. ಕಳೆದ ಜೂನ್‌ನಲ್ಲಿ ಇಲ್ಲಿನ ಬಾಲಿಘರ್‌ನಲ್ಲಿ ಮೇಘಸ್ಫೋಟ ಸಂಭವಿಸಿತ್ತು.



**ಕೊಚ್ಚಿ ಹೋಯ್ತು ಇಡೀ ಗ್ರಾಮ**

ಏಕಾಏಕಿ ಉಂಟಾದ ಪ್ರವಾಹದಿಂದ ಜನರು ಭಯಭೀತರಾಗಿದ್ದು, ಪ್ರಾಣ ಉಳಿಸಿಕೊಳ್ಳಲು ಸುರಕ್ಷಿತ ಪ್ರದೇಶಗಳತ್ತ ವಲಸೆ ಹೋಗಲಾರಂಭಿಸಿದ್ದಾರೆ. ಈ ಪ್ರವಾಹದಲ್ಲಿ 18ಕ್ಕೂ ಹೆಚ್ಚು ಕುರಿಗಳು ಕೊಚ್ಚಿಹೋಗಿದ್ದು, ಯಾವುದೇ ಮಾನವ ಪ್ರಾಣಹಾನಿ ಸಂಭವಿಸಿದ ಬಗ್ಗೆ ಇದುವರೆಗೂ ಮಾಹಿತಿ ಲಭ್ಯವಾಗಿಲ್ಲ. ಪ್ರವಾಹದಲ್ಲಿ ಧರಾಲಿ ಎಂಬ ಗ್ರಾಮ ಸಂಪೂರ್ಣವಾಗಿ ಕೊಚ್ಚಿಹೋಗಿದ್ದು, ಇಲ್ಲಿ ವಾಸಿಸುತ್ತಿದ್ದ ಜನರ ಸುರಕ್ಷತೆ ಬಗ್ಗೆ ಇನ್ನಷ್ಟೇ ಮಾಹಿತಿಗಳು ಲಭ್ಯವಾಗಬೇಕಿದೆ.

**ಮುಂದುವರೆಯಲಿದೆ ಮಳೆ:** ಹವಾಮಾನ ಇಲಾಖೆಯು ಆಗಸ್ಟ್ 10ರವರೆಗೆ ಉತ್ತರಕಾಶಿ ಪ್ರದೇಶದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿದೆ. ಈ ಕುರಿತು ಮಾಹಿತಿ ನೀಡಿರುವ ಹವಾಮಾನ ಇಲಾಖೆಯ ನಿರ್ದೇಶಕ ರೋಹಿತ್ ಥಪ್ಲಿಯಾಲ್, ರಾಜ್ಯದಲ್ಲಿ ಆಗಸ್ಟ್ 10ರವರೆಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ. ವಿಶೇಷವಾಗಿ ಪರ್ವತ ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಾಗಲಿದ್ದು, ಜನರು ಸುರಕ್ಷಿತ ಪ್ರದೇಶಗಳಿಗೆ ವಲಸೆ ಹೋಗಬೇಕು ಎಂದು ತಿಳಿಸಿದ್ದಾರೆ. ಉತ್ತರಾಖಂಡದನಲ್ಲಿ ಭಾರೀ ಮಳೆಯಿಂದಾಗಿ ತೀವ್ರ ಮಾನವ ಸಂಕಷ್ಟ ಎದುರಾಗಿದೆ. ಡೆಹ್ರಾಡೂನ್, ಪೌರಿ, ಟಿಹ್ರಿ, ಹರಿದ್ವಾರದಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಯಮುನೋತ್ರಿ ಹೆದ್ದಾರಿಯಲ್ಲಿ ರಸ್ತೆ ಕುಸಿತದಿಂದಾಗಿ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

### ಚಾರ್‌ಧಾಮ್ ಯಾತ್ರೆಗೆ ತೊಂದರೆ

**ಇನ್ನು ಭಾರೀ ಮಳೆ ಮತ್ತು ಮೇಘಸ್ಫೋಟದಿಂದಾಗಿ, ಚಾರ್‌ಧಾಮ್ ಯಾತ್ರೆಗೆ ತೊಂದರೆಯಾಗಿದೆ. ಯಮುನೋತ್ರಿ ಹೆದ್ದಾರಿ ಎರಡನೇ ದಿನವೂ ತೆರೆದಿಲ್ಲವಾದ್ದರಿಂದ ಚಾರ್‌ಧಾಮ್ ಯಾತ್ರಾರ್ಥಿಗಳು ತೊಂದರೆಗೆ ಸಿಲುಕಿದ್ದಾರೆ. ನದಿಗಳ ನೀರಿನ ಮಟ್ಟ ಹೆಚ್ಚಳವಾಗುತ್ತಿದ್ದು, ಹೆದ್ದಾರಿ ಕುಸಿದಿರುವ ಸ್ಥಳದಲ್ಲಿ ಸಣ್ಣ ವಾಹನಗಳನ್ನು ಸಾಗಿಸಲು ಪ್ರಯತ್ನಿಸಲಾಗುವುದು ಎಂದು ಬಾರ್ಡರ್ ರೋಡ್ ಆರ್ಗನೈಸೇಷನ್ (ಬಿಆರ್‌ಒ) ಮಾಹಿತಿ ನೀಡಿದೆ.**

ಭಾರೀ ಮಳೆಯಿಂದಾಗಿ ಯಮುನೋತ್ರಿ ಹೆದ್ದಾರಿಯಲ್ಲಿ ಎರಡನೇ ದಿನವೂ ಸಂಚಾರ ಆರಂಭವಾಗಿಲ್ಲ. ಸ್ಯಾನಾ ಚಟ್ಟಿ ಬಳಿ ರಸ್ತೆಯು ಕುಸಿದಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯುಂಟಾಗಿದೆ. ಹೆದ್ದಾರಿಯನ್ನು ಸರಿಪಡಿಸಲು ಪ್ರಯತ್ನಗಳು ಮುಂದುವರೆದಿವೆಯಾದರೂ, ನಿರಂತರ ಮಳೆ ಇದಕ್ಕೆ ಅಡ್ಡಿಯನ್ನುಂಟು ಮಾಡುತ್ತಿದೆ. ಕಳೆದ ಜುಲೈನಲ್ಲಿ ಹಿಮಾಚಲ ಪ್ರದೇಶ ಮೇಘಸ್ಫೋಟ ಕೂಡ ಭಾರೀ ಅವಾಂತರ ಸೃಷ್ಟಿಸಿತ್ತು. ಉತ್ತರಕಾಶಿ ಜಿಲ್ಲೆಯಲ್ಲಿ ರಾತ್ರಿಯಿಂದ ಮಳೆಯಾಗುತ್ತಿದೆ. ಸ್ಯಾನಾಚಟ್ಟಿ ಬಳಿ ಯಮುನೋತ್ರಿ ಹೆದ್ದಾರಿಯ ಸುಮಾರು 25 ಮೀಟರ್ ಭಾಗ ಕುಸಿದಿದೆ. ಓಜ್ರಿ, ಡಾಬರ್‌ಕೋಟ್‌ನಲ್ಲೂ ಮಳೆಯ ಪರಿಣಾಮಗಳು ಗೋಚರವಾಗುತ್ತಿವೆ. ಸ್ಯಾನಾಚಟ್ಟಿಯ ಒಂದು ಬದಿಯಲ್ಲಿರುವ ಬೆಟ್ಟದಿಂದ ಬಂಡೆಗಳು ಉರುಳುತ್ತಿದ್ದು, ವಾಹನ ಸಂಚಾರಕ್ಕೆ ಭಾರೀ ಅಪಾಯ ತಂದೊಡ್ಡಿದೆ. ಅದೇ ರೀತಿ ಗಂಗೋತ್ರಿ ಹೆದ್ದಾರಿಯಲ್ಲಿಯೂ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಹಲವು ಕಡೆಗಳಲ್ಲಿ ರಸ್ತೆ ಸಂಪೂರ್ಣ ಬಂದ್ ಆಗಿದೆ. ಈ ವೇಳೆ ಕೇದಾರನಾಥ್ ಯಾತ್ರೆಗೆ ಹೊರಟಿದ್ದ ಅನೇಕ ಕನ್ನಡಿಗರು ಪ್ರವಾಹದಲ್ಲಿ ಭೀಕರ ಪ್ರವಾಹದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದರು. ಆಗ ಕರ್ನಾಟಕ ಸರ್ಕಾರದ ಮೂಲ ಸೌಕರ್ಯ ಸಚಿವರಾಗಿದ್ದ ಸಂತೋಷ್ ಲಾಡ್, ಉತ್ತರಾಖಂಡಕ್ಕೆ ತೆರಳಿ ಎಲ್ಲಾ ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರುವಲ್ಲಿ ಮಹತ್ತರವಾದ ಪಾತ್ರ ನಿರ್ವಹಿಸಿದ್ದರು. ಅದೇ ರೀತಿ 2022ರಲ್ಲಿ ಜಮ್ಮು ಮತ್ತು ಕಾಶ್ಮೀರದ ಅಮರನಾಥ್ ಯಾತ್ರೆ ಸಂದರ್ಭದಲ್ಲಿ ಮೇಘಸ್ಫೋಟ ಸಂಭವಿಸಿದ್ದಾಗಲೂ, ಕರ್ನಾಟಕ ಸರ್ಕಾರ ಕನ್ನಡಿಗರ ರಕ್ಷಣೆಗಾಗಿ ಸಹಾಯವಾಣಿ ತೆರೆದಿದ್ದನ್ನು ಇಲ್ಲಿ ಸ್ಮರಿಸಬಹುದು.

### ನಿರಂತರ ಪ್ರಾಕೃತಿಕ ವಿಕೋಪಗಳು

**ಉತ್ತರಾಖಂಡ ರಾಜ್ಯಕ್ಕೂ ಪ್ರಾಕೃತಿಕ ವಿಕೋಪಗಳಿಗೂ ಅವಿನಾಭಾವ ಸಂಬಂಧ. ಇಲ್ಲಿನ ಭೂಪ್ರದೇಶವೇ ನೈಸರ್ಗಿಕ ವಿಕೋಪಗಳನ್ನು ಆಮಂತ್ರಿಸುವಂತಿದೆ. 2013ರಲ್ಲಿ ಕೇದಾರನಾಥ್ ಬಳಿ ಸಂಭವಿಸಿದ ಭೀಕರ ಮೇಘಸ್ಫೋಟದಿಂದಾಗಿ ಮಂದಾಕಿನಿ ನದಿಯಲ್ಲಿ ಪ್ರವಾಹ ಉಂಟಾಗಿತ್ತು.**

## ಮಿನಿ ನ್ಯೂಸ್

### ಭಾರತ ಮೂಲದ ಟ್ಯಾಕ್ಸಿ ಚಾಲಕನ ಮೇಲೆ ಹಲ್ಲೆ

**ಲಂಡನ್:** ಐರ್ಲೆಂಡ್‌ನ ರಾಜಧಾನಿ ಡಬ್ಲಿನ್‌ನಲ್ಲಿ ಭಾರತೀಯ ಮೂಲದ ಟ್ಯಾಕ್ಸಿ ಚಾಲಕನ ಮೇಲೆ ಇಬ್ಬರು ಯುವಕರು ಹಲ್ಲೆ ನಡೆಸಿದ್ದಾರೆ. ಐರ್ಲೆಂಡ್‌ನಲ್ಲಿ 23 ವರ್ಷಗಳಿಂದ ವಾಸವಿರುವ ಲಖ್ವೀರ್ ಸಿಂಗ್ (40) ಅವರು 20ರ ಹರೆಯದ ಇಬ್ಬರು ಯುವಕರನ್ನು ರಾತ್ರಿ ಕಾರಿನಲ್ಲಿ ಕೂರಿಸಿಕೊಂಡು ಬ್ಯಾಲಿಮುನ್ ಉಪನಗರದಲ್ಲಿರುವ ಪಾಪಿನ್ ಬಳಿ ಬಿಟ್ಟಿದ್ದರು. ಈ ವೇಳೆ, ಕಾರಿನ ಬಾಗಿಲು ತೆಗೆದ ಯುವಕರು ಸಿಂಗ್ ಅವರ ತಲೆಗೆ ಬಾಟಲಿಯಿಂದ ಎರಡು ಬಾರಿ ಹೊಡೆದಿದ್ದಾರೆ. ಅವರು, ಅಲ್ಲಿಂದ ಓಡಿ ಹೋಗುವ ವೇಳೆ, ನಿಮ್ಮ ಸ್ವಂತ ದೇಶಕ್ಕೆ ವಾಪಸ್ ಹೋಗು ಎಂದು ಕೂಗಿದ್ದಾರೆ.

ಕಳೆದ 10 ವರ್ಷಗಳಲ್ಲಿ ಇಂತಹ ಘಟನೆಯನ್ನು ಕಂಡಿಲ್ಲ. ಈ ಘಟನೆ ನನ್ನಲ್ಲಿ ಭಯ ಹುಟ್ಟಿಸಿದೆ. ಮಕ್ಕಳು ಸಹ ಆತಂಕಗೊಂಡಿದ್ದಾರೆ' ಎಂದು ಲಖ್ವೀರ್ ಸಿಂಗ್ ಅಳಲು ತೋಡಿಕೊಂಡಿದ್ದಾರೆ. ಬ್ಯೂಮಾಂಟ್ ಆಸ್ಪತ್ರೆಯಲ್ಲಿ ಸಿಂಗ್ ಅವರಿಗೆ ಚಿಕಿತ್ಸೆ ಕೊಡಿಸಿದ್ದು, ಪ್ರಾಣಕ್ಕೆ ಯಾವುದೇ ತೊಂದರೆಯಿಲ್ಲ. ಆರೋಪಿಗಳ ಪತ್ತೆಗೆ ಕ್ರಮ ವಹಿಸಲಾಗಿದೆ' ಎಂದು ಡಬ್ಲಿನ್ ಪೊಲೀಸ್ ವಕ್ತಾರ ತಿಳಿಸಿದ್ದಾರೆ.

### ರಷ್ಯಾದ ಡ್ರೋನ್‌ಗಳಲ್ಲಿ ಭಾರತದ ಬಿಡಿಭಾಗಗಳು ಪತ್ತೆಯಾಗಿವೆ: ಉಕ್ರೇನ್

**ಕೀವ್:** ನಮ್ಮ ದೇಶದ ಮೇಲಿನ ದಾಳಿಗೆ ಬಳಸಲಾದ ರಷ್ಯಾದ ಡ್ರೋನ್‌ಗಳಲ್ಲಿ ಭಾರತದ ಬಿಡಿಭಾಗಗಳು ಪತ್ತೆಯಾಗಿವೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿಯ ಸಿಬ್ಬಂದಿ ಮುಖ್ಯಸ್ಥ ಆಂಡ್ರಿ ಯರ್ಮಾಕ್ ತಿಳಿಸಿದ್ದಾರೆ. ರಷ್ಯಾವು ಈ ಡ್ರೋನ್‌ಗಳನ್ನು ನಾಗರಿಕರ ವಿರುದ್ಧದ ದಾಳಿಗಳಲ್ಲಿ ಬಳಸಿದೆ ಎಂದು ಯೆರ್ಮಾಕ್ ಹೇಳಿದ್ದಾರೆ. ಈಚೆಗೆ ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ಭಾರತವು ಪರಿಣಾಮಕಾರಿಯಾಗಿ ಹಣಕಾಸು ಒದಗಿಸುತ್ತಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅತ್ಯಂತ ನಿಕಟವರ್ತಿ ಆರೋಪಿಸಿದ್ದರು. ಭಾರತವು ಮಾಸ್ಕೋದಿಂದ ತೈಲ ಖರೀದಿಸುವ ಮೂಲಕ ರಷ್ಯಾಕ್ಕೆ ಹಣಕಾಸು ಒದಗಿಸುತ್ತಿದೆ ಎಂದು ಅವರು ದೂರಿದ್ದರು.

ರಷ್ಯಾದಿಂದ ತೈಲ ಖರೀದಿ ವಿಷಯದಲ್ಲಿ ಭಾರತವು ಚೀನಾದ ಜತೆಗೆ ಸಂಬಂಧ ಹೊಂದಿದೆ ಎಂಬುದು ಆಘಾತಕಾರಿ, ಆಶ್ಚರ್ಯದ ಸಂಗತಿ ಎಂದು ಶ್ವೇತಭವನದ ಉಪ ಮುಖ್ಯಸ್ಥ, ಟ್ರಂಪ್ ಅವರ ನಿಕಟವರ್ತಿಯೂ ಆದ ಸ್ಟೀಫನ್ ಮಿಲ್ಲರ್ ತಿಳಿಸಿದ್ದರು. ರಷ್ಯಾದಿಂದ ತೈಲ ಖರೀದಿ ಮಾಡುವುದನ್ನು ಭಾರತ ಮುಂದುವರಿಸುವುದು ಸ್ವೀಕಾರಾರ್ಹವಲ್ಲ ಎಂದು ಟ್ರಂಪ್ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎಂದೂ ಅವರು ಹೇಳಿದ್ದರು. ಮಿಲ್ಲರ್ ಅವರ ಹೇಳಿಕೆ ಕುರಿತು, ವಾಷಿಂಗ್ಟನ್‌ನಲ್ಲಿ ಇರುವ ಭಾರತೀಯ ರಾಯಭಾರ ಕಚೇರಿಯಿಂದ ತಕ್ಷಣದ ಪ್ರತಿಕ್ರಿಯೆ ಬಂದಿರಲಿಲ್ಲ.

### ಗಂಗೆ ನಿಮ್ಮ ಪಾದ ತೊಳೆಯಲು ಬಂದಿದ್ದಾಳೆ: ಸಚಿವ

**ಲಖನೌ:** ಗಂಗಾ ಮಾತೆ ನಿಮ್ಮ ಪಾದ ತೊಳೆಯಲೆಂದೇ ಬಂದಿದ್ದಾಳೆ. ಮಾತೆಯ ದರ್ಶನ ಮಾತ್ರದಿಂದ ನೀವು ನೇರವಾಗಿ ಸ್ವರ್ಗಕ್ಕೆ ಹೋಗುವಿರಿ. ಆದರೆ, ವಿರೋಧ ಪಕ್ಷಗಳ ನಾಯಕರು ನಿಮಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಉತ್ತರ ಪ್ರದೇಶ ಸಚಿವ ಸಂಜಯ ನಿಶಾದ್ ಅವರು, ಕಾನ್ಪುರ ಗ್ರಾಮಾಂತರ ಜಿಲ್ಲೆಯ ಭೋಗಿನಿಪುರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ವೇಳೆ ಹೇಳಿರುವ ಮಾತುಗಳಿವು. ಪ್ರವಾಹದಿಂದಾಗಿ ನಮ್ಮ ಮನೆಗಳು ನಾಶವಾಗಿವೆ. ಎಲ್ಲಿಗೆ ಹೋಗಬೇಕು ಎಂಬುದು ತಿಳಿಯದೆ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ದೂರಿದ ಸಂತ್ರಸ್ತರನ್ನು ಉದ್ದೇಶಿಸಿ ಅವರು ಈ ಮಾತು ಹೇಳಿದ್ದಾರೆ. ಗಂಗಾ ಮಾತೆ ತನ್ನ ಪುತ್ರರ ಪಾದಗಳನ್ನು ತೊಳೆಯುವುದಕ್ಕಾಗಿ ಬರುತ್ತಾಳೆ. ಆಕೆಯ ದರ್ಶನದಿಂದ ಪುತ್ರರೆಲ್ಲಾ ಸ್ವರ್ಗಕ್ಕೆ ಹೋಗುತ್ತಾರೆ ಎಂದೂ ಸಚಿವ ನಿಶಾದ್ ಹೇಳಿದ್ದಾರೆ. ಸಚಿವರ ಈ ಮಾತುಗಳಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಸಂಜಯ ಅವರು ನಿಶಾದ್ ಪಕ್ಷದ ಅಧ್ಯಕ್ಷ. ಈ ಪಕ್ಷ ಆಡಳಿತಾರೂಢ ಬಿಜೆಪಿಯ ಮಿತ್ರಪಕ್ಷವೂ ಆಗಿದೆ. ನಂತರ ಅವರು ಪ್ರವಾಹ ಸಂತ್ರಸ್ತರಿಗೆ ಪರಿಹಾರ ಸಾಮಗ್ರಿಗಳನ್ನು ವಿತರಿಸಿದರು. ಸಚಿವರ ಮಾತುಗಳಿಂದ ಪ್ರವಾಹಪೀಡಿತ ಜನರು ಅಚ್ಚರಿಗೊಳಗಾಗಿದರು. ತಾವು ಭೇಟಿ ನೀಡಿದ್ದ ಗ್ರಾಮಗಳು ಗಂಗಾ ನದಿ ತೀರದಲ್ಲಿ ಅಲ್ಲ, ಯಮುನಾ ನದಿ ತೀರದಲ್ಲಿನವು ಎಂಬ ಬಗ್ಗೆ ಸಚಿವರಿಗೆ ಮಾಹಿತಿ ಇರಲಿಲ್ಲ ಎಂದು ಗ್ರಾಮಸ್ಥರು ನಂತರ ಹೇಳಿದ್ದಾರೆ.

**ಭಾರಿ ಮಳೆ:** 17 ಜಿಲ್ಲೆಗಳ 402 ಗ್ರಾಮಗಳು ಪ್ರವಾಹ ಪೀಡಿತ ಗಂಗಾ, ಯಮುನಾ ಸೇರಿ ಪ್ರಮುಖ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ

### ಭವಾನಿ ನದಿ ತೀರದಲ್ಲಿ ಪ್ರವಾಹ ಭೀತಿ; ಎಚ್ಚರಿಕೆ ನೀಡಿದ ತ. ಸರ್ಕಾರ



**ಕೊಯಮತ್ತೂರು:** ತಮಿಳುನಾಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗುತ್ತಿರುವುದರಿಂದ ಕೊಯಮತ್ತೂರು, ನೀಲಗಿರಿ ಜಿಲ್ಲೆಗಳ ವಿವಿಧ ಅಣೆಕಟ್ಟುಗಳಿಂದ ಹೆಚ್ಚಿನ ಪ್ರಮಾಣದ ಹೆಚ್ಚುವರಿ ನೀರನ್ನು ಭವಾನಿ ನದಿಗೆ ಬಿಡಲಾಗುವುದೆಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಭವಾನಿ ನದಿಯ ಸುತ್ತಾಮುತ್ತಲಿನ ಸತ್ಯಮಂಗಲಂ, ಗೋಬಿಚೆಟ್ಟಿಪಾಳ್ಯಂ ಗ್ರಾಮದ ಜನರಿಗೆ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮವಾಗಿ ತಮ್ಮ ಜಾನುವಾರುಗಳೊಂದಿಗೆ ಸುರಕ್ಷಿತ ತಾಣಗಳಲ್ಲಿ ನೆಲೆಸಲು ಈಗಾಗಲೇ ಸೂಚಿಸಲಾಗಿದೆ.

ಅಣೆಕಟ್ಟುಗೆ 6,937 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಆ ಸಮಯದಲ್ಲಿ ನೀರಿನ ಮಟ್ಟ 101.71 ಅಡಿ, ಸಂಗ್ರಹ 30.08 ಟಿಎಂಸಿ ಇತ್ತು. ನೀರಿನ ಒಳಹರಿವು, ಸಂಗ್ರಹದಲ್ಲಿ ತಕ್ಷಣದ ಹೆಚ್ಚಳ ಸಂಭವಿಸಬಹುದು, ಸತ್ಯಮಂಗಲಂ ಮತ್ತು ಗೋಬಿಚೆಟ್ಟಿಪಾಳ್ಯಂ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ 1,500 ಕ್ಯೂಸೆಕ್‌ಗಳನ್ನು ಎಲ್‌ಬಿಪಿ ಕಾಲುವೆಗೆ, 800 ಕ್ಯೂಸೆಕ್‌ಗಳನ್ನು ತಡಪಲ್ಲಿ ಮತ್ತು ಅರಕ್ಕನ್ ಕೊಟ್ಟೆ ಕಾಲುವೆಗಳಿಗೆ, 400 ಕ್ಯೂಸೆಕ್‌ಗಳನ್ನು ಕಾಳಿಂಗರಾಯನ್ ಕಾಲುವೆಗೆ ಮತ್ತು 100 ಕ್ಯೂಸೆಕ್‌ಗಳನ್ನು ಭವಾನಿ ನದಿಗೆ ಬಿಡಲಾಗಿದೆ.

# 'ಕೂಲಿ' ಸಿನಿಮಾದ ಆ ಪಾತ್ರದಲ್ಲಿ ನಟಿಸುವ ಆಸೆಯಿತ್ತು ರಜನೀಕಾಂತ್‌ಗೆ

ರಜನೀಕಾಂತ್ ನಟನೆಯ 'ಕೂಲಿ' ಸಿನಿಮಾ ಆಗಸ್ಟ್ 14 ರಂದು ಬಿಡುಗಡೆ ಆಗಲಿದೆ. ಸಿನಿಮಾನಲ್ಲಿ ಹಲವು ಸ್ಟಾರ್ ನಟರು ನಟಿಸಿದ್ದಾರೆ. ರಜನೀಕಾಂತ್ ಸಿನಿಮಾದ ನಾಯಕ. ಆದರೆ ರಜನೀಕಾಂತ್‌ಗೆ ನಾಯಕ ಪಾತ್ರಕ್ಕಿಂತಲೂ ಬೇರೊಂದು ಪಾತ್ರದಲ್ಲಿ ನಟಿಸುವ ಆಸೆ ಇತ್ತಂತೆ. ಆದರೆ ಆ ಪಾತ್ರದಲ್ಲಿ ನಟಿಸಿರುವುದು ಯಾರು ರಜನೀಕಾಂತ್ ನಟನೆಯ 'ಕೂಲಿ' ಸಿನಿಮಾ ಇನ್ನು ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಸಿನಿಮಾದ ಪ್ರಚಾರ ಬಲು ಜೋರಾಗಿ ನಡೆಯುತ್ತಿದೆ. ಇತ್ತೀಚೆಗೆ ಚೆನ್ನೈನ ನೆಹರು ಸ್ಟೇಡಿಯಂನಲ್ಲಿ ಅದ್ದೂರಿ ಕಾರ್ಯಕ್ರಮ ನಡೆದಿದೆ. ನಟ ರಜನೀಕಾಂತ್ 'ಕೂಲಿ' ಸಿನಿಮಾನಲ್ಲಿ ದೇವ ಹೆಸರಿನ ಪಾತ್ರದಲ್ಲಿ ನಟಿಸುತ್ತಿದ್ದಾರೆ.

**ಆ ಪಾತ್ರ ಅಷ್ಟು ಅದ್ಭುತ**



ಆದರೆ ರಜನೀಕಾಂತ್‌ಗೆ ದೇವ ಪಾತ್ರಕ್ಕಿಂತಲೂ ಸಿನಿಮಾದ ಮತ್ತೊಂದು ಪಾತ್ರದಲ್ಲಿ ನಟಿಸುವ ಆಸೆಯಿತ್ತಂತೆ. ಈ ಬಗ್ಗೆ ಅವರೇ ಹೇಳಿಕೊಂಡಿದ್ದಾರೆ. 'ಕೂಲಿ' ಸಿನಿಮಾನಲ್ಲಿ ರಜನೀಕಾಂತ್ ಸೇರಿದಂತೆ ಹಲವು ಸ್ಟಾರ್ ನಟ-ನಟಿಯರು ನಟಿಸಿದ್ದಾರೆ.

ಸಿನಿಮಾದಲ್ಲಿ ಅಕ್ಕಿನೇನಿ ನಾಗಾರ್ಜುನ ಸಹ ನಟಿಸಿದ್ದು, ಅವರು ನಟಿಸಿರುವ ಪಾತ್ರವಾದ ಸೈಮನ್ ಪಾತ್ರದಲ್ಲಿ ನಟಿಸುವ ಆಸೆ ರಜನೀಕಾಂತ್‌ಗೆ ಇತ್ತಂತೆ. ಆ ಬಗ್ಗೆ ನಿರ್ದೇಶಕ ಲೋಕೇಶ್ ಕನಗರಾಜ್ ಬಳಿ ಕೇಳಿಯೂ ಇದ್ದರಂತೆ ಆದರೆ ಕನಗರಾಜ್ ಒಪ್ಪಲಿಲ್ಲವಂತೆ.

ತೆಲುಗು ಪ್ರೇಕ್ಷಕರಿಗಾಗಿ ಬಿಡುಗಡೆ ಮಾಡಿರುವ ವಿಡಿಯೋನಲ್ಲಿ ಮಾತನಾಡಿರುವ ನಟ ರಜನೀಕಾಂತ್, 'ಕಿಂಗ್ ಅಕ್ಕಿನೇನಿ ನಾಗಾರ್ಜುನ 'ಸೈಮನ್' ಹೆಸರಿನ ವಿಲನ್ ಪಾತ್ರದಲ್ಲಿ ನಟಿಸಿದ್ದಾರೆ. ಅಸಲಿಗೆ ಆ ಪಾತ್ರದಲ್ಲಿ ನಾನು ನಟಿಸಬೇಕು ಎಂದುಕೊಂಡಿದ್ದೆ. ಏಕೆಂದರೆ ಆ ಪಾತ್ರ ಅಷ್ಟು ಅದ್ಭುತವಾಗಿದೆ.





# ಹೊಸ ದಾಖಲೆ ಬರೆದ ಮಹಾವತಾರ ನರಸಿಂಹ

ಹೊಂಬಾಳೆ ಫಿಲಮ್ಸ್ ಪ್ರಸ್ತುತಪಡಿಸಿರುವ ಅನಿಮೇಷನ್ ಸಿನಿಮಾ 'ಮಹಾವತಾರ ನರಸಿಂಹ' ಬಾಕ್ಸ್ ಆಫೀಸ್‌ನಲ್ಲಿ ದಾಖಲೆಗಳನ್ನು ಬರೆದಿದೆ. ಅತ್ಯಂತ ಕಡಿಮೆ ಬಜೆಟ್‌ನಲ್ಲಿ ನಿರ್ಮಾಣಗೊಂಡ ಈ ಸಿನಿಮಾ 100 ಕೋಟಿ ಕಲೆಕ್ಷನ್ ಅನ್ನು ದಾಟಿದೆ. ಅಷ್ಟಕ್ಕೂ ಈ ಸಿನಿಮಾದ ಬಜೆಟ್ ಎಷ್ಟು, ಎಷ್ಟು ಪಟ್ಟು ಲಾಭವನ್ನು ಈ ಸಿನಿಮಾ ಮಾಡಿದೆ. 'ಕೆಜಿಎಫ್', 'ಕೆಜಿಎಫ್ 2' 'ಸಲಾರ್' ಅಂಥಹಾ ಭಾರಿ ಬಜೆಟ್ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಹೊಂಬಾಳೆ ಫಿಲಮ್ಸ್ ಇತ್ತೀಚೆಗಷ್ಟೆ ಸಣ್ಣ ಬಜೆಟ್‌ನ ಸಿನಿಮಾ ಒಂದನ್ನು ಪ್ರಸ್ತುತಪಡಿಸಿತು. ಸಿನಿಮಾದ ಹೆಸರು 'ಮಹಾವತಾರ ನರಸಿಂಹ'. ಅನಿಮೇಷನ್ ಸಿನಿಮಾ ಆಗಿದ್ದ ಇದನ್ನು ಹೊಂಬಾಳೆ ಪ್ರಸ್ತುತ ಪಡಿಸುವ ಜೊತೆಗೆ ದೇಶದಾದ್ಯಂತ ಬಿಡುಗಡೆ ಸಹ ಮಾಡಿತು. ಕೆಲವು ದೊಡ್ಡ ಸಿನಿಮಾಗಳ ಜೊತೆಗೆ ಬಿಡುಗಡೆ ಆದ ಈ ಸಿನಿಮಾ 'ಕಿಂಗ್ಡಮ್', 'ಸು ಫ್ರಂ ಸೋ', 'ಎಕ್ಕ', 'ಜೂನಿಯರ್' 'ಎಫ್1', 'ಜುರಾಸಿಕ್ ವರ್ಲ್ಡ್' ಎಲ್ಲಾ ಸಿನಿಮಾಗಳೊಟ್ಟಿಗೆ ಹೋರಾಡಿ ಬಾಕ್ಸ್ ಆಫೀಸ್‌ನಲ್ಲಿ ಭಾರಿ ಜಯ ಗಳಿಸಿದೆ. ಅಷ್ಟು ಮಾತ್ರವೇ ಅಲ್ಲದೆ ಭಾರತದ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆಯನ್ನೇ ಬರೆದಿದೆ. 'ಮಹಾವತಾರ ನರಸಿಂಹ' ಸಿನಿಮಾದ ಶಕ್ತಿಯನ್ನು ಅರಿತ ಹೊಂಬಾಳೆ ಆ ಸಿನಿಮಾವನ್ನು ಪ್ರಸ್ತುತ ಪಡಿಸಿ, ಪ್ರಚಾರ ಮಾಡಿಸಿ, ಸಿನಿಮಾವನ್ನು ಸರಿಯಾದ ಸಮಯಕ್ಕೆ, ಸರಿಯಾದ ಸ್ಥಳಗಳಲ್ಲಿ ಬಿಡುಗಡೆ ಮಾಡಿಸಿದ ಪರಿಣಾಮ ಇಂದು ಈ ಸಿನಿಮಾ 100 ಕೋಟಿ ಕ್ಲಬ್ ಸೇರಿಕೊಂಡಿದೆ! ಹೌದು, 'ಮಹಾವತಾರ್ ನರಸಿಂಹ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ 100 ಕೋಟಿ ರೂಪಾಯಿ ಹಣ ಗಳಿಕೆ ಮಾಡಿದೆ. ಭಾರತೀಯ ಅನಿಮೇಷನ್ ಸಿನಿಮಾ ಒಂದು ಬಾಕ್ಸ್ ಆಫೀಸ್‌ನಲ್ಲಿ 100 ಕೋಟಿ ರೂಪಾಯಿ ಬಾಚಿರುವುದು ಇದೇ ಮೊದಲು. ಭಾರತದಲ್ಲಿ ಹಾಲಿವುಡ್‌ನ ಅನಿಮೇಷನ್ ಸಿನಿಮಾಗಳು ಸಹ 100 ಕೋಟಿ ಬಾಚಿರಲಿಲ್ಲ. 'ಮಹಾವತಾರ್ ನರಸಿಂಹ' ಸಿನಿಮಾದ ನಿರ್ಮಾಣ ವೆಚ್ಚ ಒಂದು ಕೋಟಿಗೂ ಕಡಿಮೆ. ಕೆಲ ಮೂಲಗಳ ಪ್ರಕಾರ ಸಿನಿಮಾದ ನಿರ್ಮಾಣಕ್ಕೆ ಖರ್ಚಾಗಿರುವದು ಕೇವಲ 80 ಲಕ್ಷ ರೂಪಾಯಿಗಳು.

# ಹಿಂದಿಗೆ ರಿಮೇಕ್ ಆಗಲಿದೆ 'ಸು ಫ್ರಮ್ ಸೋ'



**ಸಿಹಿ ಸುದ್ದಿ ನೀಡಿದ ರಾಜ್ ಬಿ. ಶೆಟ್ಟಿ**

ಬಾಕ್ಸ್ ಆಫೀಸ್‌ನಲ್ಲಿ 'ಸು ಫ್ರಮ್ ಸೋ' ಸಿನಿಮಾ ಧೂಳೆಬ್ಬಿಸಿದೆ. ಪರಭಾಷೆ ಮಂದಿ ಕೂಡ ಫಿದಾ ಆಗಿದ್ದಾರೆ. ಕನ್ನಡದ ಈ ಚಿತ್ರವನ್ನು ಹಿಂದಿಯಲ್ಲಿ ರಿಮೇಕ್ ಮಾಡಲು ಆಫರ್ ಬಂದಿದೆ ಎಂಬುದು ಖುಷಿಯ ವಿಚಾರ. ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ರಾಜ್ ಬಿ. ಶೆಟ್ಟಿ ಅವರು ಹಿಂದಿ ರಿಮೇಕ್ ಕುರಿತು ಮಾತಾಡಿದ್ದಾರೆ. ಜೆ.ಪಿ. ತುಮಿನಾಡು, ಸಂಧ್ಯಾ ಅರಕೆರೆ, ರಾಜ್ ಬಿ. ಶೆಟ್ಟಿ, ಶನೀಲ್ ಗೌತಮ್ ಮುಂತಾದವರು ನಟಿಸಿರುವ 'ಸು ಫ್ರಮ್ ಸೋ' ಸಿನಿಮಾ ಸೂಪರ್ ಹಿಟ್ ಆಗಿದೆ. ಪರಭಾಷೆಯ ಮಂದಿ ಕೂಡ ಈ ಸಿನಿಮಾವನ್ನು ಮೆಚ್ಚಿಕೊಂಡಿದ್ದಾರೆ. ನಟ ರಾಜ್ ಬಿ. ಶೆಟ್ಟಿ ಅವರು ಈ ಸಿನಿಮಾದ ನಿರ್ಮಾಣದಲ್ಲಿ ಪಾಲುದಾರಿಕೆ ಹೊಂದಿದ್ದಾರೆ. ಚಿತ್ರಮಂದಿರದಲ್ಲಿ 'ಸು ಫ್ರಮ್ ಸೋ' ಸಿನಿಮಾ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ. ಅದರ ಜೊತೆ ಹಿಂದಿಯಲ್ಲಿ ರಿಮೇಕ್ ಮಾಡಲು ಆಫರ್ ಬಂದಿದೆ. ಆ ಬಗ್ಗೆ ರಾಜ್ ಬಿ. ಶೆಟ್ಟಿ ಅವರು ಮಾಹಿತಿ ಹಂಚಿಕೊಂಡಿದ್ದಾರೆ. 'ದಿ ಹಾಲಿವುಡ್ ರಿಪೋರ್ಟರ್ ಇಂಡಿಯಾ' ನಡೆಸಿದ ಸಂದರ್ಶನದಲ್ಲಿ ರಾಜ್ ಬಿ. ಶೆಟ್ಟಿ ಅವರು ಅನೇಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ. 'ಸು ಫ್ರಮ್ ಸೋ' ಸಿನಿಮಾಗೆ ಹಿಂದಿಯಿಂದ ರಿಮೇಕ್ ಆಫರ್ ಬಂದಿದೆ ಎಂಬುದನ್ನು ಅವರು ತಿಳಿಸಿದ್ದಾರೆ. ಹಿಂದಿ ಭಾಷೆಯಲ್ಲಿ ಈ ಸಿನಿಮಾ ಹೇಗೆ ಮೂಡಿಬರಬಹುದು ಎಂಬ ಕುತೂಹಲ ಕೂಡ ಅವರಿಗೆ ಇದೆ. 'ಹಿಂದಿ ರಿಮೇಕ್ ಆಫರ್ ಬಂದಿದೆ. ಅವರು ಹೇಗೆ ಸಿನಿಮಾ ಮಾಡುತ್ತಾರೆ ಅಂತ ನನಗೆ ತುಂಬಾ ಕುತೂಹಲ ಇದೆ. ಇದು ಯಾವಾಗಲೂ ಕಲಿಕೆಯ ಪ್ರಕ್ರಿಯೆ. ಇದು ಒಂದು ಪ್ರದೇಶದಲ್ಲಿ ಬೇರೂರಿರುವ ಕಥೆ. ಅಂತಹ ಸಿನಿಮಾಗಳನ್ನೇ ನಾವು ಯಾವಾಗಲೂ ಮಾಡುವುದು. ಯಾಕೆಂದರೆ ಅದು ನಾವು ನೋಡಿರುವ ಜಗತ್ತು. ನಾವು ಬದುಕಿರುವ ಜಗತ್ತು.

# ರೊನಾಲ್ಡೊವನ್ನು ಹಿಂದಿಕ್ಕಿದ ದೀಪಿಕಾ ಪಡುಕೋಣೆ

**ಬರೆದರು ಹೊಸ ವಿಶ್ವ ದಾಖಲೆ**

ದೀಪಿಕಾ ಪಡುಕೋಣೆ ದೀಪಿಕಾ ಪಡುಕೋಣೆ ಹೊಸ ವಿಶ್ವ ದಾಖಲೆಯನ್ನು ಸೃಷ್ಟಿಸಿದ್ದಾರೆ. ಆ ಮೂಲಕ ತಾವು ಭಾರತದ ಮಾತ್ರವಲ್ಲ ವಿಶ್ವದ ಸ್ಟಾರ್ ನಟಿಯರಲ್ಲಿ ಒಬ್ಬರು ಎಂದು ಸಾಬೀತು ಮಾಡಿದ್ದಾರೆ. ಅಂದಹಾಗೆ ದೀಪಿಕಾ ಪಡುಕೋಣೆ ಮಾಡಿರುವ ವಿಶ್ವದಾಖಲೆ ಏನು ರೊನಾಲ್ಡೊ ಅನ್ನೂ ಸಹ ನಟಿ ದೀಪಿಕಾ ಹಿಂದಿಕ್ಕಿದ್ದು ಹೇಗೆ ಇಲ್ಲಿದೆ ಮಾಹಿತಿ. ದೀಪಿಕಾ ಪಡುಕೋಣೆ ಭಾರತದ ಸ್ಟಾರ್ ನಟಿ. ತಾಯ್ತನಕ್ಕಾಗಿ ಕೆಲ ಸಮಯ ಚಿತ್ರರಂಗದಿಂದ ಬಿಡುವು ಪಡೆದಿದ್ದ ಈ ನಟಿ ಇದೀಗ ಮತ್ತೆ ಚಿತ್ರರಂಗಕ್ಕೆ ರೀ ಎಂಟ್ರಿ ನೀಡುತ್ತಿದ್ದಾರೆ. ಪ್ರಸ್ತುತ ಅವರು ಶಾರುಖ್ ಖಾನ್ ಜೊತೆಗೆ 'ಕಿಂಗ್' ಸಿನಿಮಾನಲ್ಲಿ ನಟಿಸುತ್ತಿದ್ದಾರೆ. ಅದರ ಜೊತೆಗೆ ಅಟ್ಲಿ ನಿರ್ದೇಶಿಸಿ ಅಲ್ಲು ಅರ್ಜುನ್ ನಾಯಕನಾಗಿ ನಟಿಸುತ್ತಿರುವ ಹೊಸ ಸಿನಿಮಾನಲ್ಲಿಯೂ ನಾಯಕಿಯಾಗಿ ನಟಿಸುತ್ತಿದ್ದಾರೆ. ಇದೆಲ್ಲದರ ಜೊತೆಗೆ ದೀಪಿಕಾ ಪಡುಕೋಣೆ ಹೊಸ ವಿಶ್ವ ದಾಖಲೆಯನ್ನು ಸೃಷ್ಟಿಸಿದ್ದಾರೆ. ಆ ಮೂಲಕ ತಾವು ಭಾರತದ ಮಾತ್ರವಲ್ಲ ವಿಶ್ವದ ಸ್ಟಾರ್ ನಟಿಯರಲ್ಲಿ ಒಬ್ಬರು ಎಂದು ಸಾಬೀತು ಮಾಡಿದ್ದಾರೆ. ದೀಪಿಕಾ ಪಡುಕೋಣೆ ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ಸುಮಾರು ಎಂಟು ಕೋಟಿ ಫಾಲೋವರ್‌ಗಳನ್ನು ದೀಪಿಕಾ ಪಡುಕೋಣೆ ಹೊಂದಿದ್ದಾರೆ. ತಮ್ಮ ಚಿತ್ರಗಳು, ಫೋಟೋಶೂಟ್, ಸಿನಿಮಾ ಮಾಹಿತಿ ಮತ್ತು ಜಾಹೀರಾತುಗಳನ್ನು ಸಹ ಹಂಚಿಕೊಳ್ಳುತ್ತಿರುತ್ತಾರೆ. ಇತ್ತೀಚೆಗೆ ನಟಿ ದೀಪಿಕಾ ಪಡುಕೋಣೆ ಹಂಚಿಕೊಂಡಿದ್ದ ರೀಲ್ ಒಂದು ಈಗ ವಿಶ್ವದಲ್ಲೇ ಅತಿ ಹೆಚ್ಚು ವೀಕ್ಷಣೆಗೆ ಒಳಪಟ್ಟ ರೀಲ್ಸ್ ಎನಿಸಿಕೊಂಡಿದೆ. ಹಿಲ್ಟನ್ ಹೋಟೆಲಿನ ರಾಯಭಾರಿ ಆಗಿರುವ ದೀಪಿಕಾ ಪಡುಕೋಣೆ ಇತ್ತೀಚೆಗಷ್ಟೆ 'ಹಿಲ್ಟನ್'ನ ಜಾಹೀರಾತಿನ ವಿಡಿಯೋ ಒಂದನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದರು.

# ಸಂತೋಷ್ ಬಾಲರಾಜ್ ನಿಧನ



'ಕರಿಯ 2', 'ಗಣಪ', 'ಕೆಂಪ' ಇನ್ನೂ ಕೆಲ ಸಿನಿಮಾಗಳಲ್ಲಿ ನಟಿಸಿರುವ ನಟ ಸಂತೋಷ್ ಬಾಲರಾಜ್ ನಿಧನ ಹೊಂದಿದ್ದರು. ಕಳೆದ ಕೆಲ ದಿನಗಳಿಂದಲೂ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಜಾಂಡೀಸ್ ಆಗಿತ್ತು. ಬನಶಂಕರಿಯ ಸಾಗರ್ ಅಪೊಲೊ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದರು. 'ಕರಿಯ 2', 'ಗಣಪ' ಸೇರಿದಂತೆ ಇನ್ನೂ ಕೆಲ ಸಿನಿಮಾಗಳಲ್ಲಿ ನಟಿಸಿದ್ದ ನಟ ಸಂತೋಷ್ ಬಾಲರಾಜ್ ನಿಧನ ಹೊಂದಿದ್ದಾರೆ. ಅವರಿಗೆ 38 ವರ್ಷ ವಯಸ್ಸಾಗಿತ್ತು. ಕಳೆದ ಕೆಲ ದಿನಗಳಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಕೆಲ ದಿನಗಳ ಹಿಂದಷ್ಟೆ ಬನಶಂಕರಿಯ ಸಾಗರ್ ಅಪೋಲೊ ಆಸ್ಪತ್ರೆಗೆ ಅವರು ಚಿಕಿತ್ಸೆಗಾಗಿ ದಾಖಲಾಗಿದ್ದರು. ಅವರ ಆರೋಗ್ಯ ಪರಿಸ್ಥಿತಿ ಗಂಭೀರವಾಗಿದ್ದ ಕಾರಣ, ತೀವ್ರ ನಿಗಾ ಘಟಕದಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಸಂತೋಷ್ ಬಾಲರಾಜ್ ನಿಧನ ಹೊಂದಿದ್ದಾರೆ. ಸಂತೋಷ್ ಬಾಲರಾಜ್ ಅವರಿಗೆ ಜಾಂಡೀಸ್ ಆಗಿತ್ತು. ಜಾಂಡೀಸ್ ಖಾಯಿಲೆ ಬಾಲರಾಜ್ ಅವರ ದೇಹವನ್ನೆಲ್ಲ ಆವರಿಸಿತ್ತು. ಕಳೆದ ಎರಡು ದಿನದಿಂದಲೂ ಅವರಿಗೆ ಕೃತಕ ಉಸಿರಾಟದ ವ್ಯವಸ್ಥೆ ಮಾಡಲಾಗಿತ್ತು. ಯಕೃತ್ತು ಮತ್ತು ಕಿಡ್ನಿಯ ಸಮಸ್ಯೆಯಿಂದಾಗಿ ಅವರಿಗೆ ಜಾಂಡೀಸ್ ತಗುಲಿತ್ತು. ಈ ಮೊದಲೂ ಸಹ ಸಂತೋಷ್ ಬಾಲರಾಜ್ ಅವರು ಜಾಂಡೀಸ್‌ನಿಂದ ಬಳಲಿದ್ದರು. ಆಗ ಚಿಕಿತ್ಸೆ ಪಡೆದುಕೊಂಡಿದ್ದರು. ಆದರೆ ಈ ಬಾರಿ ಪರಿಸ್ಥಿತಿ ಕೈ ಮೀರಿ ಹೋಗಿತ್ತು. ಸಂತೋಷ್ ಅವರಿಗೆ ಮದುವೆ ಆಗಿರಲಿಲ್ಲ. ತಾಯಿ ಮತ್ತು ಸಹೋದರಿ ಇದ್ದರು. 'ಕೆಂಪ' ಸಿನಿಮಾ ಮೂಲಕ ಸಂತೋಷ್ ಬಾಲಕರಾಜ್ ಚಿತ್ರರಂಗ ಪ್ರವೇಶಿಸಿದ್ದರು.

ಆ ಬಳಿಕ ಅವರು 'ಕರಿಯ 2', 'ಜನ್ಮ' ಮತ್ತು 'ಗಣಪ' ಸಿನಿಮಾಗಳಲ್ಲಿ ನಟಿಸಿದರು. ದರ್ಶನ್ ನಟನೆಯ 'ಕರಿಯ' ಸಿನಿಮಾದ ನಿರ್ಮಾಪಕ ಅನೆಕಲ್ ಬಾಲರಾಜ್ ಅವರ ಪುತ್ರ ಸಂತೋಷ್ ಬಾಲರಾಜ್, ಆನೆಕಲ್ ಬಾಲರಾಜ್ ಅವರು ಕಳೆದ ವರ್ಷವಷ್ಟೆ ನಿಧನ ಹೊಂದಿದರು. ಈಗ ಸಂತೋಷ್ ಸಹ ಇಹಲೋಕ ತ್ಯಜಿಸಿದ್ದಾರೆ. ಸಂತೋಷ್ ನಟನೆಯ 'ಬರ್ಕ್ಲಿ' ಮತ್ತು 'ಸತ್ಯಂ' ಸಿನಿಮಾಗಳು ಬಿಡುಗಡೆ ಆಗಬೇಕಿವೆ.

# 7 ವರ್ಷಗಳಿಂದ ಗೆಲುವು ಮರೀಚಿಕೆ 2ನೇ ಬಾರಿ ಬಾಝ್‌ಬಾಲ್ ಬೌಲ್ಡ್

ಟೆಸ್ಟ್ ಕ್ರಿಕೆಟ್‌ನಲ್ಲಿ ಬಾಝ್‌ಬಾಲ್ ಆಟದೊಂದಿಗೆ ಸಂಚಲನ ಸೃಷ್ಟಿಸಿರುವ ಇಂಗ್ಲೆಂಡ್ ತಂಡವು ಕಳೆದ 7 ವರ್ಷಗಳಿಂದ ಟೆಸ್ಟ್ ಸರಣಿ ಗೆದ್ದಿಲ್ಲ. ಅದರಲ್ಲೂ ಎರಡು ಬಾರಿ ಬಾಝ್‌ಪಡೆ ಭಾರತದ ವಿರುದ್ಧ ಮಂಡಿಯೂರಿದೆ. 2023 ರಲ್ಲಿ ನಡೆದ ಟೆಸ್ಟ್ ಸರಣಿಯನ್ನು 4-1 ಅಂತರದಿಂದ ಸೋತಿದ್ದ ಇಂಗ್ಲೆಂಡ್ ತಂಡದ



**ಇಂಗ್ಲೆಂಡ್ ಸರಣಿ ಗೆದ್ದಿರುವುದು ಒಮ್ಮೆ ಮಾತ್ರ**

ವಿರುದ್ಧ ಈ ಬಾರಿ ಟೀಮ್ ಇಂಡಿಯಾ ಡ್ರಾ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿ ಶುರುವಾಗಿ 93 ವರ್ಷಗಳಾಗಿವೆ. 1932 ರಿಂದ ಆರಂಭವಾದ ಉಭಯ ತಂಡಗಳ ನಡುವಣ ಕ್ರಿಕೆಟ್ ಕದನದಲ್ಲಿ ಮೊದಲ ಗೆಲುವು ದಾಖಲಿಸಲು ಟೀಮ್ ಇಂಡಿಯಾ ತೆಗೆದುಕೊಂಡಿದ್ದು ಬರೋಬ್ಬರಿ 20 ವರ್ಷಗಳು. ಅಂದರೆ 1952 ರಲ್ಲಿ ಇಂಗ್ಲೆಂಡ್ ವಿರುದ್ಧ ಮೊದಲ ಜಯ ಸಾಧಿಸಿ ಭಾರತ ತಂಡ ಐತಿಹಾಸಿಕ ಸಾಧನೆ ಮಾಡಿತ್ತು. ಇನ್ನು ಆಂಗ್ಲರ ವಿರುದ್ಧ ಸರಣಿ ಗೆಲ್ಲಲು ಟೀಮ್ ಇಂಡಿಯಾ ಬರೋಬ್ಬರಿ 30 ವರ್ಷಗಳವರೆಗೆ ಕಾಯಬೇಕಾಗಿ ಬಂತು.

1962ರಲ್ಲಿ ಭಾರತದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯನ್ನು ಟೀಮ್ ಇಂಡಿಯಾ 2-0 ಅಂತರದಿಂದ ಗೆದ್ದುಕೊಂಡಿದ್ದರು. ಅಂದು ಭಾರತ ತಂಡವನ್ನು ಮುನ್ನಡೆಸಿದ ನಾಯಕ ನಾರಿ ಕಾಂಟ್ರಾಕ್ಟರ್. ಇದಾದ ಬಳಿಕ ಭಾರತ-ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯಲ್ಲಿ ಹಲವು ಏರಿಳಿತಗಳು ಕಂಡಿದೆ.

ಹಲವು ಬಾರಿ ಇಂಗ್ಲೆಂಡ್ ಜಯ ಸಾಧಿಸಿದರೆ, ಇನ್ನು ಕೆಲವು ಭಾರತ ಗೆಲುವು ದಾಖಲಿಸಿದೆ. ಅದರಲ್ಲೂ 2011 ರಿಂದ ಇಂಗ್ಲೆಂಡ್ ಸತತ ಮೂರು ಬಾರಿ ಟೀಮ್ ಇಂಡಿಯಾ ವಿರುದ್ಧ ಸರಣಿ ಜಯಸಿತ್ತು. ಆದರೆ ವಿರಾಟ್ ಕೊಹ್ಲಿ ನಾಯಕರಾದ ಬಳಿಕ ಈ ಗೆಲುವಿನ ನಾಗಲೋಟಕ್ಕೆ ಬ್ರೇಕ್ ಬಿತ್ತು.

2014ರ ಬಳಿಕ ಟೀಮ್ ಇಂಡಿಯಾ ವಿರುದ್ಧ ಇಂಗ್ಲೆಂಡ್ ಸರಣಿ ಗೆದ್ದಿರುವುದು ಒಮ್ಮೆ ಮಾತ್ರ. ಅದು ಸಹ 2018 ರಲ್ಲಿ. ಇದಾದ ಬಳಿಕ ಭಾರತದಲ್ಲಾಗಲಿ, ಇಂಗ್ಲೆಂಡ್‌ನಲ್ಲಾಗಲಿ ಟೀಮ್ ಇಂಡಿಯಾ ವಿರುದ್ಧ ಸರಣಿ ಗೆಲ್ಲಲು ಆಂಗ್ಲರಿಗೆ ಸಾಧ್ಯವಾಗಿಲ್ಲ.

ಅದರಲ್ಲೂ ಬಾಝ್‌ಬಾಲ್ ಆಟದೊಂದಿಗೆ ಹೊಸ ಸಂಚಲನ ಸೃಷ್ಟಿಸಿರುವ ಇಂಗ್ಲೆಂಡ್ ಇನ್ನು ಸಹ ಟೀಮ್ ಇಂಡಿಯಾ ವಿರುದ್ಧ ಸರಣಿ ಗೆದ್ದಿಲ್ಲ ಎಂಬುದು ಇಲ್ಲಿ ಉಲ್ಲೇಖಾರ್ಹ.

# 100 ಎಸೆತಗಳು, 8 ತಂಡಗಳು: ದಿ ಹಂಡ್ರೆಡ್ ಲೀಗ್ ಇಂದಿನಿಂದ ಶುರು



ದಿ ಹಂಡ್ರೆಡ್ ಲೀಗ್ ಶುರುವಾಗಿದ್ದು 2021 ರಲ್ಲಿ. ಈವರೆಗೆ ನಾಲ್ಕು ಸೀಸನ್ ಆಡಲಾಗಿದೆ. ಮೊದಲ ಸೀಸನ್‌ನಲ್ಲಿ ಸದರ್ನ್ ಬ್ರೇವ್ ಚಾಂಪಿಯನ್ ಪಟ್ಟ ಅಲಂಕರಿಸಿದರೆ, ದ್ವಿತೀಯ ಸೀಸನ್‌ನಲ್ಲಿ ಟ್ರೆಂಟ್ ರಾಕೆಟ್ಸ್ ಕಿರೀಟ ಮುಡಿಗೇರಿಸಿಕೊಂಡಿತ್ತು. ಇನ್ನು 2023 ಮತ್ತು 2024 ರಲ್ಲಿ ಓವಲ್ ಇನ್ವಿನ್ಸಿಬಲ್ಸ್ ತಂಡ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದೆ. ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಆಯೋಜಿಸುವ ದಿ ಹಂಡ್ರೆಡ್ ಲೀಗ್ ಇಂದಿನಿಂದ (ಆಗಸ್ಟ್ 5) ಶುರುವಾಗಲಿದೆ.

ಈ ಟೂರ್ನಿಯಲ್ಲಿ ಒಟ್ಟು 8 ತಂಡಗಳು ಕಣಕ್ಕಿಳಿಯಲಿದ್ದು, ಮೊದಲ ಸುತ್ತಿನಲ್ಲಿ ಪ್ರತಿ ತಂಡಗಳು 8 ಪಂದ್ಯಗಳನ್ನಾಡಲಿವೆ. ಈ ಎಂಟು ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳನ್ನು ಹೋಮ್‌ಗ್ರೌಂಡ್‌ನಲ್ಲಿ ಮತ್ತು ನಾಲ್ಕು ಪಂದ್ಯಗಳನ್ನು ಅವೇ ಗ್ರೌಂಡ್‌ನಲ್ಲಿ (ಎದುರಾಳಿ ತಂಡದ ಹೋಮ್‌ಗ್ರೌಂಡ್) ಆಡಲಾಗುತ್ತದೆ. ಇನ್ನು ಟೂರ್ನಿಯು ಟಿ20 ಸ್ವರೂಪವನ್ನು ಹೋಲುತ್ತಿದ್ದರೂ, ನಿಯಮಗಳಲ್ಲಿ ಹಲವು ಬದಲಾವಣೆಗಳಿರುವುದು ವಿಶೇಷ.

**ಏನಿದು ಹಂಡ್ರೆಡ್ ಲೀಗ್:** ದಿ ಹಂಡ್ರೆಡ್ ಲೀಗ್ ಎಂಬುದು ಟಿ20 ಮಾದರಿಯಲ್ಲೇ ಆಯೋಜಿಸಲಾಗುವ ಚುಟುಕು ಟೂರ್ನಿ. ಆದರೆ ಇಲ್ಲಿ 20 ಓವರ್‌ಗಳಿರುವುದಿಲ್ಲ ಎಂಬುದಷ್ಟೇ ವ್ಯತ್ಯಾಸ. ಬದಲಾಗಿ 100 ಎಸೆತಗಳ ಪಂದ್ಯವಾಗಿರಲಿದೆ. ಹೀಗಾಗಿಯೇ ಈ ಟೂರ್ನಿಗೆ ದಿ ಹಂಡ್ರೆಡ್ ಎಂದು ಹೆಸರಿಡಲಾಗಿದೆ.

**ದಿ ಹಂಡ್ರೆಡ್ ಲೀಗ್‌ನ ನಿಯಮಗಳು:** ದಿ ಹಂಡ್ರೆಡ್ ಲೀಗ್‌ನಲ್ಲಿ ಒಂದು ಇನ್ನಿಂಗ್ಸ್‌ನಲ್ಲಿ 100 ಎಸೆತಗಳನ್ನು ಬೌಲಿಂಗ್ ಮಾಡಲಾಗುತ್ತದೆ. ಅಂದರೆ ಟಿ20 ಕ್ರಿಕೆಟ್‌ನಲ್ಲಿ 20 ಓವರ್‌ನಂತೆ 120 ಎಸೆತಗಳಾದರೆ ಇಲ್ಲಿ ತಲಾ 100 ಎಸೆತಗಳಿರಲಿವೆ. ಈ ಲೀಗ್‌ನಲ್ಲಿ ಬೌಲರ್ ಸತತ 5 ಅಥವಾ 10 ಬೌಲ್‌ಗಳನ್ನು ಮಾಡಬಹುದು. ಅಂದರೆ ಇಲ್ಲಿ ಓವರ್ ಲೆಕ್ಕಚಾರವು 5 ಎಸೆತಗಳಿಗೆ ಸೀಮಿತವಾಗಿರುತ್ತದೆ. ಆದರೆ ಒಬ್ಬ ಬೌಲರ್‌ಗೆ ಸತತ 10 ಎಸೆತಗಳನ್ನು ಎಸೆಯಲು ಅವಕಾಶವಿದೆ.

ಒಂದು ಇನಿಂಗ್ಸ್‌ನಲ್ಲಿ ಒಬ್ಬ ಬೌಲರ್‌ಗೆ 20 ಎಸೆತಗಳು ಮಾತ್ರ ಇರಲಿದೆ. ಈ ಇಪ್ಪತ್ತು ಎಸೆತಗಳನ್ನು 2 ಬಾರಿ ಬೌಲಿಂಗ್ ಮಾಡಿ ಮುಗಿಸಬಹುದು. ಅಂದರೆ ಮೊದಲ ಓವರ್‌ನಲ್ಲಿ ಸತತ 10 ಎಸೆತ ಹಾಗೂ 2ನೇ ಓವರ್‌ನಲ್ಲಿ ಸತತ 10 ಎಸೆತ ಎಸೆಯಬಹುದು. ಇದರ ಹೊರತಾಗಿ ಓವರ್ ಲೆಕ್ಕಚಾರದಲ್ಲಿ 5 ಎಸೆತಗಳಂತೆ ನಾಲ್ಕು ಓವರ್ ಮಾಡಬಹುದು. ಸಾಮಾನ್ಯವಾಗಿ ಕ್ರಿಕೆಟ್‌ನಲ್ಲಿ ಒಂದು ಓವರ್ ಬಳಿಕ ಬ್ಯಾಟ್ಸ್‌ಮನ್ ಸ್ಟ್ರೈಕ್ ಬದಲಿಸಬೇಕು. ಆದರೆ ದಿ ಹಂಡ್ರೆಡ್ ಲೀಗ್‌ನಲ್ಲಿ 10 ಎಸೆತಗಳ ಬಳಿಕ ಸ್ಟ್ರೈಕ್ ಬದಲಿಸಿದರೆ ಸಾಕು.

ಪ್ರತಿ ತಂಡಕ್ಕೆ ಪ್ರಾರಂಭದಲ್ಲಿ 25 ಎಸೆತಗಳ ಪವರ್‌ಪ್ಲೇ ನೀಡಲಾಗುತ್ತದೆ. ಈ ವೇಳೆ 30 ಯಾರ್ಡ್ ಹೊರಗೆ ಇಬ್ಬರು ಫೀಲ್ಡರ್‌ಗಳಿಗೆ ಮಾತ್ರ ಅವಕಾಶ ಇರಲಿದೆ. ದಿ ಹಂಡ್ರೆಡ್ ಲೀಗ್‌ನಲ್ಲಿ ಒಟ್ಟು 8 ತಂಡಗಳು ಪಾಲ್ಗೊಳ್ಳುತ್ತಿದ್ದು, ಒಂದು ತಂಡದಲ್ಲಿ 15 ಮಂದಿಗೆ ಮಾತ್ರ ಅವಕಾಶ ಇರಲಿದೆ.

8 ತಂಡಗಳಲ್ಲಿ ಟಾಪ್ 3 ಬರುವ ತಂಡಗಳು ಪ್ರಶಸ್ತಿಗಾಗಿ ಕಾದಾಟ ನಡೆಸಲಿದೆಅಂದರೆ ಟಾಪ್ 1 ತಂಡದ ಜೊತೆ ಆಡಲು 2ನೇ ಮತ್ತು 3ನೇ ತಂಡ ಎಲಿಮಿನೇಟರ್ ಪಂದ್ಯವನ್ನಾಡಲಿದೆ. ಇದರಲ್ಲಿ ಗೆದ್ದ ತಂಡ ಫೈನಲ್ ಆಡಲಿದೆ.

# ಡಾನ್ ವಿಶ್ವ ದಾಖಲೆ ಶೇಕ್ ಮಾಡಿದ ರೂಟ್

ಇಂಗ್ಲೆಂಡ್‌ನ ಟೆಸ್ಟ್ ಸ್ಪೆಷಲಿಸ್ಟ್ ಜೋ ರೂಟ್ ಮತ್ತೊಂದು ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಈ ಬಾರಿ ಭರ್ಜರಿ ದಾಖಲೆ ನಿರ್ಮಿಸಿರುವುದು ಕ್ರಿಕೆಟ್ ದಂತಕಥೆ ಡಾನ್ ಬ್ರಾಡ್ಮನ್ ಅವರ ವರ್ಲ್ಡ್ ರೆಕಾರ್ಡ್ ಅನ್ನು ಸರಿಗಟ್ಟುವ ಮೂಲಕ ಎಂಬುದು ವಿಶೇಷ. ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ನಡೆದ ಭಾರತದ ವಿರುದ್ಧದ 5ನೇ ಟೆಸ್ಟ್ ಪಂದ್ಯದ ದ್ವಿತೀಯ ಇನಿಂಗ್ಸ್‌ನಲ್ಲಿ ಜೋ ರೂಟ್ 105 ರನ್ ಕಲೆಹಾಕಿದ್ದರು. ಈ ಶತಕದೊಂದಿಗೆ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ತವರಿನಲ್ಲಿ ಎದುರಾಳಿ ತಂಡವೊಂದರ ವಿರುದ್ಧ 2000+ ರನ್ ಕಲೆಹಾಕಿದ ವಿಶ್ವದ 2ನೇ ಬ್ಯಾಟರ್ ಎಂಬ ವಿಶ್ವ ದಾಖಲೆಯನ್ನು ಜೋ ರೂಟ್ ತಮ್ಮದಾಗಿಸಿಕೊಂಡಿದ್ದಾರೆ.

ಅಲ್ಲದೆ ಈ ಸಾಧನೆ ಮಾಡಿದ ಇಂಗ್ಲೆಂಡ್‌ನ ಏಕೈಕ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಜೋ ರೂಟ್‌ಗೂ ಮುನ್ನ ತವರಿನಲ್ಲಿ ತಂಡ ಟೆಸ್ಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ ಬರೆದವರು ಡಾನ್ ಬ್ರಾಡ್ಮನ್. ಆಸ್ಟ್ರೇಲಿಯಾದ ದಂತಕಥೆ ಇಂಗ್ಲೆಂಡ್ ವಿರುದ್ಧ ಆಸೀಸ್ ಪಿಚ್‌ನಲ್ಲಿ ಬರೋಬ್ಬರಿ 2354 ರನ್ ಗಳಿಸಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಇದೀಗ ಈ ಸಾಧನೆ ಮಾಡಿದ 2ನೇ ಬ್ಯಾಟರ್ ಆಗಿ ಜೋ ರೂಟ್ ಹೊರಹೊಮ್ಮಿದ್ದಾರೆ. ಜೋ ರೂಟ್ ಭಾರತದ ವಿರುದ್ಧ ಇಂಗ್ಲೆಂಡ್‌ನಲ್ಲಿ ಈವರೆಗೆ 2111 ರನ್ ಕಲೆಹಾಕಿದ್ದಾರೆ. ಈ ಮೂಲಕ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ತವರಿನಲ್ಲಿ ತಂಡವೊಂದರ ಅತ್ಯಧಿಕ ರನ್ ಕಲೆಹಾಕಿದ ವಿಶ್ವದ 2ನೇ ಬ್ಯಾಟರ್ ಎಂಬ ದಾಖಲೆಯನ್ನು ಸರಿಗಟ್ಟಿದ್ದಾರೆ.



# ರನ್ ರಾಶಿಯೊಂದಿಗೆ ವಿಶ್ವ ದಾಖಲೆ ನಿರ್ಮಿಸಿದ ಟೀಮ್ ಇಂಡಿಯಾ

ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾ ಹಲವು ದಾಖಲೆಗಳನ್ನು ನಿರ್ಮಿಸಿದೆ. ಈ ದಾಖಲೆಗಳೊಂದಿಗೆ 97 ವರ್ಷಗಳ ಹಳೆಯ ವಿಶ್ವ ದಾಖಲೆಯೊಂದನ್ನು ಸಹ ಅಳಿಸಿ ಹಾಕಿದ್ದಾರೆ. ಈ ಮೂಲಕ 5 ಮ್ಯಾಚ್‌ಗಳ ಟೆಸ್ಟ್ ಸರಣಿವೊಂದರಲ್ಲಿ ಅತ್ಯಧಿಕ ರನ್ ಪೇರಿಸಿದ ತಂಡವೆಂಬ ಹೆಗ್ಗಳಿಕೆಯನ್ನು ಟೀಮ್ ಇಂಡಿಯಾ ತನ್ನದಾಗಿಸಿಕೊಂಡಿದೆ. ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿ ಮುಗಿದಿದೆ. 5 ಪಂದ್ಯಗಳ ಸರಣಿಯನ್ನು 2-2 ಅಂತರದಿಂದ ಕೊನೆಗೊಳಿಸುವಲ್ಲಿ ಟೀಮ್ ಇಂಡಿಯಾ ಯಶಸ್ವಿಯಾಗಿದೆ. ಈ ಸರಣಿಯುದ್ದಕ್ಕೂ ಭಾರತದ ಪರ ಬ್ಯಾಟರ್‌ಗಳು ಭರ್ಜರಿ ಪ್ರದರ್ಶನ ನೀಡಿದ್ದಾರೆ. ಈ ಭರ್ಜರಿ ಪ್ರದರ್ಶನೊಂದಿಗೆ ಟೀಮ್ ಇಂಡಿಯಾ ಬ್ಯಾಟ್ಸ್‌ಮನ್‌ಗಳು ಹೊಸ ಇತಿಹಾಸವನ್ನು ಸಹ ರಚಿಸಿದ್ದಾರೆ. ಹೌದು, ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಟೀಮ್ ಇಂಡಿಯಾ ಇದೇ ಮೊದಲ ಬಾರಿಗೆ ಸರಣಿವೊಂದರಲ್ಲಿ 3500+ ರನ್ ಕಲೆಹಾಕಿದೆ. ಅಂದರೆ 5 ಪಂದ್ಯಗಳ ಮೂಲಕ ಭಾರತೀಯ ಬ್ಯಾಟರ್‌ಗಳು ಕಲೆಹಾಕಿದ



**ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ**

ಒಟ್ಟು ಸ್ಕೋರ್ ಬರೋಬ್ಬರಿ 3809 ರನ್‌ಗಳು. ಈ ಮೂಲಕ 1979 ರಲ್ಲಿ ನಿರ್ಮಾಣವಾಗಿದ್ದ ದಾಖಲೆಯನ್ನು ಅಳಿಸಿ ಹಾಕಿದ್ದಾರೆ. 1979 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಲ್ಲಿ ಟೀಮ್ ಇಂಡಿಯಾ 3270 ರನ್ ಕಲೆಹಾಕಿದ್ದರು. ಆದರೆ ಅದು 6 ಪಂದ್ಯಗಳ ಸರಣಿಯಾಗಿತ್ತು. ಈ ಬಾರಿ ಟೀಮ್ ಇಂಡಿಯಾ 5 ಪಂದ್ಯಗಳ ಸರಣಿಯ ಮೂಲಕ ಒಟ್ಟು 3809 ರನ್‌ಗಳನ್ನು ಕಲೆಹಾಕಿದ್ದಾರೆ. ಈ ಮೂಲಕ ಟೆಸ್ಟ್ ಇತಿಹಾಸದಲ್ಲಿ ಸರಣಿವೊಂದರಲ್ಲಿ 3800+ ರನ್ ಕಲೆಹಾಕಿದ ವಿಶ್ವದ 2ನೇ ತಂಡ ಎನಿಸಿಕೊಂಡಿದೆ. ಟೆಸ್ಟ್ ಸರಣಿವೊಂದರಲ್ಲಿ ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ ಆಸ್ಟ್ರೇಲಿಯಾ ತಂಡದ ಹೆಸರಿನಲ್ಲಿದೆ. ಆಸೀಸ್ ಪಡೆ 1989 ರಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಆಯಶಸ್ ಸರಣಿಯಲ್ಲಿ ಬರೋಬ್ಬರಿ 3877 ರನ್ ಕಲೆಹಾಕಿದ್ದರು. ಆದರೆ ಇದು ಪಂದ್ಯಗಳ ಸರಣಿಯಾಗಿತ್ತು ಎಂಬುದು ಇಲ್ಲಿ ಉಲ್ಲೇಖಾರ್ಹ. ಸರಣಿವೊಂದರಲ್ಲಿ ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ ಟೀಮ್ ಇಂಡಿಯಾ ಪಾಲಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966